
-ಹೊಸ್ತೋಟ ಮಂಜುನಾಥ ಭಾಗ್ವತ



# ಉಲ್ಲಾಸದತ್ತ ವಿಜಯ

## ಹಾಗೂ ಇತರ ಯಕ್ಷಗಾನ ಪ್ರಸಂಗಗಳು

ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ,
ಬೆಂಗಳೂರು

# ಉಲ್ಲಾಸದತ್ತ ವಿಜಯ

## ಹಾಗೂ ಇತರ ಯಕ್ಷಗಾನ ಪ್ರಸಂಗಗಳು

ರಚನೆ :

**ಹೊಸ್ತೋಟ ಮಂಜುನಾಥ ಭಾಗ್ವತ**

ಪ್ರಕಾಶಕರು :

**ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ**

ಕನ್ನಡ ಭವನ, 2ನೇ ಮಹಡಿ, ಜೆ. ಸಿ. ರಸ್ತೆ,

ಬೆಂಗಳೂರು – 02

ದೂರವಾಣಿ : 080 – **22113146**

Email ID : kybabangalore@gmail.com

**Ullasandatta Vijaya Hagu Itara Yakshagana Prasangagalu:** Written and Edited by Hostota Manjunatha Bhagwata , Published by S. H. Shivarudrappa, The Registrar, Karnataka Yakshagana Bayalata Academy, Kannada Bhavana, J. C. Road, Bengaluru - 560 002.

(c) ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ

| | | |
|---|---|---|
| ಪುಟಗಳು | : | viii + ೧೦೬ |
| ಬೆಲೆ | : | ರೂ. ೮೦/– |
| ಮೊದಲ ಮುದ್ರಣ | : | ೨೦೧೭ |
| ಪ್ರತಿಗಳು | : | ೧೦೦೦ |

| | | |
|---|---|---|
| Pages | : | viii + 106 |
| Price | : | Rs. 80/- |
| First impression | : | 2017 |
| Copies | : | 1000 |

– ಪ್ರಧಾನ ಸಂಪಾದಕರು–

**ಬೆಳಗಲ್ಲು ವೀರಣ್ಣ**

ಅಧ್ಯಕ್ಷರು, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಬೆಂಗಳೂರು

– ಲೇಖಕರು –

**ಹೊಸ್ತೋಟ ಮಂಜುನಾಥ ಭಾಗ್ವತ**

– ಪ್ರಕಾಶಕರು –

**ಎಸ್. ಹೆಚ್. ಶಿವರುದ್ರಪ್ಪ**

ರಿಜಿಸ್ಟ್ರಾರ್

ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಕನ್ನಡ ಭವನ,

ಜೆ. ಸಿ. ರಸ್ತೆ, ಬೆಂಗಳೂರು– 560 002

– ಮುದ್ರಕರು –

**ದಿ ಚೇತನಾ ಪ್ರಿಂಟಿಂಗ್ ಆ್ಯಂಡ್ ಪಬ್ಲಿಷಿಂಗ್ ಕೋ–ಆಪ್. ಸೊಸೈಟಿ ಲಿ.,**

ಸಿ. ಪಿ. ಬಜಾರ್, ಶಿರಸಿ – 581 402

✆: 08384–227002

# ಅಧ್ಯಕ್ಷರ ನುಡಿ

ನಮ್ಮ ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯು ಕರ್ನಾಟಕದಾದ್ಯಂತ ವ್ಯಾಪಿಸಿರುವ ಯಕ್ಷಗಾನ, ಬಯಲಾಟ ಪ್ರಕಾರಗಳು, ಗೊಂಬೆಯಾಟ ವೈವಿಧ್ಯಗಳು ಮುಂತಾದ ಪಾರಂಪರಿಕ ರಂಗಕಲೆಗಳನ್ನು ತನ್ನ ತೆಕ್ಕೆಯಲ್ಲಿಟ್ಟುಕೊಂಡು ಅವುಗಳ ಪೋಷಣ, ಸಂವರ್ಧನ, ಪ್ರದರ್ಶನ, ಪ್ರಸಾರಗಳಿಗಾಗಿ ಕೆಲಸ ಮಾಡುತ್ತಿದೆ. ನಮ್ಮ ಪ್ರಯತ್ನಗಳಲ್ಲಿ ತತ್ಕಾಲೀನ ಹಾಗೂ ದೀರ್ಘಕಾಲೀನ ಪರಿಣಾಮಗಳನ್ನುಂಟುಮಾಡುವ ಯೋಜನೆಗಳು ಜತೆಜತೆಯಾಗಿವೆ. ಸಂಭ್ರಮಗಳು, ಉತ್ಸವಗಳು, ಪ್ರದರ್ಶನಗಳು ಇರುವಂತೆಯೇ ತರಬೇತಿಗಳು, ಕಮ್ಮಟಗಳು, ವಿಚಾರಸಂಕಿರಣಗಳು, ಮುದ್ರಣ–ಪ್ರಕಾಶನಗಳೂ, ದಾಖಲಾತಿ ಕಾರ್ಯಗಳೂ ನಡೆದಿರುತ್ತವೆ. ಇವುಗಳಡಿಯಲ್ಲಿ ಹಸ್ತಪ್ರತಿರೂಪದ ಯಕ್ಷಗಾನ ಬಯಲಾಟಗಳ ಪ್ರಸಂಗ ಪಠ್ಯಗಳ ಮುದ್ರಣ ಪ್ರಕಾಶನಗಳೂ ಪಾಲು ಪಡೆದಿವೆ.

ಈ ಬಾರಿ ನಮ್ಮ ಅಕಾಡೆಮಿಯ ವತಿಯಿಂದ ಯಕ್ಷಗಾನ ಹಾಗೂ ಬಯಲಾಟ ಕ್ಷೇತ್ರಗಳ ಸುಮಾರು ೩೦–೩೫ ಪ್ರಸಂಗಗಳನ್ನು ತಜ್ಞರ ಸಮಿತಿಯ ಮೂಲಕ ಆಯ್ಕೆಮಾಡಿ ಮುದ್ರಿಸಿ ಪ್ರಕಟಿಸುತ್ತಿದ್ದೇವೆ.

ಇಲ್ಲಿ ಯಕ್ಷಗಾನ ಕ್ಷೇತ್ರದ ಶ್ರೇಷ್ಠ ಗುರುಗಳೆಂದು ಪರಿಗಣಿತರಾಗಿರುವ ಹಾಗೂ ಅತಿ ಹೆಚ್ಚು ಪ್ರಸಂಗಗಳನ್ನು ರಚಿಸಿರುವ, ಪಾರ್ತಿಸುಬ್ಬ ಪ್ರಶಸ್ತಿಗೂ ಪಾತ್ರರಾಗಿರುವ ಶ್ರೀ ಹೊಸ್ತೋಟ ಮಂಜುನಾಥ ಭಾಗವತರ ೫ ಆಖ್ಯಾನಗಳನ್ನೊಳಗೊಂಡ ಮೂರು ಪ್ರಸಂಗಗಳ ಒಂದು ಸಂಕಲನವಿದೆ. ಉಲ್ಲಾಸದತ್ತ ವಿಜಯವೆಂಬ ಬೃಹತ್ ಪ್ರಸಂಗವು ತ್ರಯಾದ್ರಿ ವಿಜಯ, ದ್ವೀಪ ದಿಗ್ವಿಜಯ, ಸಾಮ್ರಾಜ್ಯ ವಿಜಯಗಳೆಂಬ ಭಾಗಗಳನ್ನು ಹೊಂದಿದ್ದು, ಇವೆಲ್ಲವುಗಳ ನಾಯಕ ಉಲ್ಲಾಸದತ್ತನಾಗಿದ್ದಾನೆ. ಈ ಪ್ರಸಂಗವು ಹೋಮರನ ಜಗತ್ಪ್ರಸಿದ್ಧ ಕಾವ್ಯಗಳಾದ ಒಡಿಸಿ, ಇಲಿಯಡ್‌ಗಳ

ಕಥೆಯನ್ನು ಆಧರಿಸಿದೆ. ಪ್ರೊ. ಕರ್ಣಿಕರು ಸಿದ್ಧಪಡಿಸಿಕೊಟ್ಟ ಕಥೆಯನ್ನು ಬಳಸಿ ಶ್ರೀ ಹೊಸ್ತೋಟರವರು ಮೂರು ಆಖ್ಯಾನಗಳನ್ನು ರಚಿಸಿರುತ್ತಾರೆ. ವಿಶ್ವವಿಖ್ಯಾತ ಕೃತಿಗಳನ್ನು ನಮ್ಮ ಪಾರಂಪರಿಕ ರಂಗಭೂಮಿಗೆ ಹೊಂದುವಂತೆ, ಯಕ್ಷಗಾನೀಯತೆಗೆ ಭಂಗ ಬಾರದಂತೆ ಅಳವಡಿಸುವಲ್ಲಿ ಶ್ರೀ ಹೊಸ್ತೋಟ ಭಾಗವತರ ಪ್ರತಿಭೆ ಚೆನ್ನಾಗಿ ದುಡಿದಿದೆ. ಇದೇ ಪ್ರಸಂಗಕರ್ತರ 'ಅಕ್ಷರ ಸಾಕ್ಷಾತ್ಕಾರ'ವು ಸಾಮಾಜಿಕ ಪ್ರಗತಿಗೆ ಯಕ್ಷಗಾನದಂತಹ ಕಲೆಯನ್ನು ಬಳಸಿಕೊಳ್ಳಲು ಉಪಕರಣವಾಗಿದ್ದರೆ, 'ಕನಕಾಕ್ಷಿ ಕಲ್ಯಾಣ' ಒಂದು ಸುಂದರ ಯಕ್ಷಗಾನೀಯ ಕೃತಿ.

ಹೀಗೆ ಐದು ಪ್ರಸಂಗಗಳನ್ನು ಪ್ರಕಟಿಸಲು ಅನುಮತಿ ನೀಡಿದ ಶ್ರೀ ಹೊಸ್ತೋಟ ಮಂಜುನಾಥ ಭಾಗವತರಿಗೆ ವಂದನೆಗಳು.

**– ನಾಡೋಜ ಬೆಳಗಲ್ ವೀರಣ್ಣ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ,
ಬೆಂಗಳೂರು

# ನಾಲ್ಕು ಮಾತು

ಹೊಸ್ತೋಟ ಮಂಜುನಾಥ ಭಾಗವತರು ಯಕ್ಷಗಾನವು ಕಂಡ ಅದ್ಭುತಗಳಲ್ಲೊಂದು ಎಂದರೆ ಅತಿಶಯೋಕ್ತಿಯಲ್ಲ. ಅವರನ್ನು ಯಕ್ಷಗಾನದ 'ನಡೆದಾಡುವ ವಿಶ್ವಕೋಶ'ವೆಂದೇ ಕರೆಯಲಾಗುತ್ತದೆ. ಯಕ್ಷಗಾನದ ಎಲ್ಲ ಅಂಗಗಳಲ್ಲಿಯೂ ತಲಸ್ಪರ್ಶಿಯಾದ ಜ್ಞಾನವನ್ನು ಹೊಂದಿದ ಅವರು ಮಹಾಕವಿಗಳ ಸಾಲಿನಲ್ಲಿ ಸೇರತಕ್ಕವರು. ಉಸಿರಾಟದಷ್ಟೇ ಸಹಜವಾಗಿ ಅವರಿಂದ ಯಕ್ಷಗಾನದ ಪದ್ಯಗಳು ಹೊರಬರುತ್ತವೆ. ಯಕ್ಷಗಾನ ಪ್ರಸಂಗವೊಂದರ ಪ್ರತಿ ತೆಗೆಯಲು ಎರಡೋ ಮೂರೋ ದಿನಗಳು ಬೇಕಾಗುತ್ತವಾದರೆ ಭಾಗವತರು ಅದೇ ಅವಧಿಯಲ್ಲಿ ನೂತನವಾದ ಪ್ರಸಂಗವನ್ನು ರಚಿಸಿಬಿಡುತ್ತಾರೆ. ನಿಜಕ್ಕೆಂದರೆ ಅಷ್ಟೂ ಬೇಕಿಲ್ಲ. ಆದರೆ ಬರವಣಿಗೆ ಸಾಗುವುದಿಲ್ಲವೆಂಬುದಕ್ಕಾಗಿ ಈ ಅವಧಿ. ಇದಕ್ಕೆ ಮುನ್ನೂರಕ್ಕೂ ಮಿಕ್ಕಿದ ಅವರ ಪ್ರಸಂಗಗಳೇ ಸಾಕ್ಷಿ.

ಈ ಸಂಕಲನದಲ್ಲಿ ಅವರ ಮೂರು ಪ್ರಸಂಗಗಳಿವೆ. ಮೂರು ಪ್ರಸಂಗಗಳಿಗೆ 'ಉಲ್ಲಾಸದತ್ತ'ನೇ ನಾಯಕ. ಹಾಗಾಗಿ 'ಉಲ್ಲಾಸದತ್ತ ವಿಜಯ'ವೊಂದೇ ಪ್ರಸಂಗವಾಗಿವೆ. ಅದು ಮೂರು ಭಾಗಗಳಲ್ಲಿದೆ. ತ್ರಯಾದ್ರಿ ವಿಜಯ, ದ್ವೀಪದಿಗ್ವಿಜಯ ಹಾಗೂ ಸಾಮ್ರಾಜ್ಯ ವಿಜಯಗಳು ಉಲ್ಲಾಸದತ್ತನ ಚರಿತ್ರೆಗೆ ಸಂಬಂಧಿಸಿದವು. ಇಲ್ಲಿನ ಕಥೆ ನಮ್ಮ ದೇಶದ್ದಲ್ಲ. ಗ್ರೀಕರ ಮಹಾಕವಿಯಾದ ಹೋಮರನ 'ಒಡಿಸ್ಸಿ' ಕಾವ್ಯದ ಕಥೆ. ಅದನ್ನು ಸುಬ್ರಹ್ಮಣ್ಯದಲ್ಲಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಭಾಲಚಂದ್ರ ಕರ್ಣಿಕರು ಒದಗಿಸಿದರು. ಆ ಕಥೆಯನ್ನು ಇಟ್ಟುಕೊಂಡು ಭಾಗವತರು ಪ್ರಸಂಗಗಳನ್ನು ರಚಿಸಿದರು. ಈಗಾಗಲೇ ವ್ಯಾಸ, ವಾಲ್ಮೀಕಿ, ಶಂಕರ ಕಥೆಗಳು ಭಾಗವತರ ಮೂಲಕವಾಗಿ ಪ್ರಸಂಗರೂಪದಲ್ಲಿ ಬಂದಿವೆ. ಈಗ ಹೋಮರನೂ ಯಕ್ಷಗಾನಕ್ಕೆ ಬಂದಿದ್ದಾನೆ.

ಹೋಮರನ ಕಥೆಯನ್ನು ಯಕ್ಷಗಾನಕ್ಕೆ ಅಳವಡಿಸುವಾಗ ಮಾಧ್ಯಮದ

ಧರ್ಮಕ್ಕೆ ತಕ್ಕಂತೆ ಕೆಲವು ಬದಲಾವಣೆಗಳು ಅನಿವಾರ್ಯ. ಪ್ರಮುಖವಾಗಿ ಮೂಲದ ಹೆಸರುಗಳು. ಅವುಗಳನ್ನು ಸಂಸ್ಕೃತ ನಾಮಗಳನ್ನಾಗಿಸಿಕೊಳ್ಳುವುದು ಅನಿವಾರ್ಯ. ಹಾಗೆ ಬದಲಾಯಿಸಿ ಮೂಲ ಕಥೆಯ ಹಂದರದ ಮೇಲೆ ಈ ಪ್ರಸಂಗಗಳು ಸೊಗಸಾಗಿ ರಚನೆಗೊಂಡಿವೆ. ಇಂಚಿಂಚು ರಾತ್ರಿಯ ಪ್ರದರ್ಶನವಾದರೂ ಒಂದೇ ದಿನದಲ್ಲಿ ಇಷ್ಟು ಕಥೆಯನ್ನು ಆಡುವುದು ಕಷ್ಟ. ಎರಡು ದಿನಗಳಾದರೂ ಬೇಕು. ಅದು ಆಡುವವರಿಗೆ, ಆಡಿಸುವವರಿಗೆ ಬಿಟ್ಟ ವಿಚಾರ.

ಯಕ್ಷಗಾನ ಪ್ರಸಂಗಗಳು ಛಂದೋಬದ್ಧ ರಚನೆಗಳಾಗಿವೆ. ಪ್ರಸಂಗದುದ್ದಕ್ಕೂ ವಿವಿಧ ಛಂದೋಬಂಧ ನಿಬದ್ಧವಾದ ರಚನೆಗಳಿರುತ್ತವೆ. ಅವುಗಳಲ್ಲಿ ಕೆಲವು ಸತಾಲವಾಗಿದ್ದರೆ ಕೆಲವು ವಿತಾಲದ ಪದ್ಯಗಳಾಗಿರುತ್ತವೆ. ಕನ್ನಡದ ಛಂದೋವಿನ್ಯಾಸಗಳ ಸಿದ್ಧಮಾದರಿಗಳಲ್ಲದೇ, ಸಾಧ್ಯವೆನಿಸುವಂಥವುಗಳನ್ನು ಯಕ್ಷಗಾನವು ಬಳಸಿಕೊಂಡಿದೆ. ಹೊಸಗನ್ನಡ ಕಾವ್ಯದ ಆರಂಭಕಾಲದಲ್ಲಿ ನವೋದಯ ಕವಿಗಳು ಯಕ್ಷಗಾನ ಕಾವ್ಯದಿಂದ ಸಾಕಷ್ಟು ಪ್ರೇರಣೆಯನ್ನು ಪಡೆದು ಹೊಸ ಪ್ರಯೋಗಗಳನ್ನು ಮಾಡಿದರೆನಿಸುತ್ತದೆ. ಮಾತ್ರಾಗಣಗಳ ಪ್ರಯೋಗದಲ್ಲಿಯಂತೂ ಯಕ್ಷಗಾನ ಕವಿಗಳು ಎಲ್ಲ ಸಾಧ್ಯತೆಗಳನ್ನು ಸೂರೆಗೊಂಡಿದ್ದಾರೆ. ಅಂಶಗಣ ಹಾಗೂ ಮಾತ್ರಾಗಣಗಳ ಮಿಶ್ರಬಂಧಗಳನ್ನು ರಚಿಸಿ ವಿಶಿಷ್ಟತೆಯನ್ನು ಮೆರೆದಿದ್ದಾರೆ. ಭಾಗವತರು ಸ್ವತಃ ಅನೇಕ ಬಂಧಗಳನ್ನು ರಚಿಸುವ ಮೂಲಕ ತಮ್ಮ ಸೃಜನಶೀಲತೆಯನ್ನು ಮೆರೆದಿದ್ದಾರೆ. ಯಕ್ಷಗಾನ ಛಂದಸ್ಸನ್ನು ಕುರಿತು ಅಧ್ಯಯನ ಮಾಡುವವರು ಹೊಸ್ತೋಟರ ಪ್ರಸಂಗಗಳನ್ನು ಅಭ್ಯಸಿಸುವುದು ಅನಿವಾರ್ಯವಾಗಿದೆ.

ಇತರ ಯಕ್ಷಗಾನ ಕವಿಗಳಂತೆ ಭಾಗವತರ ಪ್ರಸಂಗಗಳೂ ಸರಳವಾದ ಭಾಷೆಯಲ್ಲಿ ಅರ್ಥವನ್ನು ತುಂಬಿದ್ದಾರೆ. ಕಿರಿದರಲ್ಲಿ ಪಿರಿದರ್ಥವನ್ನು ತುಂಬುವುದು ಯಕ್ಷಗಾನದ ರೀತಿ. ಪದ್ಯಗಳು ಎಲ್ಲವನ್ನೂ ವಾಚ್ಯವಾಗಿ ಹೇಳುವುದಿಲ್ಲ. ಹಾಗೆಂದು ಅವು ಧ್ವನಿಸಿದ್ಧಾಂತದ ಲಕ್ಷಣಗಳಿಗೂ ಒಳಪಟ್ಟಿರುವುದಿಲ್ಲ. ಸಾಹಿತ್ಯದಲ್ಲಿ ಹೇಳುವ ಧ್ವನಿಗೂ ಇಲ್ಲಿನ ಅರ್ಥಗಾರಿಕೆಗೂ ವ್ಯತ್ಯಾಸವಿದೆ. ಇದು ವಿಸ್ತರಿಸುವ ಕೆಲಸ. ಅರ್ಥದ ವಿಸ್ತರಣೆಗೆ ಅನುಕೂಲವಾದ ಪದಗಳು ಇರುವಂತೆ ಕವಿಯು

ಪ್ರಯತ್ನಿಸುತ್ತಾನೆ; ಅಂತೆಯೇ ಅವು ಅಭಿನಯಕ್ಕೆ ಒದಗುವಂತಿರಬೇಕಾಗುತ್ತದೆ. ಅಂದರೆ ಅಮೂರ್ತವಾದ ವಿಚಾರಗಳನ್ನು ಆದಷ್ಟು ಕಡಿಮೆ ಬಳಸಬೇಕಾಗುತ್ತದೆ.

ಹೀಗೆ ಹಲವಾರು ದೃಷ್ಟಿಗಳಿಂದ ನೋಡಿದರೂ ತುಂಬ ಮೇಲ್ಮಟ್ಟದ ರಚನೆಗಳು ಇವು. ಭಾಗವತರ ಪಳಗಿದ ಕೈಗಳ ಗುಣಮಟ್ಟವನ್ನು ಸಾರುತ್ತವೆ. ರಂಗಕ್ಕೆ ಅನುಕೂಲಕರವಾಗಿವೆ. ಇವುಗಳನ್ನು ರಂಗಕ್ಕೆ ತರುವಾಗ ಮೂಲಕಥೆಯ ಪರಿಚಯವು ಅವಶ್ಯ. ಅಂದರೆ ನಟರು ಸಾಕಷ್ಟು ಅಧ್ಯಯನ ಮಾಡಿಯೇ ರಂಗಕ್ಕಿಳಿಯುವುದು ಅವಶ್ಯ. ಇದು ನಮ್ಮ ದೇಶಕ್ಕೆ ಅಷ್ಟೊಂದು ಪರಿಚಿತವಲ್ಲದ ಕಥಾನಕವಾದುದರಿಂದ ರಾಮಾಯಣ – ಮಹಾಭಾರತ ಪ್ರಸಂಗಗಳನ್ನು ಆಡುವಾಗಿನ ಅಧ್ಯಯನಕ್ಕಿಂತ ಹೆಚ್ಚಿನದು ಬೇಕಾಗುತ್ತದೆ.

ಅದೇನೆ ಇದ್ದರೂ 'ಉಲ್ಲಾಸದತ್ತ ವಿಜಯ'ದ ಮೂರು ಪ್ರಸಂಗಗಳನ್ನು ಒಂದೇ ಕಡೆಗೆ ಸಿಗುವಂತೆ ಪ್ರಕಟಿಸುವ ಯಕ್ಷಗಾನ ಮತ್ತು ಬಯಲಾಟ ಅಕಾಡೆಮಿಯ ಪ್ರಯತ್ನ ಅಭಿನಂದನೀಯವಾದುದು. ಇದು ಯಕ್ಷಗಾನ ಸಾಹಿತ್ಯಕ್ಕೆ ಉತ್ತಮ ಕೊಡುಗೆಯಾಗಿದೆ. ಇದರ ಪ್ರಯೋಜನವು ಕಲಾರಸಿಕರಿಗೆ ದೊರೆಯುವಂತಾಗಲಿ.

ಯಕ್ಷಗಾನಂ ಗೆಲ್ಗೆ.

ಶಿರಸಿ

೦೮–೦೬–೨೦೧೬ ಪ್ರೊ. ಎಂ. ಎ. ಹೆಗಡೆ

ಯಕ್ಷಗಾನ ಪ್ರಸಂಗ

# ಉಲ್ಲಾಸದತ್ತ ವಿಜಯ

ಮೂರು ಭಾಗಗಳು

ಭಾಗ -1 :- ತ್ರಯಾದ್ರಿ ವಿಜಯ- 145 ಪದ್ಯಗಳು

ಭಾಗ -2 :- ದ್ವೀಪ ದಿಗ್ವಿಜಯ- 97 ಪದ್ಯಗಳು

ಭಾಗ -3 :- ಸಾಮ್ರಾಜ್ಯ ವಿಜಯ- 155 ಪದ್ಯಗಳು

ಹೋಮರ ಕವಿಯ ಓಡಿಸ್ಸಿ-ಇಲಿಯಡ್- ಕಾವ್ಯಕತೆಯ
ಭಾರತಿಯ ರೂಪಾಂತರ

ಕಥಾ ಕಲ್ಪನೆ :- ಬಾಲಚಂದ್ರ ಕರ್ಣಿಕ, ಸುಬ್ರಹ್ಮಣ್ಯ ಉಪನ್ಯಾಸಕರು

**ಯಕ್ಷಗಾನಕ್ಕೆ ಅಳವಡಿಸಿದವರು :-ಮಂಜುನಾಥ ಭಾಗವತ ಹೊಸ್ತೋಟ**

ವಿ. ಸೂ. :- ಇಡೀ ರಾತ್ರಿಯ ಪ್ರಯೋಗಕ್ಕೆ ಪ್ರಥಮ- ದ್ವಿತೀಯ ಭಾಗಗಳು ಒಂದುರಾತ್ರಿ, ದ್ವಿತೀಯ- ತೃತೀಯ ಭಾಗಗಳು ಒಂದುರಾತ್ರಿ ಹೀಗೆ ವಿಂಗಡಿಸಿಕೊಳ್ಳಬೇಕು. ಮೂರು ಭಾಗಗಳನ್ನು ಒಂದೇರಾತ್ರಿ ಪ್ರದರ್ಶಿಸುವುದರಿಂದ ಅವಸರ ಗೊಂದಲಗಳಾಗುತ್ತವೆ. ಮೂಲ ಗ್ರೀಕ್ ಕಾವ್ಯಗಳ ಕಲ್ಪನೆ ಪಡೆಯುವುದರಿಂದ ಸಂಭಾಷಣೆಗೆ ಅನುಕೂಲವಾಗುತ್ತದೆ. ಪಾತ್ರ ಕಲ್ಪನೆಗೂ ನೆರವು ದೊರೆಯುತ್ತದೆ. ಈ ಕೃತಿಯ ಹಿಂದಿರುವ ಪರಿಶ್ರಮಕ್ಕೆ ಪ್ರಯೋಗ ಪುಟಗಳ ಪೂರ್ವತಯಾರಿಯ ಅಗತ್ಯವಿದೆ.

**ಈ ಕೃತಿಯ ಕುರಿತು–**

ಉಲ್ಲಾಸದತ್ತ ವಿಜಯವನ್ನು ಯಕ್ಷಗಾನಕ್ಕೆ ಅಳವಡಿಸಿದ್ದು ಇದೊಂದು ಹೊಸಕತೆ ಎಂಬುದಕ್ಕಲ್ಲ. ಈ ಕತೆಯನ್ನು ನೀಡಿದವರು ಬಾಲಚಂದ್ರ ಕರ್ಣಿಕರು. ಸುಬ್ರಹ್ಮಣ್ಯದಲ್ಲಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕರು. ಹೋಮರನ ಓಡಿಸ್ಸಿ ಕಾವ್ಯವನ್ನು ಓದಿ ಆ ಕಾವ್ಯದ ಕತೆಯನ್ನು ಭಾರತೀಯ ಕಲ್ಪನೆಗೆ ಹೊಂದಿಸಿದ್ದಾರೆ. " ರಾಜಾ ಉಲ್ಲಾಸದತ್ತ"ಎಂದು ಬರೆದ ಕತೆಯ ಹಸ್ತಪ್ರತಿಯನ್ನು ನನ್ನ ಮುಂದಿಟ್ಟು ಇದನ್ನು ಯಕ್ಷಗಾನಕ್ಕೆ ಅಳವಡಿಸಿದರೆ ಹೇಗಾದೀತು? ಎಂದು ಕೇಳಿದರು. ಪ್ರಯತ್ನಪಟ್ಟರೆ ಚೆನ್ನಾಗಿ ಆಗಬಹುದು ಎಂದು ಹೇಳಿದೆ. ತಾನು ಸಾಹಿತ್ಯ ಒದಗಿಸುತ್ತೇನೆ. ನೀವು ಪದ್ಯ ರಚಿಸಿ ಎಂದರು. ನಾನು ಒಪ್ಪಿದೆ. ಆನಂತರ ಅದೇ ಕವಿಯ ಇಲಿಯಡ್ ಕಾವ್ಯವನ್ನು ಓದಿ ಅಲ್ಲಿಯ ಅನೇಕ ಅಂಶಗಳನ್ನು ಗ್ರಹಿಸಿ ಸೇರಿಸಿ "ತ್ರಯಾದಿ– ವಿಜಯ" ಎಂಬ ಹೊತ್ತಿಗೆಯನ್ನು ಕಳುಹಿಸಿದರು. ಅದರಲ್ಲಿ ಕತೆಯ ಬಗ್ಗೂ, ಪಾತ್ರಗಳ ಬಗ್ಗೂ, ನಾಟಕೀಯತೆಯ ಕುರಿತೂ ಸಾಕಷ್ಟು ಸಮಾಲೋಚಿಸಿದ್ದಾರೆ. ಹೊಸಕತೆ ಇದೆ ಎಂದು ಹೇಳುವವರೂ, ಅಲ್ಲಿ ಹಾಗಿದೆ–ಇಲ್ಲಿ ಹೀಗಿದೆ, ಅದು ಹಾಗಲ್ಲ –ಇದು ಹೀಗಲ್ಲ ಎಂದು ಹೇಳುವವರು ಎಲ್ಲೆಂದರಲ್ಲಿ ಸಿಗುತ್ತಾರೆ. ಆದರೆ ತಾವು ಗಮನಿಸಿದ ಕತೆಯ ಕುರಿತು ಆಳವಾದ ವ್ಯಾಸಂಗಕ್ಕಿಳಿಯುವ ಪ್ರವೃತ್ತಿ ಎಲ್ಲರಲ್ಲಿಯೂ ಇರುವುದಿಲ್ಲ. ಅಂತಹ ಪ್ರಯತ್ನಶೀಲ ಮನೋವೃತ್ತಿಯನ್ನು ಕರ್ಣಿಕರಲ್ಲಿ ಗುರುತಿಸಿ ನಾನು ಪದ್ಯರಚನೆಗೆ ಕೈ ಹಾಕಿದೆ.

ಉಲ್ಲಾಸದತ್ತವಿಜಯ ಮೂರು ಭಾಗಗಳಲ್ಲಿ ವ್ಯಾಪಿಸಿದೆ. ಮೂರುನೂರ ಎಪ್ಪತ್ತೈದಕ್ಕೂ ಮಿಕ್ಕಿ ಪದ್ಯಗಳಿದ್ದಾವೆ. ಮೊದಲ ಮತ್ತು ಕೊನೆಯ ಭಾಗಗಳು ನಾಲ್ಕು ನಾಲ್ಕೂವರೆ ಘಂಟೆಯ ಅವಧಿಯ ಪ್ರದರ್ಶನಗಳಾದವು. ದ್ವೀಪದಿಗ್ವಿಜಯ ಮೂರು ತಾಸಿಗಾದೀತು. ಗ್ರೀಕ್ ಕವಿಯೊಬ್ಬನ ಕಾವ್ಯಕಲ್ಪನೆಯ ಕತೆ ಇದು. ಹೋಮರನನ್ನು ವಾಲ್ಮೀಕಿಗೆ ಹೋಲಿಸಿದ್ದಾರೆ. ಆದಿ ಕವಿಗಳ ಸಾಲಿನಲ್ಲಿರುವ ಆ ಕವಿಯ ಹೆಸರನ್ನಾದರು ಹಂಬಲಿಸಿಕೊಳ್ಳುವ ಅವಕಾಶ ಇಲ್ಲಿದೆ. ದೇಶ ಯಾವುದೇ ಇರಲಿ, ಭಾಷೆ ಯಾವುದೇ ಇರಲಿ, ಶ್ರೇಷ್ಠ ಕವಿತ್ವವನ್ನು ಶ್ಲಾಘಿಸಲೇಬೇಕು. ಅಂತಹ ಸಹೃದಯತೆಗೆ ಇದೊಂದು ಅವಕಾಶ. ಮೂಲವನ್ನು ಓದಿ ಅನುಭವಿಸುವ

ಭಾಷಾಜ್ಞಾನ ನನಗಿಲ್ಲ. ಆ ಕುರಿತು ಕಳವಳಿಸುವ ಸಂದರ್ಭ ಬರಲಿಲ್ಲ. ಅಷ್ಟು ಚೆನ್ನಾಗಿ ಬಾಲಚಂದ್ರ ಕರ್ಣಿಕರು ಹಿನ್ನಲೆಯೊದಗಿಸಿದ್ದಾರೆ. ಯಕ್ಷಗಾನ ಕಲಾವಿದರು ಸರಿಯಾಗಿ ಗಮನಿಸಿ ಪ್ರಯೋಗಿಸಿದರೆ ಇದು ರಂಗದಲ್ಲಿ ರಂಜನೀಯವಾದೀತು. ರಂಗವನ್ನು ಗಮನದಲ್ಲಿಟ್ಟೇ ಪದ್ಯರಚನೆಯಲ್ಲಿ ಶ್ರಮಿಸಿದ್ದೇನೆ. ಓಡಿಸ್ಸಿ–ಇಲಿಯಡ್ ಕಾವ್ಯವನ್ನು ಓದದ ಗ್ರಾಮೀಣರಿಗೂ ಆ ಕತೆಯ ಭಾರತೀಯ ರೂಪಾಂತರ ಈ ಪ್ರಯೋಗದ ಮೂಲಕ ಸಿಗುತ್ತದೆ. ಆ ಬಗ್ಗೆ ಶ್ರಮಿಸುತ್ತಿರುವ ಕರ್ಣಿಕರ ಜತೆಗೂ ಕೈಜೋಡಿಸಿದಂತಾಯಿತು, ಹೋಮರ ಕವಿಗೆ ಕೈಮುಗಿದಂತೆಯೂ ಆಯಿತು ಎಂದೇ ಈ ಪ್ರಸಂಗಕ್ಕೆ ಕೈ ಹಾಕಿದೆ.

ಸಾಹಿತ್ಯ ಭಾಗದಲ್ಲಿ ನಾನು ತಲೆಬಿಸಿ ಮಾಡಿಕೊಳ್ಳಲಿಲ್ಲ. ಆ ಕಾವ್ಯ ಕರ್ಣಿಕರಿಗೆ ಆದುದರಿಂದ ಅವರನ್ನು ಅಭಿನಂದಿಸುತ್ತೇನೆ. ಶ್ರಾವಣ ಮೌನದವೇಳೆ ಬರೆದ ಕೃತಿ ಇದು. ಆ ಸಂದರ್ಭದಲ್ಲಿ ಎಲ್ಲಾ ಬಗೆಯ ಅನುಕೂಲ ಒದಗಿಸಿಕೊಟ್ಟ, ಸಿರ್ಸಿ ತಾಲೂಕು ನೇಗಾರ ಗ್ರಾಮದ ಎಲೆಮನೆ ಕೇಶವ ಹೆಗಡೆಯವರ ಕುಟುಂಬದವರಿಗೆ ನಾನು ಋಣಿ. ಯಕ್ಷಗಾನರಂಗದಲ್ಲಿ ಈ ಕೃತಿ ಯಶಸ್ವಿಯಾಗಿ ಜನಾದರಣೆ ಗಳಿಸಲಿ.

– ಮಂಜುನಾಥ ಭಾಗವತ,

ಹೊಸ್ತೋಟ

ಯಕ್ಷಗಾನ ಪ್ರಸಂಗ

# ಉಲ್ಲಾಸದತ್ತ ವಿಜಯ

ಭಾಗ – ೧

## ತ್ರಯಾದ್ರಿ ವಿಜಯ

**ಪಾತ್ರಗಳು :**

* **ಮೀನರಥ** – ಸ್ಫಟಿಕ ದೇಶದ ರಾಜ * **ಮಂತ್ರಿ**
* **ಪೌರೇಶ**– ತ್ರಯಾದ್ರಿಯ ರಾಜ * **ವೀರೇಶ** – ಪೌರೇಶನ ತಮ್ಮ
* **ಆಗಮಸೇನ** – ಮಿತ್ರರಾಜ * **ಉಲ್ಲಾಸದತ್ತ** – ಇಥಾಕಾರಾಜ
* **ವರ್ತಕರು** * **ಸುರಮತಿ** * **ವೃದ್ಧಪ್ರಯಾಮ** * **ಬೇಹುಗಾರರು** * **ದೂತರು**
* **ಹೇಮರೇಖೆ** * **ಪದ್ಮರೇಖೆ** * **ಮಣಿಮಂಜರಿ** * **ರಕ್ತ ಪ್ರಭೆ**
**ಕೊರವಂಜಿ–ಸಖಿಯರು–ಪುರಜನರು–ಸೈನಿಕರು**
**ಮುಂತಾಗಿ**

### ~ ನಾಂದಿ ~

**ರಾಗ– ನಾಟಿ** **ಆದಿ ತಾಳ**

ನಮೋ ನಮೋ ಲಂಬೋದರ ಗಜವದನ । ವಿಘ್ನೇಶ್ವರ ಶುಭಕರ । ಉಮಾತನಯ ಪರಿಪೂರ್ಣ ದಯಾಸದನ ॥ ಸುಮಾಂಬುಹರ ನಟಶೇಖರ ನಂದನ । ಹಿಮಾಂಶುಮದಹರ ಕರುಣಾ ಭರಣ ॥ ನಮೋ ॥ ೧ ॥ ನವನವೋನ್ಮೇಷ ಶಾಲಿನಿ ಗೀರ್ವಾಣಿ । ವೀಣಾಧರೆ ಶಾರದೆ । ಕವನ ಕಥನ ಸುವಿನೋದಿನಿ ವಿಧಿರಾಣಿ ॥ ಧವಳಾಂಬರೆ ಕಲಹಂಸವರೂಧಿನಿ। ವಿವಿಧಗಾನ ನಾಟ್ಯ ವೇದ ಮೋದಿನಿ ॥ ೨ ॥

## ಭಾಮಿನಿ

ಗಣಪನಿಂಗಭಿನಮಿಸಿ ವಾಣಿಯ । ಘನತೆಯನು ಹಂಬಲಿಸಿ ಕವಿಜನ । ವಿನುತ ಹೋಮರನಿಂದ ಪಡೆದಿಹ ಋಣಕೆ ತಲೆಬಾಗಿ ॥ ಸನುಮತದೊಳುಲ್ಲಾಸದತ್ತನ । ಘನ ಚರಿತ್ರೆಯ ಮೂರು ಹಂತದಿ । ಗಣಿಸಿ ಪೇಳ್ವೆ ತ್ರಯಾದಿ ವಿಜಯವ ಯಕ್ಷಗಾನದಲಿ ॥ ೧ ॥

**(ಸ್ಫಟಿಕ ದೇಶದಲ್ಲಿ ಮಂತ್ರಿಯೊಂದಿಗೆ ಮೀನರಥನ ಒಡ್ಡೋಲಗ)**

## ರಾಗ -ಮಧ್ಯಮಾವತಿ — ತಾಳ-ತ್ರಿವುಡೆ

ಸಿರಿಯೊಲಿದನೆಲೆ ಸ್ಫಟಿಕದೇಶದ । ದೊರೆತನದೊಳಾ ಮೀನರಥ ಶುಭ । ಪರಿಸರದೊಳೋಲಗದೊಳೊಪ್ಪಿರೆ । ಹರುಷದಿಂದ ॥ ೧ ॥

## ರಾಗ- ಕಾಂಬೋಧಿ — ತಾಳ-ಅಷ್ಟ

ವರಿಸಿದಳೆನ್ನ ಮೈನಾಕ ವೈಯ್ಯಾರಿ । ಸ್ವಯಂ । ವರವನೊಪ್ಪದೆ ತಾಂಡ್ಯ ರಾಜಕುಮಾರಿ ॥ ಪರಿಪೂರ್ಣ ಸುಖಭೋಗಯೋಗವಿದಹುದು । ಧೈರ್ಯ । ದೊರೆತುದುಲ್ಲಾಸದತ್ತನ ಸಂಬಂಧದೊಳು ॥ ೧ ॥ ಚತುರಂಗಸೇನೆಗೋಸುಗ ಪರಿತಪಿಸಿ । ಜಗ । ತ್ಪತಿಗಳೆಂಬರು ಬಲುಪಡೆಯಣೆಗೊಳಿಸಿ ॥ ಮತಿಹೀನ ರವರದೃಷ್ಟವ ಮರೆತಿಹರು । ಉಪ । ಹತಿಯ ಹೋರಾಟ ಯುದ್ಧವ ಬಯಸುವರು ॥ ೨ ॥

**(ಮೀನರಥನ ನಿರ್ಗಮನ; ತ್ರಯಾದ್ರಿಯಲ್ಲಿ ಪೌರೇಶನ ಒಡ್ಡೋಲಗ)**

## ರಾಗ-ಭೈರವಿ — ತಾಳ-ಝಂಪೆ

ವೀರೇಶಕೇಳೀತ್ರಯಾದ್ರಿಯ ಘನಸ್ಥಿಕೆಯ । ಭೂರಿದುರ್ಗವು ಸಪ್ತದ್ವಾರ ಸಂ ಯುತವು ॥ ಪಾರಂಪರಿಕ ಚಿನ್ಹೆಯಿಂದ್ರ ಮಂದಿರವೆಮಗೆ । ಸಾರಮುದ್ರಿಕೆ ಯಾರ ಬಾಗಿಲಾಗಿಹುದು ॥ ೧ ॥

**ರಾಗ–ತೋಡಿ** **ತಾಳ–ಮಟ್ಟೆ**

ಅಣ್ಣ ನಿನ್ನಾನನದ ಸಂಭ್ರಮ । ಮಸಳಿಸಿತದೇಕೆ । ಬಣ್ಣಬದಲಾಗಿರುವುದಮ ಮಮ ॥ ನಿನ್ನೊಳೆ ನೀ ಮರಗುತಿರುವೆ ಖಿನ್ನನಾಗಿ ಕೊರಗುತಿರುವೆ । ಎನ್ನೊಳರುಹು ದುಗುಡ ತರವೆ । ಸನ್ನಿಧಿಯೊಳು ಶಿರಬಾಗುವೆ ॥ ೧ ॥

**ರಾಗ–ಧನ್ಯಾಸಿ** **ತಾಳ–ಆದಿ**

ತಮ್ಮ ನೀ ಕೇಳೆನ್ನ ಬವಣೆಯ । ಆ ಹೇಮರೇಖೆ । ನೆಮ್ಮದಿಯನೆಕಲಕುತಿಹಳಯ್ಯ ॥ ಹೆಮ್ಮೆಯಿಂದಲಣಕಿಸುವಳು । ಸುಮ್ಮಾನದೊಳಿರಲು ಬಿಡಳು । ಚಿಮ್ಮಿ ಚಲುವಕಾಡುತಿಹಳು । ಗುಮ್ಮನಂತೆ ಹಗಲು ಇರುಳು ॥ ೧ ॥

**ರಾಗ–ಮೋಹನ** **ತಾಳ–ಅಷ್ಟ**

ಅಗ್ರಭವನೆ ಲಾಲಿಸು । ಇಂತೇಕೆ ನೀ । ವುಗ್ರನಾಗಿಹೆ ಸ್ಥೈರಿಸು ॥ ಉಗ್ರಪ್ರತಾಪದಿ ಮೀನರಥನ ಬಡಿ । ದಾಗ್ರಹದಿಂದಾಕೆಯನ್ನೆಳೆತರುವನು ॥ ೧ ॥

**ರಾಗ– ಶಂಕರಾಭರಣ** **ತಾಳ–ಅಷ್ಟ**

ಮೆಚ್ಚಿದೆ । ನಿನ್ನ ನುಡಿಕೇಳಿ ಸಂತಸ । ಹೆಚ್ಚಿದೆ ॥ ಪ ॥ ಕಿಚ್ಚಿನಂದದೊಳು ಮುಂಬರಿದು । ಧುರ । ದಿಟ್ಟೆಯಪ್ರಕಟಿಸಿ ಮುಳಿದು । ತಲೆ । ಗೊಚ್ಚಿ ವೈರಿಗಳ ನುಗ್ಗಿರಿದು । ಲಗ್ಗೆ । ಆ ಹೇಮರೇಖೆಯ ನಿಲ್ಲಿ ತಹುದು ॥ ೧ ॥

**(ಸ್ಫಟಿಕ ಪುರಕ್ಕೆ ದಾಳಿಯಿಟ್ಟಾಗ–ಚಾರರಿಂದ ಅಡ್ಡಿ)**

**ರಾಗ– ಹಂಸಧ್ವನಿ** **ತಾಳ–ಮಟ್ಟೆ**

ಯಾಕೆ ಬಂದಿರಿಲ್ಲಿ ನುಗ್ಗಬೇಡಿ ನಿಲ್ಲಿ । ಜೋಕೆಯಿಂದ ಪೆಸರಪೇಳಿ ನಿಮ್ಮ ಊರದೆಲ್ಲಿ ॥ ೧ ॥ ಹಚ್ಚಿ ಆ ತ್ರಯಾದ್ರಿ ಪುರವು ಗೋತ್ರಹರನದಿವವು । ಕ್ಷಾತ್ರಕ್ರಮದಿ ಯುದ್ಧಕೆಂದು ಬಂದೆವಿಲ್ಲಿ ನಿಜವು ॥ ೨ ॥

**ರಾಗ- ಬೇಹಾಗ್** **ತಾಳ- ಏಕ**

ಅಹಹ ತ್ರಯಾದ್ರಿ ಘನಸ್ಥಿಕೆ ಗೊತ್ತು । ಮಹಿಳೆಯರನು ಹುಡುಕಲು ಈ ಗತ್ತು ॥
ಬಹುದ್ರವ್ಯಕೆ ಬಾಯ್ಕುಳಿವವರಿಲ್ಲ । ಸಹಸದಿ ಸಾಯಲು ಬಂದಿಹಿರಲ್ಲ ॥ ೧ ॥

**ಭಾಮಿನಿ-** **ಅರ್ಧ**

ಬಂಧಿಸುತ ಬಡಿದಟ್ಟೆ ಚಾರರ । ಬಂದರೋಡುತ ಲೆಡವಿ ಬೀಳುತ । ವಂದಿಸಲು ಮೀನರಥ ಕೇಳಿದನೇನಿದೇನೆನುತ ॥ ೧ ॥

**ರಾಗ- ಪುನ್ನಾಗತೋಡಿ** **ತಾಳ- ತ್ರಿವುಡೆ**

ಕೇಳೋ ಮಹರಾಜ । ನಮ್ಮಯ । ಗೋಳ ಗುಣಶೀಲ ॥ ಖೂಳನಾ ಪೌರೇಶ ಬಂದ । ದಾಳಿಗೈದಿಹ ಮೋಸದಿಂದ । ಕಾಳಗಕೆ ಕರೆದಿರುವರೆಯಖರೆ । ಬಾಳುವೆಗೆ ಗಂಡಾಂತ್ರವರರೆ ॥ ೧ ॥

**ಭಾಮಿನಿ**

ಮಂದಮತಿ ಪೌರೇಶ ನಿಲ್ಲಿಗೆ । ಬಂದನೇ ಧುರಕೊದಗಿ ನಿಂತನೆ । ಸಂದುದವಗಾಯುಷ್ಯವೆನ್ನುತ ನೃಪತಿ ಸಿಡಿದೆದ್ದ ॥ ೧ ॥

**(ಚೂಣಿ ಕಾಳಗ-ಸ್ಫಟಿಕದೇಶದ ಮಂತ್ರಿ-ವೀರೇಶರ ಯುದ್ಧ)**

**ರಾಗ-ಕೇದಾರ ಗೌಳ** **ತಾಳ-ಝಂಪೆ**

ಮದುವೆಯಿಲ್ಲದ ಕೂಡಿಕೆ । ಹಿನ್ನಲೆಯೊ । ಒದಗಿ ದೂಡಿತೆ ಯುದ್ಧಕೆ ॥ ವಿಧಿ ನಿಷೇಧವ ನರಿಯದ । ಬಾಹಿರರೆ । ಕದನಕೇಮಾರ್ಮಲೆತಿರ ॥ ೧ ॥ ನೀತಿ ನಿಯಮವ ಬೋಧಿಸಿ । ಬದುಕಿನಾ । ರೀತಿ ಗೊಂಚನೆಯ ಬೆರೆಸಿ ॥ ಭೀತಿ ಪಡಿಸುತಲಜ್ಞರ । ಶೋಷಿಸುವ । ಮಾತಿನಿಂಜಯಗಳಿಪರ ॥ ೨ ॥

**(ಪೌರೇಶ- ಮೀನರಥರ ಯುದ್ಧ )**

**ರಾಗ–ತೋಡಿ** **ತಾಳ–ಆದಿ**

ನಿಲ್ಲೋ ಮೀನರಥ । ನಿನಗಿ । ನ್ನೆಲ್ಲೋ ವಿಜಯಪಥ ॥ ಪ ॥ ಬಲ್ಲಿದನುಲ್ಲಾಸದತ್ತನಿಲ್ಲ ನಿನ್ನೆರವಿಗೆ । ಖುಲ್ಲತಾಂಡ್ಯ ರಾಜಬಾರ ರಣದ ನೆರಳಿಗೆ ॥ ಸೊಲ್ಲಿನಲ್ಲಿ ಹೇಮರೇಖೆ ಯೊಲಿಸಿದಂತಲ್ಲ । ಗೆಲ್ಲುವಾಸೆ ಬೇಡವೀಪೌರೇಶ ರಣಮಲ್ಲ ॥ ೧ ॥ ಭಳಿರೇ ಪೌರೇಶ । ಈ ಹೆ । ಗ್ಗಳಿಕೆ ಬಲುಕ್ಲೇಶ ॥ ಪಲ್ಲ ॥ ಕಳವಿನಲ್ಲಿ ನಾವೆಯೇರಿ ಬಂದೆ ಯುದ್ಧಕ್ಕೆ । ಛಲವಿದೇಕೆ ತಿರುಗಿಪೋಗು ನಿನ್ನನಗರಕೆ ॥ ಕಲಹಕೊದಗಿ ಸಾಯಬೇಡ ಹಳೆಯ ವೈರಕೆ । ಗೆಲುವು ಸುಲಭವಲ್ಲ ತೋರು ಬಿಲ್ಲುಗಾರಿಕೆ ॥ ೨ ॥

**ರಾಗ– ನಾಟಿ** **ತಾಳ–ಮಟ್ಟೆ**

ಓಹೋ ಮರಣಕಾಲ ನಿನಗೆ । ಸಾಹಸವನು ಕಾಣಿಸೆನುತ । ಕಾಹುರದೊಳು ಕಾದಿಹ ಪೌರೇಶ ಖತಿಯೊಳು ॥ ೧ ॥

**(ಯುದ್ಧ – ಮೀನರಥನ ಪರಾಭವ ಕಣ್ಮರೆ)**

**ರಾಗ– ಆರಭಿ** **ತಾಳ– ತ್ರಿವುಡೆ**

ಸಮರ ವಿಜಯೋತ್ಸವಕೆ ಕವಿದಿದೆ । ಕಮಲ ನಯನೆಯ ಕಾಮನೆ ॥ ರಮಣಿ ಸೆರೆಪಿಡಿದಿಹಳು ಮನವನೆ । ಗಮಿಸಿ ಕಾಣುವೆ ಸೊಬಗನೆ ॥ ೧ ॥

**(ಹೇಮರೇಖೆ ಮಣಿಮಂಜರಿಯರ ಪ್ರವೇಶ )**

**ರಾಗ– ಕೇದಾರ ಗೌಳ** **ತಾಳ–ಕೋರೆ**

ಮಂಜರಿ ಬಾರವ್ವ ಬಳಿಗೆ ಅಂಜಿ ಬಂದೆವಲ್ಲ ಹೀಗೆ । ನಂಜು ಮನದ ಕುಹಕಿ ಎನ್ನನೆಂಜಲಿಸದಿರ ॥ ೧ ॥ ಖೂಳನವನ ಸೂಳೆಯಾಗಿ ಬಾಳಲಾರೆನವ್ವ ಜಗದಿ । ಶೀಲವುಳುಹಿಕೊಳಲು ತನುವ । ಸೀಳಿಕೊಂಬೆನು ॥ ೨ ॥

**ರಾಗ–ಹಿಂದೋಳ** **ತಾಳ–ರೂಪಕ**

ಜೀವನ ಹೂವಿನಹಾಸುಗೆಯಲ್ಲದ । ಭಾವಿಸಿ ಧೈರ್ಯದಿ ಬಾಳು ॥ ಸಾವಧಾನದಿ ಮೌನವ್ರತಿಯಾಗಿನಟಿಸು ನೀ । ನಾ ವಿರೋಧಿಯಗೆಲ್ವೆತಾಳು ॥ ೧ ॥

(ಪೌರೇಶ ಬಂದು ದೂರದಿಂದ ಹೇಮರೇಖೆಯನ್ನು ನೋಡಿ )

**ರಾಗ - ಬಿಲಹರಿ** **ತಾಳ-ಅಷ್ಟ**

ಸುಂದರಿ ನಯನ ಮನೋಹರೆ । ಇವ । ಳಂದದ ಸತಿಯರೀ ಭುವನ ದೊಳಿಹರೆ ॥ ಮಂದಹಾಸದ ಮುಖಮಂಡಲ । ಕಂಡಾ । ಚಂದಿರ ನಾಚಿ ಹಾರಿದನು ಪಾಲ್ಗಡಲ ॥ ೧ ॥ ಹಲವು ಚೆಲುವುಗಳ ಸಾಕಾರ । ರೂಪಿ । ನೊಳು ಶೋಭಿಪುದುಚಿತ್ರತರ ಚಮತ್ಕಾರ ॥ ನೆಲದಲಿ ಮಿನುಗುವ ಶುಭತಾರೆ । ಬಾರೆ । ಒಲವ ತೋರೆನಗೆ ಬೀರೆ ವೈಯ್ಯಾರೆ ॥ ೨ ॥

**ರಾಗ- ಕಾನಡಾ** **ತಾಳ-ರೂಪಕ**

ಆ ತ್ರಯಾದ್ರಿ ನಗರ ತೊರೆದೆ ನಿನ್ನ ಮೋಹದಿ । ರಾತ್ರಿ ಹಗಲು ತಪಿಸುತಿರುವೆ ಮನದ ಕಾಮದಿ ॥ ಕ್ಷಾತ್ರವೀರ ನಾಗಿಗೆಲಿದೆ ಸ್ಫಟಿಕದೇಶವ । ಸೋತು ನಿನ್ನ ಬಳಿಗೆ ಬಂದೆ ನೀಡು ಅಭಯವ ॥ ೧ ॥

**ಭಾಮಿನಿ**

ಧ್ಯಾನ ತತ್ಪರಳಾಗಿ ಕುಳಿತಿರೆ । ಮೌನದೇ ಸಮ್ಮತಿಯ ಸೂಚನೆ । ತಾನಿವಳ ತಳ್ಳಿಸುವೆನೆನುತಲಿ ಮುಂದಡಿಯನಿಡಲು ॥ ಕ್ಷೋಣಿಪನ ತಡೆದಳುತತೂಕ್ಷಣ । ಜಾಣೆ ಮಣಿಮಂಜರಿಯು ತನ್ನಯ । ಗೋಣ ಕೊಂಕಿಸಿ ಕೈಮುಗಿದು ವಿನಯದಲಿ ಪೇಳಿದಳು ॥ ೧ ॥

**ರಾಗ- ಸುರುಟಿ** **ತಾಳ- ಏಕ**

ಅವಸರ ಪಡಬೇಡ । ಧ್ಯಾನದಿ । ಯುವತಿಯಿಹಳು ನೋಡ ॥ ಭವಿತವುದ ಶುಭವೆಣಿಸುತ ವತ್ಸರ । ದವಧಿಗೆ ಇಂದ್ರಾರ್ಚನೆಯನು ಗೈವಳು ॥ ೧ ॥ ವಾಸವವೃತವೇನೆ । ಬಹುಸಂ । ತೋಷವಾಯ್ತು ಕಾಣೆ ॥ ಈ ಸುಮತಿಯು ಎನಗೊಲಿವುದು ನಿಶ್ಚಯ । ಆಸೆಪಟ್ಟು ಬಂದುದಕೆ ಕೃತಾರ್ಥನು ॥ ೧ ॥

**ರಾಗ–ಕಾಂಬೋದಿ** **ತಾಳ– ಝಂಪೆ**

ವ್ರತನಿಯಮವನು ತಿಳಿದು ಸಹಕರಿಸಲು । ರೂಪ । ವತಿ ನಿನಗೆ ಜತೆಯಹಳು ಸನುಮತಿಯೊಳು ॥ ಹಿತವರಿತು ಸನ್ನೇಸಂಕೇತಗಳ ಗ್ರಹಿಸಿ । ಭಾಗ್ಯ । ಯುತನಾಗು ಹೇಮರೇಖೆಯನು ವರಿಸಿ ॥ ೧ ॥ ನೀನಿವಳ ಜತೆಗಾತಿ ಸಂಜ್ಞೆ ಯನ್ನರಿತು । ನಾನೇನು ಮಾಡಬೇಕೆಂಬುದನು ತಿಳಿಸು ॥ ಮಾನಿನಿಯನಿಂದ್ರ ಮಂದಿರದೊಳೇ ಇಡುವೆ । ಕಾಣಿಸುವೆ ಸ್ವರ್ಗವನು ನಮ್ಮ ಪುರದೊಳಗೆ ॥ ೨ ॥

**(ಸಮಾಧಾನದಿಂದ ನಿರ್ಗಮನ ; ಆಗಮಸೇನನ ಪ್ರವೇಶ)**

**ರಾಗ–ಘಂಟಾರವ** **ತಾಳ–ಅಷ್ಟ**

ಭೂರೀದುಗುಡದಿ ಬಹರಥನೆಡೆ । ಸಾರುತಾಗಮಸೇನ ಸಂಗತ । ಕಾರಣವ ಬೆಸಗೊಂಡನು॥೧॥

**ರಾಗ– ಮೊಂಡ್** **ತಾಳ– ಮಟ್ಟೆ**

ನಿನಗೇನಾದುದು ಸಖನೆ ಅನುವರ ಘಟಿಸಿತೊಕಾಣೆ । ಘನತೆಯ ಮುಸುಕಿತೆ ಬವಣೆ ಕನವರಿಸದೆ ಪೇಳದನೆ ॥ ೧ ॥ ಪೌರೇಶನ ದಾಳಿಯೊಳು ಊರಗಲಿದೆ ಸೋಲಿನೊಳು । ಧೀರನೆ ಕರುಣದಿ ಪೇಳು ಯಾರಿಹರ್‍ಯೆ ಪೊರೆವವರು ॥ ೨॥

**ರಾಗ– ಸೌರಾಷ್ಟ್ರ** **ತಾಳ– ತ್ರಿವುಡೆ**

ಕ್ಲೇಶಬಿಡು ಅಣಿಯಾಗು ಆ ಉ । ಲ್ಲಾಸದತ್ತ ಮಹಾಪರಾಕ್ರಮಿ । ತಾಸಹಾಯವ ನೀಡಿ ಸಲಹುವ । ಬೇಸರಿಸದೆ ॥ ೧ ॥

**(ಇಬ್ಬರೂ ಇಥಾಕಕ್ಕೆ ಪ್ರಯಾಣ ಮಾಡುವರು. ಪೌರೇಶ ಆಲೋಚಿಸುತ್ತಿರುವನು)**

**ರಾಗ–ಶಂಕರಾಭರಣ** **ತಾಳ–ಮಟ್ಟೆ**

ಸ್ವಸ್ಥಾನದಿ ಬಲಕೆ ವೃದ್ಧಿಯು । ಮಕರ ಜಲದಿ । ಮತ್ತಗಜವನೆಳೆದು ಕೊಲುವುದು ॥ ಸುತ್ತಿ ತಟದಿಬೀಳಲದರ ನೆತ್ತಿಕಚ್ಚಬಹುದು ನಾಯಿ । ಹೊತ್ತನಿಲ್ಲಿ ಕಳೆಯ ಬಾರದು । ನಾನೆನೆದೊಡೀಗ । ರಕ್ತ ಪ್ರಭೆಯ ನೆರವು ದೊರೆವುದು ॥ ೧ ॥

(ರಕ್ತ ಪ್ರಭೆಯ ಪ್ರವೇಶ- ಪೌರೇಶನನ್ನು ನೋಡಿ )

ರಾಗ-ಹಂಸಧ್ವನಿ ತಾಳ- ಏಕ

ಕರೆಸುದುದೇತಕೆ ತಿಳುಹು । ನೀ । ವರಿಸಿಹೆ ಎನ್ನನು ಮೊದಲು ॥ ಹರಿಹರನು ಲೆಖ್ಖಿಸೆನು । ಮುನಿ । ದರೆ ಮಾರಿಯು ಕೇಳ್ವಾನು ॥ ೧ ॥

ರಾಗ-ತುಝಾವಂತು ತಾಳ-ಕೋರೆ

ತರುಣಿ ಹೇಮರೇಖೆಗಾಗಿ । ಕೊರಗಿ ಕರಗುತಿರುವೆ ನಾನು । ಭರದೊಳಾಕೆ ಎನ್ನ ಪುರಕೆ ಬರುವತೆರದೊಳು । ತಂತ್ರ । ವಿರಚಿಸೀಗಳು ॥ ೧ ॥

ರಾಗ- ಕಲ್ಯಾಣಿ ತಾಳ-ಮಟ್ಟೆ

ಸಾಕು ಕಳವಳ । ನಿನಗಿ । ನ್ನಾಕೆ ವಶವಲ ॥ ಆ ಕಮಲಾಕ್ಷಿಯ ಜತೆಯಲಿ । ನೌಕೆಯೊಳ್ಪುರಕೈದಬಹುದು ॥ ೧ ॥

(ರಕ್ತಪ್ರಭೆ-ಪೌರೇಶರ ನಿರ್ಗಮನ- ಉಲ್ಲಾಸದತ್ತನ ಒಡ್ಡೋಲಗ)

ರಾಗ-ತೋಡಿ ತಾಳ-ಆದಿ

ಮುದದೊಳೋಲಗವಿತ್ತನು । ಉಲ್ಲಾಸದತ್ತ । ಮದದಿ ಶೋಭಿಸುತಿರ್ದನು ॥ ಕದನದೊಳೆನ್ನನು ಎದುರಿಸುವವರಿಲ್ಲ । ತ್ರಿದಶರು ಕರೆದಾಗಲೊದಗಿಬರುವರಲ್ಲ । ಅದುಭುತ ಸಾಧನೆಯಿದೆ ಚಕ್ರೇಶ್ವರ । ಪದವಿಯೊಳೆನ್ನಭ್ಯುದಯವ ಕಾಂಬೆನು ॥ ೧ ॥

(ಆಗಮಸೇನ ಮೀನರಥರ ಪ್ರವೇಶ-ಉಲ್ಲಾಸದತ್ತ ಅವರನ್ನು ನೋಡಿ )

ರಾಗ- ಸೌರಾಷ್ಟ್ರ ತಾಳ-ಅಷ್ಟ

ನೀವಿಬ್ಬರೊಂದಾಗಿ ಬಂದೀರಿಕಡೆಗಿಂದು । ಏನಿದೇನು ॥ ಬಲು । ನೋವಿನ ಸುಳಿಯಿದೆ ನಿಟ್ಟುಸಿರಿಡುವಿರಿ । ಏನಿದೆನು ॥ ೧ ॥

**ರಾಗ-ಕೇದಾರಗೌಳ** **ತಾಳ-ಝಂಪೆ**

ಕೇಳಿಥಾಕೇಶ ನೀನು । ಪೌರೇಶ ದಾಳಿಯನ್ನೆಸಗಿರ್ಪನು ॥ ಕಾಳಗದಿ ಜಯ ಕಾಣದೆ । ನಾ ಬಂದೆ । ಪಾಲಿಸೆನ್ನನು ಜವದಲಿ ॥ ೧ ॥ ಸೇನೆಯನು ಬಲ ಪಡಿಸದೆ । ರಾಜ್ಯವನು । ನೀನಾಳುತಿರ್ದೆಸುಖದಿ ॥ ತ್ರಾಣ ಸಾಲದೆ ಬಂದಿರೆ । ನಾನವರ । ಸೇನೆಯನು ಬಡಿದಟ್ಟುವೆ ॥ ೨ ॥

**(ಎಲ್ಲರು ಸ್ಫಟಿಕ ದೇಶದ ಕಡೆಗೆ ಹೊರಡುವರು-ರಕ್ತಪ್ರಭೆ ಕೊರವಂಜಿಯಾಗಿ)**

**ರಾಗ-ಪುನ್ನಾಗ** **ತಾಳ-ರೂಪಕ**

ಕಣಿ ಕಣಿ ಕಣಿ ಕಣಿ ಕಣಿ ಕಣಿ ಕಣಿಯ ಪೇಳುವೆ । ಕೇಳಿ । ಕಣಿಯ ಪೇಳುವೆ ॥ ಪಲ್ಲ॥ ಸಂಸಾರದಿ ಕಷ್ಟವೊ ವ್ಯಾಪಾರದಿ ನಷ್ಟವೊ । ವ್ಯಾಜ್ಯದಾಬಗೆ ಕ್ಲಿಷ್ಟವೊ ಮದುವೆಯಾಗಲಿಷ್ಟವೊ ॥ ೧ ॥ ಗಿಣಿಯಶಕುನವಲ್ಲ ಚಿಂತಾಮಣಿಯ ಕಡ್ಡಿಯಲ್ಲ । ಅನುಭವದಲಿ ಹಾಲುವಕ್ಕಿ । ತಿಳಿಸಿದಂಥ ಕಣಿ ॥ ೨ ॥ ಹಿಂದೆ ನಡೆದುದರುಹುತೀನಿ ಮುಂದಪ್ಪುದ ಹೇಳುತೀನಿ । ಒಂದೇ ಒಂದು ಕಾಯಿತನ್ನಿ ಎಲೆಯಡಿಕೆಯ ಹಿಡಿದು ತನ್ನಿ। ಕೊಳಗದೊಳಕ್ಕಿಯ ತನ್ನಿ ಹೊನ್ನು ನಾಣ್ಯದುಡ್ಡು ಕಾಸು । ಕೊಡಿ ಕೊಡಿ ಕೊಡಿ ॥ ೩ ॥

**(ಹೇಮರೇಖೆಯ ಬಳಿಗೆ ಬರಲು-ಅವಳು ಇವಳನ್ನು ಕಂಡು )**

**ರಾಗ-ಶ್ರೀರಂಜಿನಿ** **ತಾಳ-ಅಷ್ಟ**

ಬಾರೆ ಬಾ ಕೊರವಿ । ಭವಿತವ್ಯವ । ತೋರೆ ಬಂದಿರುವಿ ॥ ಘೋರದುರ್ವಿಧಿ ನಮ್ಮಗಾರುಗೆಡಿಸಿತವ್ವ । ದಾರಿಯ ತೋರುಜಾಣೆ । ಪ್ರವೀಣೆ ॥ ೧ ॥

**ರಾಗ-ನಾದನಾಮಕ್ರಿಯೆ** **ತಾಳ-ಏಕ**

ಅವಳಿ ಜವಳಿ ಮಕ್ಕಳು ನೀವು ಅಹುದೆ ಪೇಳಮ್ಮ। ಯುವತಿ ನೀನು ಹೇಮರೇಖೆ ಅಲ್ಲವೇನಮ್ಮ ॥ ಅವನಿಪಾಲ ಮೀನರಥನಿಗೊಲಿದೆಯಲ್ಲಮ್ಮ । ಹವಣಿಸಿರ್ಪ ನಿನಗಾಗಿ ಪೌರೇಶ ಕೇಳಮ್ಮ ॥ ೧ ॥ ಮೌನವ್ರತದ ನಟನೆಯಾಕೆ ಜಾಣೆ

ಪೇಳವ್ವ । ನೀನು ಇಂದ್ರನನ್ನು ನಿಷ್ಠೆಯಿಂದ ಸ್ಮರಿಸವ್ವ ॥ ಮಾನಿನಿ ತ್ರಯಾದ್ರಿಪುರಕೆ ಹೋಗೆ ನಮ್ಮವ್ವ ॥ ಕಾಣೆವಿಂದ್ರಗುಡಿಯೊಳ್ ಧ್ಯಾನಮಾಡಿ ಸುಖಿಸವ್ವ ॥ ೨ ॥ ಗಿಡಗವೊಂದು ಗಿಣಿಯ ನುಂಗೆ ಕಾದುಕುಳಿತ್ಯೆತಿ । ಒಡನೆ ಗಿಣಿಯು ಹಾರಿ ಬಲೆಯ ಮೇಲೆ ನಿಂತ್ಯೆತಿ ॥ ಮಡುಕಿ ಹಾರಿ ಬಂದು ಗಿಡಗಾ ಬಲೆಯೊಳ್ ಬಿದ್ದ್ಯೆತಿ । ಜಡಕ ಬಿಡಿಸಿಕೊಂಡು ಗಿಣಿಯು ಹಾರಿ ಹೊಗ್ಯೆತಿ ॥ ೩ ॥

**(ಕೊರವಂಜಿ ಮರೆಯಾಗಿ ಹೋಗುತ್ತಾಳೆ. ರಕ್ತ ಪ್ರಭೆ ಪೌರೇಶನ ಬಳಿಗೆ ಬರುತ್ತಾಳೆ )**

**ರಾಗ – ಶಂಕರಾಭರಣ                ತಾಳ– ತ್ರಿವುಡೆ**

ಮೊದಲು ವಚನದ ನಿತ್ತ ತೆರದಿರಲಿ । ಒದಗಿ ಬಂದು ಸಹಾಯ ಮಾಡಿದೆ । ಮುದದಿ ನಡೆಪುರಕಿಂದು ಬಹಳಾ । ಸುದತಿ ನಿನ್ನಯ ಜತೆಯೊಳು । ವಹಿಲ ದಿಂದ ॥ ೧ ॥ ರಕ್ತಪ್ರಭೆ ನೀನೆನ್ನ ಮನದ ವಿ । ರಕ್ತಿಯನು ತೊಲಗಿಸಿದೆ ಭಾಪುರೆ । ರತ್ನರೇಖೆಯನೊಯ್ವೆನೆನ್ನಯ। ಪಟ್ಟಣಕೆ ಪರಿತೋಷದಿ । ನಾವೆ ಯೇರಿ ॥ ೨ ॥

**(ಉಲ್ಲಾಸದತ್ತ ಮೀನರಥಾದಿಗಳು ಬರುತ್ತಿರುವಾಗ – ಬೇಹುಗಾರರು ಬಂದು)**

**ರಾಗ–ಮುಖಾರಿ ತಾಳ–ಆದಿ**

ಪೌರೇಶ ಗೈದ ಸರ್ವನಾಶ । ನೌಕೆಯ ನಡರಿ । ಸೇರಿರ್ಪನಯ್ಯ ತನ್ನ ದೇಶ ॥ ನಾರಿಯರನ್ನೆಳೆದೊಯ್ದರು ಘನ ಭಂ । ಡಾರವ ಸೂರೆಯ ಗೈದರು ಖೂಳರು । ಊರದೋಚಿ ಪರಿವಾರಸಹಿತ ಗಡಿ । ಪಾರಾದರುಧಿಕ್ಕಾರ ನೀಚರಿಗೆ ॥ ೧ ॥

**ವಾರ್ಧಿಕ**

ಹಾ ಹೇಮರೇಖೆ ನಿನಗೀ ದುರ್ದೆಸೆಯು ಬಂತೆ । ಮೋಹದಿಂದೆನ್ನ ವರಿಸಿದ ನಿನ್ನ ರಕ್ಷಿಸುವ । ಸಾಹಸವು ಎನಗಿಲ್ಲವಿನ್ನೇಕೆ ಬದುಕೆಂದು ಮೀನರಥ ಗೋಳಿಟ್ಟನು ॥ ದ್ರೋಹಿಗಳ ನೆಲೆಗೆ ಕ್ಷಿಪ್ರದಿ ಪೋಗಿ ಸತ್ವದಿಂ । ದಾಹವದೊಳವರ

ಸಂಹರಿಸಿ ನಿನ್ನರಸಿಯಂ ನಾ । ಹುಡುಕಿ ತರದಿರಲು ನಿನ್ನಸಖನಲ್ಲ । ತಾನೆಂದಗಮ ಸೇನನು ॥ ೧ ॥

**ರಾಗ- ಆರಭಿ** **ತಾಳ -ಅಷ್ಟ**

ಕಾರ್ಯ ಕೈಮಿಂಚಿತಲ್ಲ । ಸಾಹಸ ಧೈರ್ಯ । ಶೌರ್ಯಕಾಸ್ಪದವೆ ಇಲ್ಲ ॥ ಚೋರರಂದದಿ ಬಂದರಿಪುಗಳು । ಜಾರಿದರು ಸಂಸ್ಕಾರಹೀನರು ॥ ೧ ॥ ನಮ್ಮೊಳೊಕ್ಕೂಟವಿಲ್ಲ । ಗೃಹೀಕರ । ಧರ್ಮವ ಮರೆತವೆಲ್ಲ । ದುರ್ಮದಾಂಧರ ದಂಡಿಸದೆ ಬಿಡೆ । ಕರ್ಮಬಾಹಿರರಾಗಿ ಕೆಡುವೆವು ॥ ೨ ॥

**ರಾಗ- ಕೇದಾರಗೌಳ** **ತಾಳ-ಏಕ**

ವೈರಿಗಳ ನಿರ್ನಾಮಕ್ಕಿನ್ನು ದಾರಿ । ಯಾವುದೆಂದು ಪೇಳು । ವೀರ । ನಿನ್ನಭೀಷ್ಟದಂತೆ ನಡೆವೆವು । ಛಲದಿ । ದುಡಿವೆವು । ಕಾದಿ । ಮಡಿವೆವು । ಕೀರ್ತಿ । ಪಡೆವೆವು ॥ ೧ ॥ ಸುಳಿವುಗೊಡದೆ ರಾಯಭಾರ ದೊಳಸಂಚಿನೊಳು ತ್ರಯಾದ್ರಿ ಪುರವ । ಗೆಲುವ ತಂತ್ರ ಗೈವೆನೆದಕೆ ಸಿದ್ಧರಾಗಿರಿ । ನುಡಿಗೆ । ಬದ್ಧರಾಗಿರಿ ಬಲುಪ್ರ । ಬುದ್ಧರಾಗಿರಿ । ಮನದಿ । ಶುದ್ಧರಾಗಿರಿ ॥ ೨ ॥

**(ಆಗಮಸೇನ-ಮೀನರಥರನ್ನು ಬೀಳ್ಕೊಟ್ಟು ಅರಮನೆಗೆ ಬಂದ)**

**ಭಾಮಿನಿ**

ವರತ್ರಯಾದ್ರಿ ರಹಸ್ಯ ವರಿಯಲು । ಕರೆದು ಕಳುಹಿಸಿ ಗುಪ್ತಚಾರರ । ಅರಸಿ ಸಪ್ತದ್ವೀಪ ಪಾಲರವ್ಯೂಹವನು ಗೈದು ॥ ದುರುಳರನುದಂಡಿಸುವಕಾರ್ಯಾ । ಚರಣೆಯೊಳು ಮುಂದಾಗಿ ಪೊರಡುವ । ಭರದೊಳಿರಲಾಪದ್ಮರೇಖೆಯು ಮಣಿದು ಪೇಳಿದಳು ॥ ೧ ॥

**ರಾಗ- ಬೇಗಡೆ** **ತಾಳ- ಏಕ**

ಏನಿದೀ ಗಂಭೀರಯೋಚನೆಯು । ಮನಮೋಹನಾಂಗನೆ । ಆನನದೊಳಾತಂಕ ಸೂಚನೆಯು ॥ ಚೂಣಿಯೆಳ್ಳೈದಿ ತ್ರಯಾದ್ರಿಯ ಮುತ್ತುವ । ಜಾಣತನದ ಪಯಣದ

ಬಗೆಯರಿತೆನು ॥ ೧ ॥

**ರಾಗ– ಕೇದಾರಗೌಳ** **ತಾಳ–ಅಷ್ಟ**

ಆ ತ್ರಯಾದ್ರಿಯ ಮುತ್ತಲೋಸುಗ ವಿಜಯದ । ಯಾತ್ರೆಕೈಗೊಳ್ಳುವೆನು ॥ ಪುತ್ರತೇಜೋದತ್ತನ ನಿನ್ನ ಸ್ವಾಧೀನ । ಕಿತ್ತು ನಾ ಪೊರಡುವೆನು ॥ ೧ ॥

**ರಾಗ– ಕಾನಡಾ** **ತಾಳ–ರೂಪಕ**

ಏನಿದೆಂಥ ಯೋಚನೆ ಯಾಕಿಂಥ ಸೂಚನೆ । ಪ್ರಾಣಕಾಂತ ಕೇಳ್ ಭವಿಷ್ಯವಾಣಿ ಕೇಳಿ ತರಹರಿಸುತ । ನಾನಧೀರಳಾಗಿ ಇರ್ದೆ । ನೀನೆನಗೀಹೊಣೆ ಹೊರಿಸಿದೆ ॥ ೧ ॥

**ರಾಗ– ಮಧ್ಯಮಾವತಿ** **ತಾಳ–ಮಟ್ಟೆ**

ಧೈರ್ಯವೇ ಸಂಪತ್ತು ಬದುಕಿಗೆ । ನೀನೇತಕೆ । ಯಾರೋನುಡಿದ ಕಣಿಯ ಸ್ಮರಿಸುವೆ ॥ ದೂರ ಪಯಣ ಘೋರಯುದ್ಧ । ಕಾರ್ಯ ಕಠಿಣವೆಂದು ಗ್ರಹಿಸಿ । ನಾರಿ ನಿನಗೆ ಭಾರವಹಿಸಿ । ಈ ರೀತಿಯ ಸಲಹೆ ಕೊಟ್ಟೆ ॥ ೧ ॥

**ರಾಗ– ಹಿಂದೋಳ** **ತಾಳ–ತ್ರಿವುಡೆ**

ಕಾಂತಕೇಳೈ ಛಲ ಬಲದ ಬಲು । ಪಂಥವನು ನಾನರಿಯೆನು ॥ ಅಂತರಂಗದಿ ಶುಭದ ಬರವನೆ । ಚಿಂತಿಸುತ ದಿನಕಳೆವೆನು ॥ ೧ ॥

**ವಾರ್ಧಿಕ**

ಇದು ಗೃಹಿಕರ ಸಾರ ಸಂಸ್ಕೃತಿಯ ಸಂಪತ್ತು । ಪದುಮರೇಖೆಯೆ ನಿನ್ನ ಹೃದಯದಾಳವು ಗೊತ್ತು । ಸುದತಿತವಕರಕೆ ಸುರದಾರವದ ಸುತ್ತುವೆನು ಇದು ಬಾಳ ರಕ್ಷೆ ನಿನಗೆ ॥ ಮದುವೆಯಲಿ ತೊಡಿಸಿದಾ ಮಾಂಗಲ್ಯ ಕೊರಳೊಳಿದೆ । ಒದಗಿಸಿದೆ ಈ ಸೂತ್ರ ಬಲದಿಂದ ಮುಂದಿನ । ಭ್ಯುದಯವನು ಹಾರೈಸಿ ಕಾದಿರ್ಪೆ ಬೇಗಬಾ ತ್ರಿದಶಪತಿ ಕಾಪಾಡಲಿ ॥ ೧॥

**ಕಂದಪದ್ಯ**

ದ್ವೀಪಾಧಿಪರಂನೆರಹುತ ಭೂಪಂ । ಬಲಸಹಿತಾನಾವೆಯ ನೇರ್ದಾಗಳ ॥ ಆ ಪಯಣದ ಪರಿಚಿಂತಿಸಿ । ಲೋಪವುಬರದೊಲ್ ಶರಧಿಯ ನೀಕ್ಷಿಸು ತೆಂದಂ ॥ ೧ ॥

**ರಾಗ– ತೋಡಿ** **ತಾಳ–ಅಷ್ಟ**

ಕಂಡಿರೇ । ವಾರಿಧಿಯನ್ನು । ಕಂಡಿರೇ ॥ ಪಲ್ಲ ॥ ಚಂಡತೆರೆಗಳನ್ನು ಸೃಜಿಸಿ । ಬಂಡೆಗದ ನಪ್ಪಳಿಸಿ ಸುಳಿಸಿ । ಹಿಂಡುಶಿಲೆಗಳ ಬೀಳಿಸುವೆನೆಂ । ದೊರೆವುದು ಘೋರ್ಗರೆವುದು ॥ ೧ ॥ ಏರಿಳಿವಲೆಖ್ಖಿಸದೆ ಸಾಗಿ । ಧಾರಿಣಿಯ ನಪ್ಪಳಿಸಿ ಬಾಗಿ । ಕಾರ್ಯತಂತ್ರದಿ । ನಿರತವಾಗಿದೆ ಬೋಧಿಸಿ ಪರಿಶೋಧಿಸಿ ॥ ೨ ॥ ಗ್ರಹಿಸಿ ನಾವಿದ ಸಾಗಬೇಕು । ಅಹಿತರನು ನುಗ್ಗೊತ್ತಬೇಕು । ಸಹಸಿಗಳಿಗೀ ಯಾತ್ರೆ ಸ್ವರ್ಗ ನಡೆಯಿರೊ ಜಯ ಪಡೆಯಿರೊ ॥ ೩ ॥

**(ಪ್ರಯಾಣ ಮುಂದುವರಿಯುವುದು – ಪೌರೇಶನ ಓಲಗ)**

**ರಾಗ–ಬೇಹಾಗ್** **ತಾಳ–ಏಕ**

ಪೌರೇಶನ ಸಭೆ ಗೈತಂದರು ಸಂ । ಚಾರಿ । ವರ್ತಕರು ॥ ತೋರಿಸಿ ತೇಜಿಯಮಣಿ ದಿಂತೆಂದರು । ಕಾರ್ಯ ರಹಸ್ಯವನು ॥ ೧ ॥ ನೀನೇ ರಕ್ಷಕ ನಮ್ಮಯ ಬಾಳಿಗೆ । ಕಾಣಿಸು ಕರುಣೆಯನು ॥ ಕ್ಷೋಣಿ ಇಥಾಕಾ ನೆಲೆಯಿಂ ಬಂದೆವು । ವಾಣಿಜ್ಯವ ನೆನೆದು ॥ ೨ ॥

**ರಾಗ– ಕೇದಾರಗೌಳ** **ತಾಳ–ಅಷ್ಟ**

ಕ್ಷಾಮವೆ ನಿಮ್ಮಯ ರಾಜ್ಯದಿ ಬದುಕಲೀ । ಭೂಮಿಗೆ ಬಂದಿಹಿರಿ ॥ ಆ ಮಹಾರಾಜನೇನಾದ ದೈನ್ಯದೊಳಿಂತು । ಸಾಮರಸ್ಯವ ಪೇಳ್ವಿರಿ ॥ ೧ ॥ ವೀರನುಲ್ಲಾಸದತ್ತನು ಮತಿವಂತನು । ವೈರ ಹೋರಾಟದಲಿ ॥ ಯಾರಿಗೂ ಹಿತವಿಲ್ಲ ಸಖ್ಯವೆ ಸೊಗಸೆಂದೀ । ಊರಿಗಟ್ಟಿದ ಹಿತದಿ ॥ ೨ ॥ ಸ್ಫಟಿಕ ದೇಶವ

ಗೆದ್ದು ಹೇಮರೇಖೆಯ ತಂದ । ಘಟನೆಯ ಮರೆತನೇನು ॥ ಹಟವ ಬಿಂಕವ ಬಿಟ್ಟು ಬಂದಿಲ್ಲಿ ಸ್ನೇಹದ । ನಟನೆಯ ತೋರ್ಪಿರೇನು ॥ ೨ ॥

**ರಾಗ–ಗೌಳ** **ತಾಳ– ಮಟ್ಟೆ**

ಛೇ ಛೇ ನಮ್ಮೊಳು ಕಪಟದ ಯೋಚನೆಯೇ ಇಲ್ಲ । ಆಚದುರನು ಮೀನರಥನ ಧಿಕ್ಕರಿಸಿದ ಮಲ್ಲ ॥ ಚಾಚೂ ದೋಷವು ನಿನ್ನೊಳಗಿಲ್ಲೈ ಸುಳ್ಳಲ್ಲ । ಗೋಚರ ಫಲ ನಿನಗೊಲಿಯುತ ಚಲುವೆ ಬಂದಳಲ್ಲ ॥ ೧ ॥

**ರಾಗ – ಕಲ್ಯಾಣಿ** **ತಾಳ–ಝಂಪೆ**

ಉಲ್ಲಾಸದತ್ತ ಸುಖನಾದುದಿದು ಭಾಗ್ಯ । ಉಲ್ಲಾಸದಿಂದ ನೀವಿಲ್ಲಿಹುದೆ ಯೋಗ್ಯ ॥ ಎಲ್ಲಿಹಿರಿ ಎಂತಿಹಿರಿ ನೀವೇ ನಿರ್ಧರಿಸಿ । ಎಲ್ಲಾ ವ್ಯವಸ್ಥೆ ನಿಮಗೊದಗಿಸುವೆ ಗ್ರಹಿಸಿ ॥ ೧ ॥ ಕೌಶಲ್ಯದೀಕುದುರೆಯಿರಲಿ ಕೋಟೆಯಲಿ । ವಾಸವನ ಮಂದಿರದೊಳೀ ವಾಜಿಯಿರಲಿ ॥ ನಾ । ಸದಾ ವ್ಯಾಪಾರ ವಹಿವಾಟು ಗೈವೆ । ಆಸರೆಯ ನಿತ್ತುದಕೆ ನಿನಗೆ ಕೈಮುಗಿವೆ ॥ ೨ ॥

**(ಪೌರೇಶನ ಒಪ್ಪಿಗೆ ಪಡೆದು ಹೋಗುವರು. ಉಲ್ಲಾಸದತ್ತ – ಮೀನರಥ ಆಗಮಸೇನರು ಬರುವರು)**

**ರಾಗ– ಮೋಹನ** **ತಾಳ– ತ್ರಿವುಡೆ**

ಮುತ್ತುವುದು ಈ ಪುರದ ದುರ್ಗದ । ಸಪ್ತದ್ವಾರಗಳನ್ನು ಒಮ್ಮೆಗೆ । ಇತ್ತಲಾರೂ ಸುಳಿಯದಂತೆ ಪ್ರ । ಯತ್ನಿಸುವುದು ॥ ೧ ॥

**(ವೈರಿಗಳ ಆಗಮನದ ಬಗ್ಗೆ ಚಾರರು ಪೌರೇಶನಲ್ಲಿ)**

**ರಾಗ–ತೋಡಿ** **ತಾಳ–ಏಕ**

ಅಯ್ಯಯ್ಯೋ ಮೋಸವಾಯ್ತಲ್ಲ । ಕೇಳಿದೆ ವೈಗುಲ್ಲ । ಸುಯ್ಯೆಂದು ಬಾಣ ಬಂತಲ್ಲ ॥ ಕೈಯೊಳಗಾಯುಧ ಪಿಡಿದಿಹ ಭಟರು । ಮೈಯೆಲ್ಲಾ ಕಣ್ಣಾಗಿಹ ರವರು । ಒಯ್ಯನೆ ದುರ್ಗವ ನೇರುತಲಿಹರು । ಬಯ್ಯುತ ನಿನ್ನನು ನಿಂದಿಸುತಿಹರು

॥ ೧ ॥ ಅತ್ತಲು ಇತ್ತಲು ಸುತ್ತಲು ನಿತ್ತು । ಕತ್ತಿಯನೆತ್ತಿ ಕತ್ತಾಡಿಪ ಗತ್ತು । ಚಿತ್ತಕೊತ್ತಿತಾಪತ್ತಿನ ಒತ್ತು । ಮುತ್ತಿಗೆಯೊತ್ತಡ ತುತ್ತಿಗೆ ಕುತ್ತು ॥ ೨ ॥

**ರಾಗ– ಪಂಚಾಗತಿ** **ತಾಳ–ಮಟ್ಟೆ**

ದುಷ್ಟ ವರ್ತಕರನು ಜವದಿ ಕಟ್ಟಿ ತನ್ನಿರೆನಲು ಚರರು । ತಟ್ಟಿನವರ ಪಿಡಿದು ತರಲು ಸಿಟ್ಟಿನಿಂದಲಿ ॥ ೧ ॥ ಕಪಟ ವೇಷದಿಂದ ಬಂದು ಗುಪಿತದಿಂದಲಿಲ್ಲಿ ಉಳಿದು । ವಿಪರೀತವ ಗೈದಿರಲ್ಲ ನಿಪುಣರ್ರೈ ನಿಜ ॥ ೨ ॥ ನೀನು ಮುಳಿಯ ಬೇಡ ಮೊದಲು ನಾನು ರಾಯಭಾರಿಯಾಗಿ । ಈ ನಿರೋಧವರಿವೆನಿಂದ್ರ ನಾಣೆ ನಿಜವಿದು ॥ ೩ ॥ ಬೇಗ ಪೋಗು ಬಂದ ಭಟರ ತಾಗು ಬಾಗುಗಳನು ತಿಳಿದು । ಬೇಗೆಯೇಳದಂತೆ ಆಪ್ತ । ನಾಗಿ ವರ್ತಿಸು ॥ ೪ ॥

**(ಪೌರೇಶನ ಬಳಿಯಿಂದ– ಉಲ್ಲಾಸದತ್ತನ ಬಳಿಗೆ ಬಂದು )**

**ರಾಗ– ಮೋಹನ** **ತಾಳ–ಏಕ**

ಜೇನಿನ ಪಡೆಯಂದದಿ । ಬಂದಿಹಿರಲ್ಲ । ಸೇನೆಯ ಕೊಡುತಲಿ ॥ ಪ್ರಾಣದಾಸೆಯ ಬಿಟ್ಟು ತ್ರಾಣ ತೋರುವಿರಲ್ಲ । ಸಲ್ಲ ಒಗೆಯಿರಿ ಬಿಲ್ಲ ತಿರುಗಿರಿ ಎಲ್ಲ । ನಡೆಯಿರಿ । ಮೆಲ್ಲನೆ ಹಿಂದಕೆ ॥ ೧ ॥ ಎಚ್ಚರಿಕೆಯ ಮಾತನು । ಪೇಳುವೆ ನೀನು । ಹುಚ್ಚನೊ ನೃಪದೂತನೊ ॥ ಕಿಚ್ಚಿನಂದದ ದಾಳಿಗಚ್ಚರಿಯಾಯ್ತೆ ಗಾಢ । ಮೂಢ ಅರಿಯದೆ ಕೇಡ ನುಡಿಯಲು ಬೇಡ ಹೆಮ್ಮೆಯ ಕೋಡ ಕಿತ್ತೆಸೆವೆವು ॥ ೨ ॥

**ರಾಗ– ಶಂಕರಾಭರಣ** **ತಾಳ–ಏಕ**

ಆಹಾಹಾಹಾ ನಾನಾರೆಂಬುದ ಗುರುತಿಸಲೇಇಲ್ಲ । ಓಹೋಹೋಹೋ ಯುದ್ಧದಗುಂಗೇ ತಲೆಗೇರಿಹುದಲ್ಲ ॥ ಹೇಹೇ ನಾನೇ ಚನ್ನ ನಿಮ್ಮವನು । ಬೇಹಿನ ಚರ । ನಾನಿಲ್ಲಿ ಉಳಿದಿಹೆನು ॥೧ ॥ ಚನ್ನನೆ ಕೇಳ್ ನೀ ಚನ್ನಾಗಿರುವೆಯ ಇನ್ನೇನಿದೆ ಗುಪಿತ । ನಿನ್ನಿಂದಲಿ ಪರಿಯನ್ನರಿತರೆ ನಮಗಿನ್ನು ವಿಜಯ ಖಚಿತ ॥

ಉನ್ಮತ್ತನು । ಪೌರೇಶದುರಾತ್ಮನು । ತನ್ನೊಳಗೇನಾಲೋಚಿಸು ತಿರುವನು ॥ ೨ ॥

**ರಾಗ- ಕೇದಾರಗೌಳ ತಾಳ-ಝಂಪೆ**

ಮುಂದಾಗಿ ಮಾರ್ಬಲವನು । ಬಲಿಕೊಡುವು । ದೊಂದೆ ರಣತಂತ್ರವೇನು ॥ ದ್ವಂದ್ವಯುದ್ಧಕೆ ಕರೆಯಲು । ಪೌರೇಶ । ಬಂದಪನು ಘನಮದದೊಳು ॥ ೧ ॥ ಧೂರ್ತ ಪೌರೇಶಗರುಹು । ಉಲ್ಲಾಸ । ದತ್ತನೊಳು ಹಳಚಿ ಗೆಲಲು ॥ ಸ್ತುತ್ಯ ನೀ ವಿಜಯಿಯೆಂದು । ಘೋಷಿಸುತ । ಮುತ್ತಿಗೆಯ ತೆಗೆವೆವೆಂದು ॥ ೨ ॥ ಈ ತೆರೆದ ಸಂಧಾನದ । ಪರಿತಿಳಿದು । ಆ ತ್ರಯಾದ್ರಿಪನು ನಲಿದ ॥ ನೀತಿ ನಿಪುಣನು ನೀ ಭಲ । ಎನ್ನವಿ । ಖ್ಯಾತಿಗಿದು ಯುಕ್ತ ಕಾಲ ॥ ೩ ॥

**ರಾಗ-ಕೇದಾರಗೌಳ ತಾಳ-ಆದಿ**

ಬಿದ್ದನೆನ್ನೆಯ ಬಲೆಗೆ । ಉಲ್ಲಾಸದತ್ತ । ಬುದ್ಧಿ ಮಂಕಾಯ್ತೆ ಹೀಗೆ ॥ ಯುದ್ಧವ ಗೆಲ್ಲಲು ಗೈವೆನುಪಾಯವ । ಹೊದ್ದುವೆನಾ ರಕ್ತ ಪ್ರಭೆಯ ಸಹಾಯವ ॥ ೧ ॥

**(ದ್ವಂದ್ವಯುದ್ಧ ನಿರ್ಣಯದ ಸಭೆ-ಪೌರೇಶ- ಉಲ್ಲಾಸದತ್ತ-ಮೀನರಥ- ಆಗಮಸೇನ- ವೀರೇಶ-ವರ್ತಕರು-ಚಾರರು ಎಲ್ಲಾ ಸೇರಿರುವಾಗ )**

**ರಾಗ-ಮಧ್ಯಮಾವತಿ ತಾಳ- ರೂಪಕ**

ಶರಖಡ್ಗರಥ ಯುದ್ಧದಲ್ಲಿ ಗೆದ್ದವರನ್ನು । ಪರಿಪೂರ್ಣವಿಜಯಿಗಳೆಂದು ॥ ಅರಿತು ಮನ್ನಿಸಿ ರಣನಿಲ್ಲಿಸಬೇಕೆಂದು । ಸರುವರು ಸಮ್ಮತಿಸಿದರು ॥ ೧ ॥

**(ಉಲ್ಲಾಸದತ್ತ ಪೌರೇಶರು ಪರಸ್ಪರ ಎದುರಾಗಿ )**

ಉಲ್ಲಾಸದತ್ತ ನೀನತಿ ಪ್ರತಾಪಿಯು ಎಂಬ । ಸೊಲ್ಲ ಕೇಳಿರ್ದೆನು ಮೊದಲು ॥ ಬಿಲ್ಲ ಝೇಂಕರಿಸಿ ಬಂದಿದಿರಾಗು ಶರಯುದ್ಧ । ದಲ್ಲಿ ಕಾಣಿಸು ಕೌಶಲ್ಯ ವನು ॥ ೧ ॥ ಭಳಿರೆ ಪೌರೇಶ ನಿನ್ನಗ್ಗಳಿಕೆಯ ಬಲ್ಲೆ । ಮಿಲನವಿದೊಂದು ವಿಶೇಷ ॥ ಕಲಿತನ ಕಾಣಿಸು ಬಾಮುಂದೆ ಬಾಣವ । ಕಳುಹು ಮಿಂಚಲಿ ವೀರಾವೇಷ ॥ ೨ ॥

**ವಾರ್ಧಿಕ**

ಅನಲಶರ ವರುಣಶರ ಕುಧರಶರ ಕುಲಿಶಶರ । ಘನತಿಮಿರಶರಕೆ ರವಿಶರವ ಪ್ರತಿಕರಿಸುತ್ತ । ವಿನುತ ಮೇಘಾಸ್ತ್ರ ವಾಯುವ್ಯಾಸ್ತ್ರ ಸರ್ಪಾಸ್ತ್ರ ಗರುಡಾಸ್ತ್ರಗಳ ಬಳಸುತ ॥ ಸೆಣಸೆ ವೀಕ್ಷಕರು ಸರಿಸಮರೆಂದು ಘೋಷಿಸಲು । ಕನಲಿ ಖಡ್ಗವ ಕೊಂಡು ವರಸೆಯಿಂದೆತ್ತಿಪೊ । ಯ್ದನು ಭವದಿ ಹಳಚಲಿಕ್ಕಡಿ ಯಾದುದಿರ್ವರಸಿ ಜನರೆಲ್ಲ ಬೆರಗಾಗಲು ॥ ೧ ॥

**ರಾಗ- ಮೋಹನ** **ತಾಳ -ಆದಿ**

ಸರಿಸಮ ಹೋರಾಡಿದೆ । ನಿನ್ನಯ ಶೌರ್ಯ । ದಿರವನು ನಾ ನೋಡಿದೆ ॥ ಭರಿತ ಕೈಚಳಕದ ರಥಯುದ್ಧ ಕೊದಗಿ ಬಾ । ಪರಿಕಿಪೆ ಸಾಹಸವ ॥ ೧ ॥ ರಕ್ತ ಪ್ರಭೆಯ ಧ್ಯಾನಿಸೆ । ಬಂದವಳು ಸಾ । ರಥ್ಯವ ತಾ ವಹಿಸೆ ॥ ಅತ್ಯಂತ ವೇಗದೊಳಂಬರ ಕೇರುತ । ಸುತ್ತಿಸುಳಿಸಿ ಕಾದುತ ॥ ೨ ॥ ದಾಳಿಯೊಳವ ರೀರ್ವರು । ಹೋರಲು ಸುಳಿ । ಗಾಳಿಯೆದ್ದುದು ಸುತ್ತಲು ॥ ಗಾಲಿಯುರುಳಿ ಬಿದ್ದನುಲ್ಲಾಸದತ್ತನು । ಸೋಲಾಯಿತೆಂದರೆಲ್ಲ ॥ ೩ ॥

**ರಾಗ-ತೋಡಿ** **ತಾಳ-ತ್ರಿವುಡೆ**

ಗೆಲುವು ತನಗಾಯ್ತೆಂಬ ಮದದ । ಗ್ಗಳಿಕೆಯಲಿ ಪೌರೇಶನಿರೆ । ಕೀಲಲಗಿನಂತೆದೆ ಗಿಳಿಯೆ ರಕ್ಕಿಸಿ । ಇಳೆಯೊಳುರುಳಿ ॥ ೧ ॥

**ರಾಗ- ನೀಲಾಂಬರಿ** **ತಾಳ-ಕೋರೆ**

ತೀರಿತೇ ನಿನ್ನಾಸೆಯೆಲ್ಲ । ಪೂರೈಸಿರ್ಪೆನಲ್ಲ ನಲ್ಲ । ಚೂರಿಯಂತೀಕೀಲು ಎದೆಯ ಸೇರಿತಯ್ಯಯ್ಯೋ । ಪ್ರಾಣ । ಹಾರಿತಯ್ಯಯ್ಯೊ ॥ ೧ ॥ ಮೊದಲು ನಿನ್ನನಪ್ಪಿದುದಕೆ ಒದಗಿ । ಸಾವನೊಪ್ಪಿಕೊಂಡೆ । ತುದಿಯಕಾಲ ನಿನ್ನ ಬಳಿಯೊಳಾಯಿತು । ಋಣವು । ಕಳೆದು ಹೋಯಿತು ॥ ೨ ॥

**(ರಕ್ತಪ್ರಭೆ ಸಾಯುವಳು- ಪೌರೇಶ ಅವಳ ಬಳಿಬಂದು)**

ರಾಗ–ಸಾವೇರಿ ತಾಳ– ತ್ರಿವುಡೆ

ರಕ್ತಪ್ರಭೆಯೆ ನೀನು ರಕ್ಕಸಿಯೆ ರಮಣಿಮಣಿ । ರಕ್ತತಿಲಕವನಿಡುವೆ ಹಣೆಗೆ ॥ ತಕ್ಕೈಸುತೊಮ್ಮೆ ಕಡಿದ ಋಣಕೆ ಪ್ರಾಣಬಲಿ । ಯಿತ್ತೆ ನೀ ಸುಗುಣ ಶೃಂಗಾರೆ ॥ ೧ ॥

**(ಪೌರೇಶ ದುಃಖಿಸಿ ಸರಿಯುವಾಗ–ಉಲ್ಲಾಸದತ್ತ ಹತಾಶೆಯಿಂದ)**

ರಾಗ– ಆನಂದಭೈರವಿ ತಾಳ–ಆದಿ

ರಥಯುದ್ಧದೊಳಗೆ ಸೋಲು । ಇಂತಾಯ್ತು ಮನೋ । ರಥವೆಲ್ಲ ಮಣ್ಣು ಪಾಲು ॥ ಜತೆಗಾರರನ್ನು ಸೇರಿ । ಇಲ್ಲಿಗೆ ಬಂದೀ । ಗತಿಯಾಯ್ತೆ ಪರಿಭವದಿ ॥ ೧ ॥ ವರಬಲ ಗಳಿಸಿ ನಾನು । ಗೃಹೀಕರೊಳ್ । ಧುರಧೀರನೆನಿಸಿರ್ದೆನು ॥ ಸ್ಮರಿಸಿ ಮಹೇಂದ್ರನನು । ಪೌರೇಶನ । ಬ್ಬರವನು ನಿಲಿಸುವೆನು ॥ ೨ ॥

**(ಇಂದ್ರನ ಧ್ಯಾನ–ಸುರಮತಿಯ ಆಗಮನ)**

ರಾಗ–ನವರೋಜು ತಾಳ– ಏಕ

ಸ್ಮರಿಸಿದೆಯಾ ಸುರಪನನು । ಭೂ । ವರನೆ ನಾ ಬಂದಿಹೆನು ॥ ಪುರವರವನು ಬಿಟ್ಟಿಲ್ಲಿಗೆ ಬಂದಿಹೆ । ಮರುಕಕೆ ಕಾರಣವೇನೈ ಸೂಚಿಸು ॥ ೧ ॥ ಕಾಮುಕ ನೀ ಪೌರೇಶ । ಬಲು । ತಾಮಸದಾ ಪರಿವೇಷ ॥ ಹೇಮರೇಖೆಯನ್ನಪಹರಿಸಿದ ಪರಿ । ಗೀಮಹಿಗ್ಯೆ ತಂದೀಗತಿಯಾಯಿತು ॥ ೨ ॥

ರಾಗ–ಪೀಲು ತಾಳ–ಅಷ್ಟ

ಇಂದ್ರನೇ ಮೂರ್ತಿರೂಪದೊಳಿಹನಿಲ್ಲಿ । ಎಂದಿಗೂ ಪೂಜೆ ತಪ್ಪದ ನಿಯಮದಲಿ ॥ ಬಂದುದೈಶ್ವರ್ಯವಾಘವನದಯದಿ । ಕುಂದಿಲ್ಲ ಪೌರೇಶನಿಗೆ ಅನುವರದಿ ॥ ೧॥ ಇಂದ್ರನೆನಗೆ ವರವಿತ್ತಿಹ ಮೊದಲು । ಬಂದು ಬೆಂಬಲ ನೀಡಿ ಗೆಲ್ಲಿಸದಿರಲು ॥ ಮುಂದೆ ನಿಮ್ಮನು ನಂಬಲಾರರು ಜನರು । ವೃಂದಾರಕರು ಮೋಸಗಾರರೆನ್ನುವರು ॥ ೨ ॥ ಗುಡಿಯಿಂದ ಮೂರ್ತಿಯನಪಹರಿಸಿದರೆ । ಕಡೆಗಾಲವಹುದು ತ್ರಯಾದ್ರಿಯ ಪುರಕೆ ॥ ಬಿಡಿಸೆ ಪೂಜೆಯ ಮಹಾಪಾತಕ

ವಹುದು । ದೃಢಯಾತ್ರೆಯಿಂ ಪರಿಹಾರವಾಗುವುದು ॥ ೩ ॥ ಹಲವು ಯತ್ನದಿಯುದ್ಧ ಗೆಲ್ಲಲೇಬೇಕು । ಸಲಿಸು ಬೆಂಬಲವ ನೀ ಉಪದೇಶ ಸಾಕು ॥ ಬಳಿಕ ಯಾತ್ರೆಯಗೈದು ಶುದ್ಧನಾಗುವೆನು । ಛಲದಿ ನಿನ್ನೆದುರು ಪ್ರತಿಜ್ಞೆ ಗೈಯುವೆನು ॥ ೪ ॥

## ಭಾಮಿನಿ

ಕೊಡುವೆ ನಿನಗೆ ಅದೃಶ್ಯ ಮಣಿಯನು । ಕಡುಜವದಿ ನೀ ಜಯವ ಸಾಧಿಸು । ನುಡಿಗೆ ತಪ್ಪದಿರೆನುತ ತಾನಡಗಿದನು ಸುರಮತಿಯು ॥ ಪೊಡವಿ ಪತಿ ಸಂಕಲ್ಪ ಮಾತ್ರದಿ । ನಡೆದ ನಿಂದ್ರನ ಮಂದಿರಕೆ ಬಂ । ದೊಡನೆ ಕಂಡನು ವ್ರತದಿ ಕುಳಿತಿಹ ಹೇಮರೇಖೆಯನು ॥ ೧ ॥

## ರಾಗ- ಸುರುಟಿ ತಾಳ-ಏಕ

ಹೇಮರೇಖೆಯಿವಳು । ವ್ರತವನು । ನೇಮದಿ ನಡೆಸಿದಳು ॥ ಕಾಮಿಸಿ ನಾನೀ ಮೂರ್ತಿಯನೊಯ್ಯಲು । ತಾಮನದೊಳಗಂಜುತಲಸುತೊರೆವಳು ॥ ೧ ॥ ಪ್ರಕಟನಾಗಿ ನಾನು । ಪೇಳುವೆ । ಸಕಲ ವಿಚಾರವನು ॥ ಅಕಳಂಕಿನಿ ಬಂಧನ ಪರಿಹಾರದ । ಸುಖವನುಭವಿಸಲಿ ಎನುತವನರುಹಿದ ॥ ೨ ॥

## ರಾಗ-ಜಂಜೂಟಿ ತಾಳ-ಅಷ್ಟ

ನಿನ್ನಯ ನಿಯಮ ನಿಷ್ಠೆಯನು । ನೋಡಿ । ಕಣ್ಣರಳಿಸಿದ ಮಹೇಂದ್ರನು ॥ ಇನ್ನೇನೂ ಭಯಬೇಡ ಕಣ್ದೆರೆ ವಿಗ್ರಹ । ವನ್ನು ಕಿತ್ತೊಯ್ಯುವೆನು ಇದರಿಂ । ದುನ್ನತೋತ್ಪಾತಗಳು ಘಟಿಪವು ॥ ೧ ॥ ಭಗಿನಿ ಕ್ಷೇಮದೊಳಿಹಳೇನು । ಭಾವ । ನಗೆಗೀಡಾದೆನು ಪೇಳ್ವುದೇನು ॥ ಅಗಲದಿಲ್ಲಿರ್ದು ಮೂರ್ತಿಯ ಪೂಜೆ ಗೈದನು । ಹಗಲಿರುಳು ಧ್ಯಾನಿಸುತಲಿಹೆ ಕಿತ್ತೊಗೆಯದಿರು ನಾ । ನಿನಗೆ ಮಣಿವೆನು ॥ ೨ ॥ ಮಂಜರಿ ಬಾರಿತ್ತ ಧೀರೆ । ವಜ್ರ । ಪಂಜರ ನಿಮಗೆ ಆ ಕುದುರೆ ॥ ಅಂಜದೆ ಪೋಗೆ ಚನ್ನನು ಕರೆದೊಯ್ವನು । ಸಂಜೆಯಾಗುತ ಬಂತು ರಿಪುಮದ । ಭಂಜನೆಗೆ ವಿಗ್ರಹವನೊಯ್ಯುವೆ ॥ ೩ ॥

(ಮಣಿಮಂಜರಿ ಹೇಮರೇಖೆಯರನ್ನು ಕಳುಹಿಸಿ ವಿಗ್ರಹವನ್ನು ಅಪಹರಿಸುವನು. ಇಂದ್ರಮೂರ್ತಿಯ ಕಣ್ಮರೆಯನ್ನು ತಿಳಿದು ಕಂಗಾಲಾದ ಚರರು ಪೌರೇಶನ ಬಳಿಯಲ್ಲಿ )

**ರಾಗ- ಕವ್ವಾಚ್** **ತಾಳ-ಮಟ್ಟೆ**

ಮೋಸವಾಯಿತು । ಜೀಯ । ಮೋಸವಾಯಿತು ॥ ವಾಸವನ ಮೂರ್ತಿಯಿಲ್ಲ ಯಾರೊಯ್ದರೊ ಗೊತ್ತಿಲ್ಲ । ದೋಷಕಾರ್ಯವಾಯಿತಲ್ಲ । ನಾಶಕಾಲ ಬಂದಿತಲ್ಲ ॥ ೧ ॥

**ರಾಗ- ಮೋಹನ** **ತಾಳ-ಝಂಪೆ**

ಸತ್ತರೇನರ್ಚಕರು ಸುತ್ತಲಿಹ ಪಟುಭಟರು । ಕತ್ತೆಯನು ಕಾಯ್ದರೇನಯ್ಯ ॥ ಎತ್ತಲಿದ್ದರು ಬಿಡದೆ ಹುಡುಕಿ ಮೂರ್ತಿಯ ತಹುದು । ಮತ್ತಿದನು ಮರೆಯೆ। ತಲೆ ಕಡಿವೆ ॥ ೧ ॥ ಆಶ್ರಯವ ಕೇಳಿ ಬಂದಿರ್ದ ವ್ಯಾಪಾರಿಗಳ । ನಾಶಮಾಡುವದೀಗ ಬಿಡದೆ ॥ ಭಾಸುರಾಂಗಿಯರ ನೆಚ್ಚರದಿಂದ ಕಾಯ್ದಿಹುದು । ದೋಷ । ಗೈದರೆ ನಿಮ್ಮಕೊಲುವೆ ॥ ೨ ॥

**ರಾಗ- ಶಂಕರಾಭರಣ** **ತಾಳ-ಏಕ**

ಹೇಮರೇಖೆಯು ಮಂದಿರದಿ ಇಲ್ಲ । ಮತ್ತಲ್ಲಿ ಇರಿಸಿದ । ಆ ಮರದ ಹಯ ಮಾಯವಾಯ್ತಲ್ಲ ॥ ಈ ಮೋಡಿಯನರಿಯದೆ ಮರುಳಾದೆವು । ಭೀಮಬಲರು ಕವಿದಿರುವರು ಸುತ್ತಲು ॥ ೧॥

**ರಾಗ- ಪೂರ್ವಿ** **ತಾಳ-ರೂಪಕ**

ಈ ವಿವರವ ಕೇಳಿ ಪೌರೇಶ ಬಿಸುಸುಯ್ದು । ನಾವರಿಸಿದುದು ಸಂಕಟವು ॥ ಈವರೆಗಿಂದ್ರ ಪೂಜೆಯು ತಪ್ಪಿದುದೆ ಇಲ್ಲ । ದೇವರೇ ಇಲ್ಲವೆಂದಾಯ್ತು ॥ ೧ ॥ ಮರದ ಕುದುರೆಯೆಂದು ಮಾಯಾಯಂತ್ರವ ತಂದು । ಇರಿಸಿದರಲ್ಲ ವಂಚಕರು ॥ ಮರೆಯಾದಳಾ ಹೇಮರೇಖೆ ಮೂರ್ತಿಯ ಕದ್ದ । ರರರೆ ಇನ್ನೆಂತು ಸೈರಿಪುದು ॥ ೨ ॥ ಧಗಧಗಿಸುವ ಬೆಂಕಿ ಸುತ್ತಲೂ ಕವಿದಿದೆ । ಹೊಗೆಯಿಂದಲುಸಿರು

ಕಟ್ಟುವುದು ॥ ನಗರದೊಳೆಲ್ಲೆಲ್ಲು ಗಲಭೆ ಗೊಂದಲಗಳು । ಹಗೆಗಳು ಲಗ್ಗೆಯಿಕ್ಕಿಹರು ॥ ೩ ॥

**(ಭ್ರಮಿಷ್ಠನಾಗಿ ತಿರುಗುತ್ತಿರುವಾಗ– ವೀರೇಶ ಪ್ರವೇಶಿಸಿ )**

**ರಾಗ– ಭೈರವಿ** **ತಾಳ– ಏಕ**

ದಳಪತಿಗಳ ಕರೆಸೀಗ । ಮಾರ್ಬಲವನು ಪೊರಡಿಸು ಬೇಗ ॥ ಕಲಹದಿ ರಿಪುಗಳ ಗೆಲುವೆ । ಮಮ । ಬಲುಹನು ಕಾಣಿಸಿ ಕೊಡುವೆ ॥ ೧ ॥

**(ಯುದ್ಧ ಸಿದ್ಧತೆಗಾಗಿ ಇಬ್ಬರೂ ಹೋಗುವರು–ಉಲ್ಲಾಸದತ್ತ ಆಗಮಸೇನಾದಿಗಳು ಬರುವರು )**

**ರಾಗ– ತೋಡಿ** **ತಾಳ–ತ್ರಿವುಡೆ**

ವೀರರೇ । ಬನ್ನಿ । ಶೂರರೇ ॥ ಪ ॥ ಧೈರ್ಯವೇ ಸರ್ವತ್ರ ಸಾಧನ । ಶೌರ್ಯ ಗುಣವೇ ಪುರುಷಲಕ್ಷಣ । ಕಾರ್ಯ ತಂತ್ರದಿ ಗೆಲುವಿನಾಗುರಿ । ನೋಡಿರಿ । ತ್ವರೆ । ಮಾಡಿರಿ । ಪಡೆ। ಗೂಡಿರಿ । ಹೋರಾಡಿರಿ ॥ ೧ ॥

**(ಪೌರೇಶನೂ–ಉಲ್ಲಾಸದತ್ತನೂ ಎದುರಾಗುವರು)**

**ರಾಗ–ಕಲ್ಯಾಣಿ** **ತಾಳ–ಮಟ್ಟೆ**

ಧೂರ್ತರಾಗಿ ದೈವ ದ್ರೋಹಗೈದಿರೀಗಳು । ಮೂರ್ತಿಯನ್ನು ಕದ್ದಿರಲ್ಲ ಕಪಟ ಕ್ರಮದೊಳು ॥ ಸ್ವಾರ್ಥಕಾಗಿ ಪೂಜಾಭಂಗ ಗೈದ ಪಾಪಕೆ । ಮೃತ್ಯು ಕಾದಿರುವಳು ಮುಂದೆ ಬಾರೋ ಸಮರಕೆ ॥ ೧ ॥ ಸುರಪನೊಲವು ಸಿಕ್ಕಿತೆಂದು ಸೊಕ್ಕಿ ಮನದೊಳು । ದುರುಳ ವೃತ್ತಿಗಿಳಿದಿರಲ್ಲ ಮೈಯ್ಯಬಲದೊಳು ॥ ಪರರ ಸೊತ್ತ ಸೆಳೆದು ದರ್ಪದಿಂದ ಕುಣಿದಿರಿ । ಸರ್ವನಾಶವಪ್ಪುದೀಗ ನೋಡಿ ತಣಿಯಿರಿ ॥ ೨ ॥ ದ್ವಂದ್ವಯುದ್ಧದಲ್ಲಿ ಸೋತು ಮುಖವ ತಗ್ಗಿಸಿ । ಹಿಂದಿನಿಂದ ಸೇನೆಯನ್ನು ಪುರಕೆ ನುಗ್ಗಿಸಿ ॥ ತಂದು ಕಪಟವಾಜಿಯನ್ನು ಮೆರೆಸಿ ಕಾಣಿಸಿ । ಇಂದು ಪೌರುಷವನು ಪೇಳ್ವೆ ಗಜರಿ ಘರ್ಜಿಸಿ ॥ ೩ ॥ ಬದ್ಧವ್ಯೂಹ ತಂತ್ರವೈಸೆ ಯುದ್ಧವೆಂಬುದು । ತಿದ್ದಿ

ತಿಳಿಸಿಕೊಟ್ಟೆವದನು ಕಾರ್ಯಮುಖದೊಳು ॥ ಕ್ರುದ್ಧನಾಗಿ ದಾಳಿಗೈದೆ ಸ್ಫಟಿಕ ದೇಶಕೆ । ಶುದ್ಧಶಠತ್ಕಾರ ನಿನ್ನ ಪ್ರತೀಕಾರಕೆ ॥ ೪ ॥

**ರಾಗ–ಸೌರಾಷ್ಟ್ರ** **ತಾಳ–ತ್ರಿವುಡೆ**

ನಮ್ಮ ಸಂಸ್ಕೃತಿಯನ್ನು ಹಳಿಯುವ । ನಿಮ್ಮಬೆಲೆಗೊತ್ತಾದುದೀಗಳು । ಹೆಮ್ಮೆಯನು ಹುಡಿಗೊಡಿಸುವೆ ನಿಲ್ಲೊಮ್ಮೆ ಧುರಕೆ ॥ ೧ ॥ ಮರುಳನೀನು ಗೃಹೀಕ ಧರ್ಮವ । ಜರೆದು ಹಾಳಾಗುತಿಹೆ ದ್ವಂದ್ವದಿ । ದುರುಳೆಯನು ಹೊಗಿಸಿರುವ ಪಾತಕಿ । ತರಿವೆ ನಿನ್ನ ॥ ೨ ॥

**(ಯುದ್ಧದಲ್ಲಿ–ಪೌರೇಶ ಸಾಯುವನು–ವೀರೇಶನನ್ನು–ಆಗಮಸೇನ–ಮೀನರಥರು ಒಟ್ಟಾಗಿ ಎದುರಿಸುವರು)**

**ರಾಗ–ಘಂಟಾರವ** **ತಾಳ–ಏಕ**

ಬಾರೊ ವೀರನೆ । ಧುರದಿ । ತೋರು ಬಲುಹನೆ ॥ ಪ ॥ ಕ್ರೂರ ಪಶುಗಳಂತೆ ಬದುಕುತಿರುವ ನಿಮ್ಮನು । ತೀರಿಸಲ್ಕೆ ಬಂದೆವೀಗ ತೋರು ಬಲುಹನ್ನು ॥ ೧ ॥ ನಾವೆ ನಿನ್ನನಗರಕೈದಿ ಮುತ್ತಿಗೆಲಿದೆವು । ಭಾವಹೇಮರೇಖೆಯನ್ನು ಎಳೆದು ತಂದೆವು ॥ ೨ ॥ ಕೆಟ್ಟಕಾರ್ಯಕಾಗಿ ಹೆಮ್ಮೆಪಡುವ ಮೂರ್ಖನೆ । ಅಟ್ಟಿ ನಿನ್ನ ಬಡಿದು ಕೊಲುವೆವೀಗ ದುಷ್ಟನೆ ॥ ೩ ॥

**ರಾಗ– ಭೈರವಿ** **ತಾಳ–ಅಷ್ಟ**

ಹರಟೆಯ ಮಾತು ಸಾಕು । ತ್ರಾಣದೊಳೀಗ । ಧುರಕಿದಿರಾಗಬೇಕು ॥ ಪರಿಕಿಸಿ ಶೌರ್ಯವನೆನುತಿರಲಾತನ । ತರುಬಿ ತುಳಿದು ನೆಲಕುರುಳಿಸಿ ಪೇಳ್ದರು ॥ ೧ ॥

**ವಾರ್ಧಿಕ**

ಸ್ಫಟಿಕದೇಶವ ಮುತ್ತಿದುದಕೆ ಕೇಳೀ ಇರಿತ । ಹಟದಿ ಸೇನೆಯ ಕೊಂದುದಕ್ಕೆ ಮುಷ್ಟಿಯ ಘಾತ । ಕುಟಿಲ ತನದಲಿ ಹೇಮರೇಖೆಯನು ತಂದುದಕೆ ನಿನ್ನ ಹಲ್ಲನೆ ಮುರಿವೆವು ॥ ಘಟನೆಯನು ನೆನೆಪಿಸುತ ಹಿಂಸಿಸಲು ವೀರೇಶ । ತಟವಟಿಸಿ

ಪ್ರಾಣವಂ । ಬಿಡಲು ಈ ಸತ್ತವನ । ಘಟವ ಬೀದಿಯೊಳೆಳೆದು ಮೆರೆವಣಿಗೆ ಗೈವೆವೆನುತಿರಲು ವೃದ್ಧಪ್ರಯಾಮ ॥ ೧ ॥

**ರಾಗ-ಭೂಪಾಳಿ** **ತಾಳ-ಕೋರೆ**

ಸತ್ತಮೇಲಿನ್ನೇಕೆ ವೈರವಿತ್ತ ನೀಡಿರಯ್ಯ ಶವವ । ಪುತ್ರನಿವನಿಗಂತ್ಯಕ್ರಿಯೆಯ ಗೈವೆ ಜವದಲಿ ॥ ೧ ॥ ಮೊದಲು ಬುದ್ಧಿ ಪೇಳದಿವನ ಮದವ ಬೆಳೆಸಿ ಮೆರೆಸಿ ಈಗ । ಲಧಿಕಮೋಹ ತೋರ್ಪೆಯೇನು । ಮುದುಕ ತೊಲಗೆಲ ॥ ೨ ॥ ಮೀರಿದರೆನ್ನಯ ಮಾತಪ್ರಾರಬ್ಧದಿಂತಾಯಿತಲ್ಲ । ಕ್ರೂರರಾಗಬೇಡಿ ಕರುಣೆ ತೋರಿರೆನ್ನೊಳು ॥ ೩ ॥

**ರಾಗ- ಕೇದಾರಗೌಳ** **ತಾಳ-ಝಂಪೆ**

ಉಲ್ಲಾಸದತ್ತ ಬಂದು । ಪೇಳಿದನು । ಖುಲ್ಲತನ ಸಲ್ಲದಿಂದು । ಗೆಲ್ಲುವದು ಹಿಂಸೆಗಲ್ಲ । ಸಂಸ್ಕೃತಿಯ । ನಲ್ಲಿ ಸ್ಥಾಪಿಸಬೇಕೆಲ ॥ ೧ ॥ ಉತ್ತರಕ್ರಿಯೆಯ ಗೈಸಿ । ಹೋರಾಡಿ । ಸತ್ತವರ ಗುಣವ ಸ್ಮರಿಸಿ ॥ ಪಟ್ಟಣಿಗರನು ಮನ್ನಿಸಿ । ಅಭಯವ । ನ್ನಿತ್ತು ಜವದಲಿ ರಕ್ಷಿಸಿ ॥ ೨ ॥ ಇಂದ್ರದೇವಾಲಯದಲಿ । ಮೂರ್ತಿಯನು । ತಂದು ಸಂಸ್ಥಾಪಿಸುತಲಿ ॥ ಇಂದ್ರೋತ್ಸವವ ಮಾಡುವ । ಪೌರೇಶ । ನಂದನನು ಪುರವಾಳುವ ॥ ೩ ॥

**ರಾಗ- ಭೂಪಾಳಿ** **ತಾಳ- ಅಷ್ಟ**

ವೀರ ನಿನ್ನಿಂದಲೀ ವಿಜಯದೊರಕಿತು । ನಾರಿ ಕೈವಶವಾದಳು ॥ ದೂರ ದೃಷ್ಟಿಯ ಛಲ ಬಲ ಚಮತ್ಕಾರದಿ । ಕಾರ್ಯಸಾಧನೆಯಾದುದು ॥ ೧ ॥ ತೀರ್ಥಯಾತ್ರೆಯ ಗೈವ ದೃಢಸಂಕಲ್ಪದೊಳಿಂದ್ರ । ಮೂರ್ತಿಯ ಮರೆಗೈದೆನು ॥ ಅರ್ತಿಯಿಂದೊಂದು ವತ್ಸರದ್ವೀಪ ದ್ವೀಪ ಪ್ರ । ದಕ್ಷಿಣೆ ಗೈಯುವೆನು ॥ ೨ ॥ ಈ ತ್ರಯಾದ್ರಿಯ ಜಯ ಘನತೆಯ ಕುರುಹಲ್ಲ । ಸ್ವಾರ್ಥದ ಮೆರೆದಾಟವು ॥ ಮತ್ಸರವನು ಬಿಟ್ಟು ತೆರಳಿ ಪಥದಿ ಮಂಗ । ಳೋತ್ಸವ ಘಟಿಸಲಿನ್ನು ॥ ೩ ॥

॥ ಮಂಗಳಂ ॥

ಯಕ್ಷಗಾನ ಪ್ರಸಂಗ

# ಉಲ್ಲಾಸದತ್ತ ವಿಜಯ

ಭಾಗ - ೨

## ದ್ವೀಪ ದಿಗ್ವಿಜಯ

ರಚನೆ : **ಹೊಸ್ತೋಟ ಮಂಜುನಾಥ ಭಾಗವತ**

**ಪಾತ್ರಗಳು :**

* **ಉಲ್ಲಾಸದತ್ತ** – ಗೃಹೀಕರಾಜ * **ನಾವಿಕರು** – ಸಂಗಡಿಗರು

* **ಪೂಜಾರಿ** – ಮಾರೀಮಂದಿರ * **ಪಾಲಜಾಖ** – ಒಕ್ಕಣ್ಣಿನ ರಕ್ಕಸ

* **ಶಿಲಾನಖಿ** – ರಾಕ್ಷಸಿ * **ಭೇಧಿನಖಿ** – ರಾಕ್ಷಸಿ * **ಸಿದ್ಧಾಂಜನೆ** – ಸಿದ್ಧಕನ್ಯೆ

* **ತೀರ್ಥತೇಜ** – ಯೋಗಿ * **ಇಂದ್ರ** – ಲೋಕಪಾಲ

* **ಸುರಮತಿ** – ದೇವತೆ * **ವರುಣ** – ದಿಕ್ಪಾಲ * **ಕಲ್ಪನೆ** – ಯಕ್ಷಕನ್ಯೆ

* **ಸಖಿಯರು**– ಕಲ್ಪನೆಯ ಜತೆಗೆ

**( ರಕ್ಕಸರು– ಮೃಗಗಳು – ಸುರರು )**

ಶಂಕರಾಭರಣ ತ್ರಿವುಡೆ

ನಾವಿಕರನೊಡಗೂಡಿ ಸುಂದರ । ನಾವೆಯನ್ನಾರೋಹಿಸಿ ॥ ಭೂವರನು ಬರುತಿರಲು ಶರಧಿಯ । ಬಾವನೆಯ ಸನ್ಮಾನಿಸಿ ॥ ೧ ॥ ತರುಲತಾಯುತ ಚೈತ್ರವನವನು । ಪರಿಕಿಸುತ ತಟಕೈದುತ ॥ ವಿರಮಿಸಿರೆ ಸಂಗಡಿಗರೈದಿದ । ರರಸಿ ಫಲವನು ಮೆಲ್ಲುತ ॥ ೨ ॥

( ನಾವಿಕರು ವನದೆಡೆಗೆ ಹೋದ ನಂತರ ಉಲ್ಲಾಸದತ್ತ )

**ಕೇದಾರಗೌಳ** **ಅಷ್ಟ**

ಆತುರಗಾರರೀ ವನದೊಳು ಸಮಯವ । ನೇತಕೆ ಕಳೆಯುವರೊ ॥ ನೂತನ ನೆಲೆಯಿದು ಪಥಮರೆತಲೆವರೊ । ರೀತಿಯರಿತು ಬಹೆನು ॥ ೧ ॥ ಎಚ್ಚರ ತೊರೆದು ಬಿದ್ದಿರುವ ತನ್ನವರನು । ಅಚ್ಚರಿಯಲಿ ಕಾಣುತ ॥ ನಿಶ್ಚಯವಿದು ಭೂತಪ್ರೇತಗಳಾಟದಿ । ಬೆಚ್ಚಿಹರಿವರೆನುತ ॥ ೨ ॥

**ದ್ವಿಪದಿ**

ಇನ್ನಿವರನೆಬ್ಬಿಸುವ ಪರಿಯಂತೊ ತಿಳಿಯೆ । ಹಣ್ಣಿನಾರಸದಿ ವಿಷತುಂಬಿರಲು ಬಹುದೆ ॥ ೧ ॥ ಮಾಂತ್ರಿಕರೊ ಮಾಟಗಾರರೊ ಬಳಿಯೊಳಿಹರೆ । ಎಂತಾದರೋ ಸರಿಯೆ ಇವರನೆಬ್ಬಿಸುವೆ ॥ ೨ ॥ ಧೂಪದಾ ಪರಿಮಳದ ಸುಳಿವಿಡಿದು ಬಂದು । ದೀಪವಿಹ ಮಂದಿರವ ದೂರದಲಿ ಕಂಡು ॥ ೩ ॥ ಮೆಲ್ಲನೈದು ತಲರ್ಚಕನ ಕಂಡುನಮಿಸಿ । ಇಲ್ಲಿಯ ವಿಶೇಷವೇನೆನೆ ಪೇಳ್ದ ಗ್ರಹಿಸಿ ॥ ೪ ॥

**ಬೇಹಾಗ** **ಏಕ**

ಪರಿಕಿಸಿ ನೋಡಿದು ಮಾರೀಮಂದಿರ । ಅರಿತುಕೊ ನಾನೆ ಪೂಜಾರ ॥ ನಿರತ ಚೈತ್ರಫಲದಮಲಿನಸಾರ । ನಿರತವು ಮದ್ಯದ ವ್ಯಾಪಾರ ॥ ೧ ॥ ಎನ್ನವರೆಚ್ಚರ ತಪ್ಪಿಹರಿಲ್ಲಿ । ಇನ್ನವರನು ನೀನೇಳಿಸು ಜವದಿ ॥ ನಿನ್ನೊಳೆ ಮದ್ಯ ಖರೀದಿಸು ತೊಯ್ವೆ । ಹೊನ್ನುರತ್ನ ಮಾಣಿಕ್ಯವ ಕೊಡುವೆ ॥ ೨ ॥

**ವಾರ್ಧಿಕ**

ಬಿದ್ದವರ ಬಳಿಗೆ ನಡೆತಂದು ಗಿಡಮೂಲಿಕೆಯ । ಮದ್ದಿನಿಂದವರನೆಚ್ಚರ ಗೊಳಿಸುತಾ ಮೇಲೆ । ಬುದ್ಧಿಯರುಹಿದ ಚೈತ್ರಫಲದಮಲು ತಲೇಗೇರಿ ನಿಮಗಾಯ್ತು ಮರಬೋಧೆಯು ॥ ಶುದ್ಧಮದ್ಯದ ಹೂಜೆಯೆರಡ ನಿಮಗೀಯುವೆನು । ಬದ್ಧವಿದು

ಶತಪಾಲು ಜಲವ ಸೇರಿಸಬೇಕು । ಇದ್ದಂತೆಯೇ ಹೀರೆ ಪ್ರಜ್ಞೆ ಹಾಳಾಗುವದು ತಿಳಿದು ಬಳಸಿರಿ ಎಂದನು ॥ ೧ ॥

**(ಅಲ್ಲಿಂದ ಪಡೆದು ಅಲ್ಲಿಂದ ಹೊರಡುವರು )**

**ಘಂಟಾರವ** **ಅಷ್ಟ**

ಬಂದು ಮುಂದಕೆ ಕಂಡರು ಕಲ್ಲಿನ । ಬಂಡೆಗಳು ಪರ್ವತದವೋಲಿರೆ । ಹಿಂಡುಗುಹೆಗಳ ಸರಣಿಯು ॥ ೧ ॥ ಭೂರಿವಿಸ್ತಾರ ಶಿಲಾಮುಖ ಗುಹೆ ಯೊಂದ । ಸೇರಿ ವಿಶ್ರಮಿಸುವೊಡೆ ಯೋಚಿಸಿ । ಸಾರಿ ಬಂದರು ಸಹಸದಿ ॥ ೨ ॥

**( ಆ ಗುಹೆಯ ಬಗೆಯನ್ನು ನೋಡಿ ಉಲ್ಲಾಸದತ್ತ )**

**ನವರೋಜು** **ಆದಿ**

ನೋಡಿದಿರೇ ಶಿಲೆಯೊಳಗೆ । ಒಡ । ಮೂಡಿಹುದು ಈ ಮಳಿಗೆ ॥ ಗಾಢನಿಸರ್ಗದ ವಾಸ್ತವ ಶಿಲ್ಪಕೆ । ನಾಡ ವಾಸ್ತು ಶಿಲ್ಪದ ಗೃಹ ಸಾಟಿಯೆ ॥ ೧ ॥ ನಡುಮನೆಯೂ ಪಡಸಾಲೆ । ಇಹು । ದಡುಗೆಯ ಕೋಣೆಯು ಬೇರೆ ॥ ಕಡೆಯಂಚಿನೊಳಾ ಕುರಿದೊಡ್ಡಿಗಳಿವೆ । ಎಡ ಬಲದುಗ್ರಾಣದಿ ಪಾತ್ರೆಗಳಿವೆ ॥ ೨ ॥ ದಧಿ ಘೃತವೊ ನವನೀತ । ತುಂ । ಬಿದೆ ಏನೀ ವಿಪರೀತ ॥ ಮುದವಾಯಿತು ಸುಖಭೋಜನ ದೊರಕಿತು । ಸದನದೊಡೆಯನನು ಕಂಡೇ ಪೋಪುದು ॥ ೩ ॥

**(ಪಾಲಿಜಾಖನ ಪ್ರವೇಶ )**

**ತೋಡಿ** **ಮಟ್ಟೆ**

ಒಕ್ಕಣ್ಣಿನ ರಕ್ಕಸರೊಳು ಮಿಕ್ಕಿದವನು ಪಾಲಿಜಾಖ । ಮುಕ್ಕುವನೊಂದೇ ಸಲಕವ ಸೊಕ್ಕಿದ ಕುರಿಯೊಂದ ॥ ೧ ॥ ಬಗೆಬಗೆ ಕುರಿಗಳ ಹಿಂಡನು ಹಗಲಿನೊಳಡ್ಡಾಡಿ ಸುವನು । ಮಿಗೆಸಂಜೆಯೊಳವುಗಳ ಗುಹೆ ಪೊಗಿಸುತ ಕಾಯುವನು ॥ ೨ ॥ ಅಬ್ಬರಿಸುತಲವ ಬರುತಿರಲೊಬ್ಬಬ್ಬರೆ ಸರಿದಡಗಲು । ಕೊಬ್ಬಿದ ಖೂಳನು ಬಂಡೆಯ

ಬಿಲಮುಖ ಕಾನಿಸಿದ ॥ ೩ ॥

**ಮೋಹನ** **ಆದಿ**

ವಹವ್ವಾ ಏನಿದು ವಾಸನೆ । ಈ ಗುಹೆಯ ಪೊಕ್ಕ । ಸಹಸಿಗಳ್ಯಾರೊ ಕಾಣೆ ॥ ಬಹುದಿನ ಮನುಜರ ಮೆಲ್ಲದೆ । ಗ್ರಹಿಸಲೀದಿನ ಹಬ್ಬವಹುದೆನ್ನ ಒಡಲಿಗೆ ॥ ೧ ॥ ಉರಿಸಿದ ಬೆಂಕಿಯನ್ನು । ಒಂದೇಕಣ್ಣ । ತಿರುಗಿಸಿ ನೋಡಿದನು ॥ ಪರಿಕಿಸುತೊಬ್ಬನ ಮುಷ್ಟಿಯೊಳವುಕುತ । ಭರದಿ ಬಾಯ್ದೆರೆದು ನುಂಗಿದನಟ್ಟಹಾಸದಿ ॥ ೨ ॥ ಉಳಿದ ನಾವಿಕರನೋಡಿ । ಪೇಳಿದ ದೈತ್ಯ । ಕಳವಳ ಪಡಲು ಬೇಡಿ ॥ ಭಳಿರೆ ನೀವ್ಯಾರಿಷ್ಟು ಜನ ಬಂದಿರಿಲ್ಲಿಗೆ । ಉಳಿಯಿರಿಲ್ಲಿಯೆ ನಿಮ್ಮ ನೆಲೆಯನು ತಿಳುಹಿರಿ ॥ ೩ ॥

**ಹಂಸಧ್ವನಿ** **ಏಕ**

ಊರು ಕಾಲೂರಯ್ಯ ಎನ್ನ ಹೆಸರು ಯಾರಿಲ್ಲಪ್ಪ । ಧೀರನವನು ಬಿಟ್ಟರೆ ಸಿಕ್ಕ ಈತ ತಿರಗೋಡಪ್ಪ ॥ ೧ ॥ ನಿನ್ನನೇಮಕೊಪ್ಪಿ ಉಳಿವೆವಿನ್ನು ಕೆಲವು ದಿವಸ । ಉನ್ನತ ಈ ಗುಹೆಯನೋಡಿ ಮನಸಿಗಾಯ್ತು ಹರುಷ ॥ ೨ ॥ ಹೋಹೋ ಹೋಹೋ ಬಹುಸಂತೋಷವಾಯ್ತು ನಿಮ್ಮ ನುಡಿಗೆ । ಆಹಾರಕ್ಕೆ ಕುರಿಗಳಿಹವು ಮಾಡಿತಿನ್ನಿರಡುಗೆ ॥ ೩ ॥

**ಕಲ್ಯಾಣಿ** **ಝಂಪೆ**

ಮರುದಿವಸ ರಕ್ಕಸನ ಕೊಲ್ಲಬೇಕೆಂದಿವರು । ಮರನ ತುಂಡನು ಚಾಣದೊಲು ನಿರ್ಮಿಸುತ್ತ ॥ ಪರಿಪರಿಯ ಸಂಭಾರದಡುಗೆಗಳ ಮಾಡಿಕಾ । ದಿರೆ ಬಕಾಸುರನಂತೆ ಬಂದನಾ ದೈತ್ಯ ॥ ೧ ॥ ಮೊದಲುಂಬೆ ಬಳಿಕ ಮನುಜರ ತಿಂಬೆನೆಂದೆನುತ । ಒದಗಿನಿಂದಣಿ ಯಾಗಲೊಡ ಬಡಿಸುತವನ ॥ ಹದಗೊಳಿಸಿ ಮದ್ಯಸಾರವ ನೀಡೆ ಕುಡಿದಾಗ । ಮುದಗೊಳುತ ಪೇಳ್ದನೀ ವಚನ ॥ ೨ ॥

**ಗೌಳ** **ಅಷ್ಟ**

ಬಹುರುಚಿಯಿದೆ ಮದ್ಯ ಹಿಹಿಹಿಹೀರುವೆ ನೀ ತಾ । ರಹಹ ಇನ್ನಷ್ಟು ಬೇಕು ॥ ಕುಹುಕವಲ್ಲಿದು ಹಾಡಿಕುಣಿಯಿರಿ ತಮ್ಮಟೆ । ಕಹಳೆಗಳಿಲ್ಲಿಹವು ॥ ೧ ॥

**ಪುನ್ನಾಗತೋಡಿ** **ಅಷ್ಟ**

ಮುಂದಿಹ ಕಹಳೆಯ ನೂದಿರೊ । ತಾಳ । ಕೆಂದು ತಮ್ಮಟೆಯನು ಬಡಿಯಿರೊ ॥ ಹೊಂದಿಸಿ ಹಾಡನು ಹಾಡಿರೊ । ಬಂದು । ದಿಂದಿಮಿದಿಮಿಕೆಂದು ಕುಣಿಯಿರೊ ॥ ಲಾಲಿಲಾಲಿ ಮೇಘಶ್ಯಾಮ ಲಾಲಿ । ಜೋಲಿಜೋಲಿ ಪಾಲಿಜಾಖ ಜೋಲಿ ॥ ೧ ॥

**(ಮೇಲಿನ ಪದ್ಯಕ್ಕೆ ಎಲ್ಲರೂ ಕುಣಿದು ಹಾಡಿ ಗದ್ದಲ ಏಳಿಸಬೇಕು. )**

**ವಾರ್ಧಿಕ**

ಜಲಬೆರೆಸದಿಹ ಮದ್ಯದಮಲೇರೆ ಕರ್ಬುರಂ । ತಳೆದು ಮೂರ್ಛೆಯ ಬೀಳೆ ಮರಚಾಣವಂ ತಂದು । ಫಳಿಲನೆ ತಿವಿಯಲೊಕ್ಕಣ್ಣು ಪುಡಿಪುಡಿಯಾಗೆ ಚೀರಿದಂ ಪಾಲಿಜಾಖ ॥ ಬಲುಬೊಬ್ಬೆಕೇಳಿ ದೂರದೊಳಿರುವ ಖಳರೇಕೆ । ಅಳುವೆ ಯಾರಿಂದ ಏನಾಯ್ತೆಂದು ಪೇಳೆನಲು । ಬಳಲಿ ಯಾರಿಲ್ಲಪ್ಪ ಕಾಲೂರು ಎಂದೊಡದ ಕೇಳಿ ಬಳಿಕೈದಲತ್ತ ॥ ೧ ॥

**(ಪಾಲಿಜಾಖಿನ ಗುಹೆಯಿಂದ ತಪ್ಪಿಸಿಕೊಂಡು ನಾವೆಯನ್ನೇರಿ ನಾವಿಕರು ಪಯಣಕ್ಕೆ ಸಿದ್ಧರಾಗಿ)**

**ಮಾರವಿ** **ಏಕ**

ಖುಲ್ಲನೆ ಕೇಳುಲ್ಲಾಸದತ್ತ ರಣ । ಮಲ್ಲ ಗೃಹೀಕದೊರೆ । ಮೆಲ್ಲುತಲೆಮ್ಮವನನು ನುಂಗಿದೆ ನೀ । ಸಲ್ಲಿಸಿಹೆನು ಶಿಕ್ಷೆ ॥ ೧ ॥ ಚಿತ್ತದೊಳೆಣಿಸಿದ ವ್ರತಕೋಸುಗವೀ । ಸತ್ಯವ ಘೋಷಿಸಿದೆ ॥ ದೈತ್ಯನೆ ಕೇಳೆನುತಾ ನಾವೆಯ ಮುಂ । ದೊತ್ತಲು ಜಲದೊಳಗೆ ॥ ೨॥

(ಶಿಲಾನಖಿ – ಛೇದಿನಖಿಯರ ಪ್ರವೇಶ )

ಕ್ರೂರೆ ಶಿಲಾನಖಿ ಭೇದಿನಖಿಯರು । ಬ್ಬೇರಿ ಹಾರಿ ಬಂದು ॥ ಭೋರನೆ ಪಾಲಿಜಾಖನೊಳೆಂದರು । ಆರುಭಟಿಸಿ ನಿಂದು ॥ ೩ ॥

**ಸೌರಾಷ್ಟ್ರ** **ತ್ರಿವುಡೆ**

ಪೇಳುಪೇಳೇನಾಯ್ತು ನಿನಗೀ । ಗೋಳತಂದ ದುರಾತ್ಮನ್ಯಾರೈ । ಸೀಳಿ ನಿನ್ನಯ ಬಾಯ್ಗಿಡುವೆವಾ । ಖೂಳನನ್ನು ॥ ೧ ॥ ನರಸುರರ ಬಲುನೆರವಿಯೊಳಗಡ । ಗಿರಲಿ ಆತನನರಸಿ ತರುವೆವು । ದುರಳ ತಾನಾ ಉರಗಲೋಕದೊ । ಳಿರಲಿ ಬಿಡೆವು ॥ ೨ ॥

**ನಾದನಾಮಕ್ರಿಯೆ** **ಆದಿ**

ಮೊದಲದೊಮ್ಮೆ  ಯಾರಿಲ್ಲಪ್ಪ ತಾನೆಂದನಯ್ಯೋ । ತುದಿಗೆ ನಾವೆಯೇರಿ ನಿಜವನೊರೆದ ನಯ್ಯಯ್ಯೋ ॥ ಚದುರನವನುಲ್ಲಾಸದತ್ತನಂತಯ್ಯಯ್ಯಯ್ಯೋ । ಒದಗಿಬಂತು ಮರಣವಯ್ಯಯ್ಯಯ್ಯಯ್ಯಯ್ಯೋ ॥ ೧ ॥

**ತೋಡಿ** **ಝಂಪೆ**

ಎಲ್ಲಿರ್ದೊಡಾತನನ್ನು । ಹುಡುಕಿ ತಹೆ । ವುಲ್ಲಾಸದತ್ತನನ್ನು ॥ ದಳ್ಳುರಿಯ ತಣಿಸಿಕೊಳಲು । ನೀನವನ । ಮೆಲ್ಲಬಹುದಯ್ಯ ನಲಿದು ॥ ೧ ॥ ದುರುಳೆಯರು ಪಂಥವಾಡಿ । ಬರುತಿರಲು । ಶರಧಿಯನು ಹುಡುಕಿನೋಡಿ ॥ ಗಿರಿಝರಿಗಳನು ಶೋಧಿಸಿ । ಮುಂಬರಿಯೆ । ತಿರುತಿರುಗಿ ಪಥವನರಿಸಿ ॥ ೨ ॥

**(ರಕ್ಕಸಿಯರು ನಿರ್ಗಮಿಸಿದ ಮೇಲೆ – ಉಲ್ಲಾಸದತ್ತ ನಾವಿಕರೊಂದಿಗೆ )**

**ಭಾಮಿನಿ**

ಗುರಿಸಿಗದ ಪಯಣದಲಿ ಹಸಿರಾ । ಗಿರುವ ನೆಲೆಯನು ಹುಡುಕಿ ತಂಗುತ । ತೆರಳಿ ಸಿದ್ಧರನೆಲೆ ಇನಾದ್ವೀಪವನು ತಲುಪಿದರು ॥ ದೊರೆತುದನು ಸಂಗ್ರಹಿಸಿ ತಹೆ ವೆಂ । ದೊರೆದು ನಾವಿಕರ್‍ಯ್ದಿ ಅಡವಿಯ । ತಿರುಗುತಿರೆ ನೋಡಿದರು

ಶೋಭಿಸುತಿರುವ ಸೌಧವನು ॥ ೧ ॥

**ಬಿಲಹರಿ** **ಅಷ್ಟ**

ಈ ಮನದೊಳಗಿಂಥಾ ಭವನ । ಇನ್ನಿ । ದಾವ ಮಾಯಕವೊ ನಾವರಿಯೆವು ಹದನ ॥ ದೇವತೆಗಳ ವಾಸಸ್ಥಳವೊ । ಬಲು । ಜೀವರಾಶಿಗಳಿಲ್ಲಿ ನಲಿದಾಡು ತಿಹವು ॥ ೧ ॥

**(ಸಿದ್ಧಾಂಜನೆ ಪ್ರವೇಶಿಸಿ ಆಗುಂತುಕರನ್ನು ನೋಡಿ )**

ಅಲೆಮಾರಿಗಳನು ಸ್ವಾಗತಿಸಿ । ತನ್ನ । ನೆಲೆಯಿದೆಂದಳು ಸಿದ್ಧಾಂಜನೆಯುಪ ಚರಿಸಿ ॥ ಬಲುಸತ್ಕಾರದಿ ಭ್ರಮೆಗೊಳಿಸಿ । ಮಂತ್ರ । ಜಲವ ಚಿಮ್ಮುತ ಮೃಗವಾಗಿ ಮಾರ್ಪಡಿಸೆ ॥ ೨ ॥ ತನ್ನವರನ್ನರಸುತ್ತಲಿ । ನೃಪ । ಖಿನ್ನನಾಗುತ ಬರಲವನ ಕಾಣುತಲಿ ॥ ಕನ್ಯೆ ಕೈಮುಗಿದು ದೈನ್ಯದೊಳು । ಮಮ । ಪುಣ್ಯದಿ ನಿಮ್ಮ ದರ್ಶನವಾದುದೆನಲು ॥ ೩ ॥

**ಜಂಜೂಟಿ** **ರೂಪಕ**

ನಿನ್ನ ಪುಣ್ಯವಲ್ಲ ನಮ್ಮ ಹಣೆಯ ಬರೆಹವು । ಎನ್ನ ಸಂಗಡಿಗರು ಕಾಣರಿಲ್ಲಿ ಚೋದ್ಯವು ॥ ೧ ॥ ಹಳಹಳಿಸುವಿರೇಕೆ ಬನ್ನಿ ಕುಳಿತುಕೊಳ್ಳಿರಿ । ನೆಲೆಯು ನಿಮ್ಮದಾವುದೆಂಬ ನಿಜವ ಪೇಳಿರಿ ॥ ೨ ॥ ನಾವು ಮಹಾರಾಜರೈಸೆ ನಮ್ಮ ಊರೊಳು । ನಾವೆಯೇರಿ ಬಂದೆವಿಲ್ಲಿ ತೊಳಲುತಿರುವೆವು ॥ ೩ ॥ ಅಲೆದಾಟದ ಪಯಣದೊಳಗೆ ಕಷ್ಟಸಹಜವು । ನೆಲೆಗಾಣಲು ವಿರಮಿಸುತ್ತ ಮುಂದುವರಿ ವುದು ॥ ೪ ॥ ನಗುತ ಮಂತ್ರ ಜಲವನೆರಚಿ ನಿಂತು ನೋಡುತ । ದಿಗಿಲುಗೊಂಡು ಯೋಗಿನಿಯು ವಿಭ್ರಮಿಸಿ ಬೇಡುತ ॥ ೫ ॥

**ಶಹನ್** **ಏಕ**

ಫಲಿಸಲಿಲ್ಲ ಮಂತ್ರಬಲ । ನೆಲದೊಳಿಂಗಿ ಹೋಯ್ತು ಜಲ ॥ ಬಲುಹೇನುಂಟೊ

ಇವನೊಳವ । ತಿಳಿದು ಸೂಚಿಸುವೆನೆನ್ನೊಲವ ॥ ೧ ॥ ಮಾನವನಲ್ಲ ನೀನಮಮ । ಕಾಣಲು ತೇಜಸ್ವಿಯು ಮಹಿಮ ॥ ಕ್ಷೋಣಿಯು ಸಿದ್ಧಕ್ಷೇತ್ರವಿದು । ನಾನೇ ಸಿದ್ಧಾಂಜನೆಯಹುದು ॥ ೨ ॥

**ಬಿಲಹರಿ** **ತ್ರಿವುಡೆ**

ಚಲುವೆ ನೀ ಯೋಗಿನಿಯಂತೆ ಶೋಭಿಸುವೆ । ಜಲವನೆರಚಿ ಎನ್ನನೇಕೆ ನಿಟ್ಟಿಸುವೆ । ತಿಳುಹು ಎನ್ನನುಚರರೇನಾದರೆಂದು । ಸುಳಿದು ಸುತ್ತುವವೇಕೆ ಮೃಗಗಳು ಬಂದು ॥ ಒಲವಿನೊಳರುಹುಜಾಣೆ । ಬಲತಂತ್ರವ । ತಿಳಿದವನಲ್ಲ ಕಾಣೆ ॥ ೧ ॥ ಹಸಿರಾದ ನೆಲೆಯನ್ನು ಹುಡಿಗೈದ ನರರ । ದೆಸೆಯಿಂದ ನಾನಿಲ್ಲಿ ಉಳಿದಿರ್ಪ ಚತುರ । ಪಸುಣ ಮಾನವರನ್ನು ಮೃಗವಾಗಿಸಲ್ಕೆ । ಅಸಮ ಮಂತ್ರವ ತೀರ್ಥತೇಜರೊಳರಿತೆ ॥ ಎಸೆವ ನಿನ್ನಂದ ಕಂಡು । ಮನಸೋತುನಾ । ಕುಸಿದೆನು ಮೋಹಗೊಂಡು ॥ ೨ ॥

**ಯರಕಲಕಾಂಬೋದಿ** **ಝಂಪೆ**

ಪ್ರಕೃತಿ ಸೊಬಗನು ಉಳಿಸಿಕೊಳಲು । ನೀಗೈವ । ವಿಕೃತಚೇಷ್ಟೆಯು ಸರಿಯೆ ಪೇಳು ॥ ಸಕಲರೂ ವಂಚಕರೆ ಜಗದಿ । ಯೋಚಿಸದೆ । ಶಕುತಿ ಕಾಣಿಸುವೆ ಈ ವನದಿ ॥ ೧ ॥

**ಹರಿಕಾಂಬೋಧಿ** **ಅಷ್ಟ**

ಜನಪಾಲನೀನು ದಯತೋರು ॥ ಪ ॥ ವನಿತೆಯರಿಂದ ಶೋಭಿಸುವ ಈ ನೆಲೆಯಲ್ಲಿ । ಜನನಕಿಂಬಿಲ್ಲವಯ್ಯ । ಆ ಬಗೆಗೆ ನೀ । ನನುಕಂಪ ಕಾಣಿಸಯ್ಯ । ನಿನ್ನಿಂದ ಜೀ । ವನ ವೃದ್ಧಿಗೊಳಲಿ ಜೀಯ । ಸದ್ಭೋಗವ । ನುಣಿಸಿ ನೀಡೈ ತೃಪ್ತಿಯ । ಮಹರಾಯ ॥ ಅನುಕರಿಸಿ ಸೃಷ್ಟಿಯ ರಹಸ್ಯವ । ವನಿತೆಯನ್ನುದ್ಧರಿಸು ದಯದಲಿ ॥ ೧ ॥

**ಕಲ್ಯಾಣಿ** **ಝಂಪೆ**

ಪರಿವರ್ತಿಸೆನ್ನ ಸಂಗಡಿಗರನ್ನು ನಿನ್ನಿಚ್ಛೆ । ಯರಿತು ಸಂತೈಸಿ ಪೋಗುವೆನು ॥ ಗುರುತೀರ್ಥತೇಜರನು ಸಂದರ್ಶಿಸುವ ಪಥವ । ಪರಿಚಯಿಸು ಪ್ರಿಯತಮೆಯೆ ನೀನು ॥ ೧ ॥ ಉಲ್ಲಾಸದತ್ತನನು ವರಿಸಿ ಬಳಿಕಾ ಲಲನೆ । ಚಲ್ವನಾವಿಕರ ಮಾರ್ಪಡಿಸಿ ॥ ಚಲ್ಲಾಟದಿಂದಿರಲು ಸರಿಯುತಿರ್ದುದು ಕಾಲ । ಚೆಲ್ವೆ ಪಡೆದಳು ಚಲುವ ಮಗನ ॥ ೨ ॥ ಸಂತಾನವತಿಯ ಸಂಭ್ರಮಕೊಲಿದು ಬಳಿಕ ಭೂ । ಕಾಂತ ಪೇಳಿದ ಮನಸಿನಿರವ ॥ ಸಂತಸದಿ ತೀರ್ಥತೇಜರ ಬಳಿಗೆ ಕಳುಹಿಸೌ । ಚಿಂತಿಸುವೆ ಭವಿತವ್ಯ ಸ್ಥಿತಿಯ ॥ ೩ ॥ ಇಲ್ಲಿಂದಲುತ್ತರಕೆ ಮೃತ್ಯುಲೋಕದ ಗಡಿಯೊ । ಳಲ್ಲಿಹರು ಸಿದ್ಧಯೋಗಿಗಳು ॥ ಮೆಲ್ಲನವರೆಡೆಗೈದು ತಿಳಿದು ನಿನ್ನಿಷ್ಟಗಳ । ನೆಲ್ಲ ಸಲಿಸುವರು ಮಹಿಮೆಯೊಳು ॥ ೪ ॥

**(ಸಿದ್ಧಾಂಜನೆಯನ್ನು ಬೀಳ್ಗೊಂಡು – ತೀರ್ಥತೇಜರ ಬಳಿಗೆ ಹೋಗಿ )**

**ಶಂಕರಾಭರಣ** **ಏಕ**

ಶ್ರೀ ಗುರುಭ್ಯೋ ನಮಃ ಎಂದು ಬಾಗಿಮಣಿದ ನೃಪನಕಂಡು । ಆಗಮ ನಿರ್ಗಮವನರಿತ ಮಹಿಮರೆಂದರು ॥ ೧ ॥

**(ತೀರ್ಥತೇಜರು ಉಲ್ಲಾಸದತ್ತನ ಪೂರ್ವಸ್ಥಿತಿಯನ್ನು ಕೇಳಿ ನಂತರ )**

**ಭಾಮಿನಿ**

ವಾರುಣೀಸುತ ಪಾಲಿಜಾಖಿನ । ದಾರುಣ ಸ್ಥಿತಿಯಿಂದ ಪಯಣದಿ । ಘೋರಸಂಕಟವಹುದು ಮುಂದೆಚ್ಚರಿಕೆಯಲಿ ಸಾಗು ॥ ದಾರಿಯೊಳು ಸ್ವರಬಂಧು ದ್ವೀಪವ । ಸೇರದಿರಿ ರವಿದೀಪ್ತ ದೇಶವ । ಪಾರಗೈಯ್ಯೆ ವಿವೇಕವಿರಲ್ಕೆ ತೆರಳು ಶುಭವಹುದು ॥ ೧ ॥

**ಭಾಮಿನಿ ಅರ್ಧ**

ಗುರುವಿನಿಂ ಶುಭಮಾರ್ಗ ದರ್ಶನ । ದೊರೆತುದೆಂದುಲ್ಲಾಸದತ್ತನು । ತ್ವರಿತದಿಂ

ಪಥವಿಡಿದು ಬರುತಿರೆ ತನ್ನವರ ಕೂಡಿ ॥

(ಇಂದ್ರನ ಒಡ್ಡೋಲಗ)

**ತೋಡಿ** **ಮಟ್ಟೆ**

ಓಲಗಿಸಿದನಿಂದ್ರ ವಿಭವದಿ । ತ್ರಿದಿವದಿ । ಕ್ಪಾಲರನ್ನು ಕೂಡಿಮೋದದಿ ॥ ತಾಳವಾದ್ಯ ಗಾನ ನಾಟ್ಯ । ಮೇಳದೊಡನೆ ಯಕ್ಷಸುರರು । ಸಾಲುವಿಡಿದು ಪಾಲುಗೊಳೆ ವಿ । ಶಾಲ ಮನದಿ ಪೇಳ್ದನೊಲಿದು ॥ ೧ ॥ ಧರೆಯೊಳಿರುವ ನರರು ನಮ್ಮನು । ತಪದೊಳೊಲಿಸಿ । ಮೆರೆವರೈಸೆ ಪಡೆದು ವರವನು ॥ ಭರಿತಗರ್ವ ತಾಳಿ ನಿಯಮ । ಮರೆತು ವರ್ತಿಸುವರು ನಿರತ । ಕೊರತೆಯಿದು ನಿಸರ್ಗನೀತಿ ಯರಿತು । ತಿದ್ದಬೇಕು ಚರಿತ ॥ ೨ ॥

**ಬೇಗಡೆ** **ಏಕ (ಸುರಮತಿ )**

ಗೆಲುವಿಗೋಸುಗ ಪೂಜೆ ಭಂಗಿಸಿದ । ಉಲ್ಲಾಸದತ್ತನು । ಕಲಹ ಕರ್ಕಶನಾಗಿ ಹಂಗಿಸಿದ ॥ ಛಲದಿ ವ್ರತವನು ಗೈದು ದೋಷವ । ಕಳೆವೆನೆಂದಲೆಯುವನು ಭೂವರ ॥ ೧ ॥

**ವರುಣ**

ಪಾಲಿಜಾಖನ ಕಣ್ಣ ಕಿತ್ತಿಹನು । ಇದು ಹಿಂಸೆಯಲ್ಲವೆ । ಬಾಲಿನೆನಗವ ವಾರುಣೀ ಸುತನು । ಪೇಳಲೇನೈ ನಿನ್ನ ಶರಣನ । ಖೂಳತನವನು ತಿದ್ದಿ ಪಾಲಿಸು ॥ ೨ ॥

**ಮಧ್ಯಮಾವತಿ** **ತ್ರಿವುಡೆ**

ಅಹುದಹುದು ತಪ್ಪಲ್ಲ ಶರಣರ । ಗ್ರಹಿಕೆಯನು ಮಾರ್ಪಡಿಸಿ ತಿದ್ದುವ । ಮಹಿಮೆ ಕಾಣಿಸಬೇಕು ಇದಕೊಂ । ದಿಹುದು ಯುಕುತಿ ॥ ೧ ॥ ಯಕ್ಷ ಕನ್ಯೆ ಬಲದಿ ಭೂಪನ । ಲಕ್ಷಣವ ಬದಲಿಸುವೆ ನಂತರ । ದಕ್ಷನಾಗುವನನು ಭವದ ಪ್ರಾ ।

ತೃಕ್ಷಿಕೆಯಲಿ ॥ ವರುಣ ಕೇಳ್ ವಾರುಣಿಯ ಮತವನು । ಕರಿಸಿ ಹಾರಿಸು ನೃಪನು ಮೂಲವ । ಮರೆತು ಓಘ ಕ್ಷೇತ್ರದಲಿ ತಾ । ನೆರಳುವಂತೆ ॥ ೩ ॥

( ಹೀಗೆ ಸಮಾಲೋಚಿಸಿ ದೇವತೆಗಳು ನಿರ್ಗಮಿಸುವರು )

ಓಘಜಿತ್ ದ್ವೀಪದಲ್ಲಿ – ಕಲ್ಪನೆಯ ಪ್ರವೇಶ

**ಬೇಗಡೆ** **ತ್ರಿವುಡೆ**

ಮನಮೋಹನಾಂಗಿ ಕಲ್ಪನೆ ಯಕ್ಷಕನ್ಯೆ । ವನವಿಹಾರಕೆ ಬರೆ ಗೆಳತಿಯರೊಡನೆ ॥ ಅನುವಿನಿಂ ಪ್ರಕೃತಿಯ ಸೊಬಗನು ನೋಡಿ । ತಣಿದು ಸರೋವರ ಕಿಳಿದು ಓಲಾಡಿ ॥ ೧ ॥

**ಕಲ್ಯಾಣಿ** **ಆದಿ**

ಚಲುವಿನ ಬಲೆಯೀ ಸುಂದರ ವನಸಿರಿಯು । ಕಲ್ಪನೆಯನು ಕುಣಿಸುವ । ಒಲವಿನ ಗೆಲುವಿನ ಮಿಲನದ ಮಂಜರಿಯು । ಬಳುಕಿ ನರ್ತಿಸುವ ಕೋಮಲ ಲತೆಗಳು । ಚಿಲಿಪಿಲಿಯೆನುವ ವಿಹಂಗಮತತಿಗಳು । ಕಲೆತು ಮಲೆತು ಅಲೆದಾಡುವ ಮಿಗಗಳು । ನಲಿಸಿ ನಿಲಿಸಿ ಮನರಂಜನೆ ಕೊಡುವವು ॥ ೧ ॥

**ಸಾಂಗತ್ಯ** **ರೂಪಕ**

ವನವ ನೋಡುತಲಿರೆ ಭೀಕರ ಸ್ವರಕೇಳಿ । ಮನದೊಳಂಜುತ ಕುತೂಹಲದಿ ॥ ಅನುವರಿಯಲು ಮೆಲ್ಲನಡಿಯಿಡುತ್ತೈದಿ ಯ । ಕ್ಷಿಣಿಯರು ನಿಲೆ ಗುಪಿತದಲಿ ॥ ೧॥

**ಸೌರಾಷ್ಟ್ರ** **ತ್ರಿವುಡೆ**

ವರುಣನ ಕೃಪೆಯಿಂದ ಭೂವರ । ಗಿರಿಯ ಬಂಡೆಯ ಮೇಲೆ ಪ್ರಜ್ಞೆಯ । ತೊರೆದು ಬಿದ್ದರೆ ದುರುಳೆಯರು ತಾವ್ । ಪರಿಕಿದರು ॥ ೧ ॥

**ಗೌಳ** **ಅಷ್ಟ**

ಕಂಡೆಯೇನೆ । ಭೂಪನ । ಕಂಡೆಯೇನೆ ॥ ಪ ॥ ಪುಂಡುತನದೊಳಗೂರ ತಿರುಗಿ । ಕಂಡವರ ಕಾಡಿಸುತ ಕೊಬ್ಬಿ । ಹಿಂಡಿನಾ ಮರೆಯೊಳಗೆ ತಂಗಿ । ಬಂಡೆಯೊಳ ಗೊರಗಿರುವ ಮಲಗಿ ॥ ೧ ॥ ಅಕ್ಕ ನೀ ಕೂಗಿದರೆ ಹೀಗೆ । ಸಿಕ್ಕನೀತನು ನಮ್ಮ ಕೈಗೆ । ಫಕ್ಕನೆದ್ದೋಡಿದರೆ ಕಡೆಗೆ । ಕಕ್ಕುಲಾತಿಯು ಪಣದ ಬಗೆಗೆ ॥ ೨ ॥ ಹತ್ತಿರದೊಳಿವನನ್ನು ನೋಡೆ । ಹೊತ್ತಿಹುದು ಎದೆಯಲ್ಲಿ ಬೇಗೆ । ಮುಟ್ಟಿದರೆ ಜುಮ್ಮುಹುದು ಕೈಗೆ । ಎತ್ತಿದರೆ ಸರಿಸುವುದು ಹೇಗೆ ॥ ೩ ॥ ನಮ್ಮ ಜನರೊಳು ಇವನ ಪೋಲ್ವ । ಹೆಮ್ಮೆಗಾರರು ಇಲ್ಲವವ್ವ । ಸುಮ್ಮನಿವನನು ಗುಹೆಗೆ ಒಯ್ಯ । ಗುಮ್ಮನಾಟದಿ ಸುಖವ ಪಡೆವ ॥ ೪ ॥

**ಕೇದಾರಗೌಳ** **ಝಂಪೆ**

ಆಡಿದಾ ಮಾತ ಮರೆಯೆ । ನಾವೇನು । ನಾಡಿನೊಳಗಿರುವ ಜನರೆ ॥ ಬಾಡಿ ಬಿದ್ದಿರುವ ನಿವನ । ಒಯ್ದಲ್ಲಿ । ಪೀಡಿಸುತ ತೆಗೆವ ಹರಣ ॥ ೧ ॥ ನಾನೀ ಕಡೆಯೊಳೈ ತಹೆ । ಅಕ್ಕ ಬಾ । ನೀನಾಕಡೆಯೊಳಲಸದೆ ॥ ಮಾನವನ ಬಿಡ ಬಾರದು । ಎನುತಲಾ । ದಾನವಿಯರಡ ಹಾಯ್ದರು ॥ ೨ ॥ ಯಕ್ಷಿಣಿ ಯರಿದನು ನೋಡಿ । ನೃಪವರನ । ರಕ್ಷಿಸಲು ಮನವ ಮಾಡಿ ॥ ಕಕ್ಷೆಗೊದಗಿದ ತೆರದೊಳು । ಕಾಡಿಸಲು । ರಕ್ಕಸಿಯರಿಂತೆಂದರು ॥ ೩ ॥

**ತೋಡಿ ಏಕ**

ಹಿಡಿಯೆ ಹೋದರೆ ಸಿಕ್ಕನೀತ । ಬಡಮನುಜ ನಲ್ಲರರೆ ಖ್ಯಾತ ॥ ಅಡಗಿ ನಮ್ಮನು ವಂಚಿಸುತ್ತ । ಬಡಿವನೋ ತಲೆ ಕಡಿವನೋ ಹುಟ್ಟಡಗಿಸುವನೋ ॥ ೧ ॥ ಕುರುಡನಾದನು ಹೊಟ್ಟೆಬಾಕ । ಹೊರಳು ತಿರಲಾ ಪಾಲಿಜಾಖ । ಬರಿದೆ ಪಂಥವು ಬೇಡ ಮರುಕ । ಮರಳುವಾ ನಾವ್ ತೆರಳುವಾ ಇಲ್ಲಿರುವದಲ್ಲ ॥ ೨ ॥ ರಕ್ಕಸಿಯರಿಂತೈದಲತ್ತ । ಯಕ್ಷಿಣಿಯರಾ ಎಡೆಗೆ ಬರುತ । ದಕ್ಷ ನೃಪನ ಸಮೀಪಿಸುತ್ತ । ಲಕ್ಷಿಸೀ ಅಪೇಕ್ಷಿಸೀ ತಾವೀಕ್ಷಿಸಿದರು ॥ ೩ ॥

**ಕಾಂಬೋಧಿ** **ಅಷ್ಟ**

ಅನುಪಮ ಸುಂದರ ಇವನಹುದು । ಅಹಹ । ಮನುಮಥ ನಿಲ್ಲಿ ಬಂದಿರ ಬಹುದು ॥ ಮನಮೋಹನಾಂಗನ ಚಲುವಿಗೆ । ಏನೇ । ನನುಭವ ಮಿಂಚಿತೊ ಬ್ರಹ್ಮಗೆ ॥ ೧ ॥ ಅಮಮ ನಾನೀಗ ನವಯುವತಿಯಲ । ಈ ಸಂ । ಭ್ರಮ ದೊಳೀತನ ಕಂಡೆನಲಲಲಲ ॥ ಭ್ರಮರ ಝೇಂಕಾರದ ಅನುರಾಗ । ತಂತು । ಸುಮಪರಾಗಕೆ ರಸಫಲಯೋಗ ॥ ೨ ॥

**ಕೇದಾರಗೌಳ** **ಅಷ್ಟ**

ಅನಿತರೊಳೆಚ್ಚತ್ತು ಜನಪನು ತನ್ನಿರ । ವನು ತಿಳಿಯದೆ ಭ್ರಮಿಸಿ ॥ ವನಿತೆಯರನ್ನು ಕಂಡಣಕಿಸಿ ಕೆಣಕುತ । ಗೊಣಗುತಿಹುದ ನೀಕ್ಷಿಸಿ ॥ ೧ ॥ ಚಲುವ ನೀನ್ಯಾರು ನಿನ್ನಯ ನೆಲೆಯಾವುದು । ತಿಳುಹಿಸು ವಿವರವಾಗಿ ॥ ಬಳಲಿ ಬಿದ್ದಿರ್ದ ರಕ್ಕಸಿಯರೇ । ತಕೆ ನಿನ್ನನೆಳೆದರು ಕೂಗಿ ಬಾಗಿ ॥ ೨ ॥ ಕೊಕೊಕೊ ಕೂಗಿತು ಕೋಳಿ ಮಂಗ ಹಾರುತಲಿದೆ । ಪಿಕಿಪಿಕಿ ನೋಳ್ಪಿರೇಕೆ ॥ ಪಕಪಕ ನಗಬೇಡಿ ತಿನ್ನಲು ಕೋಡಿರೆಂದು । ಸಕಲರು ಕಾಡುತಿರೆ ॥ ೩ ॥ ಮರಬೋಧೆ ಯಾಗಿಹುದಿವಗೆಂದು ಕಲ್ಪನೆ । ಕರೆದು ಸಂತೈಸುತಲಿ ॥ ಪರಿಪರಿ ತಂತ್ರದಿ ತಿದ್ದಿ ಬುದ್ಧಿಯ ಪೇಳ । ಲರಿತನು ಪ್ರಜ್ಞೆಯಲಿ ॥ ೪ ॥

**ಸಾರಂಗ** **ರೂಪಕ**

ನಾನು ಪುರುಷ ನೀನು ಪ್ರಕೃತಿ ಜೀವಜಾಲ ಕಲ್ಪನೆ ॥ ಮಾನವರಿಗೆ ಜ್ಞಾನವೇ ವಿಕಾಸ ಸಾಧನೆ ॥ ೧ ॥ ಅರಿವು ನಿನಗೆ ಮರಳಿ ಬಂತು ಹರುಷವಾಯಿತು ॥ ಸುರರ ಜಪಿಸಿ ವರವ ಪಡೆದ ಪರಿಯ ಧ್ಯಾನಿಸು ॥ ೨ ॥ ಅಮಿತ ಪ್ರೀತಿಯಿಂದ ಎನ್ನ ರಮಿಸಿ ತಿದ್ದಿದೆ ॥ ರಮಣಿ ನೀನಾದರು ಶಿಷ್ಯಕ್ರಮವ ತಿಳಿದಿಹೆ ॥ ೩ ॥ ದೊರೆಯು ನೀನುಲ್ಲಾಸದತ್ತ ಮರೆತೆ ಮೂಲವ ॥ ಸುರರ ಸಲಹೆಯಂತೆ ನಾನು ಗೈದೆ ಕಾರ್ಯವ ॥ ೪ ॥

**ಮೋಹನ** **ತ್ರಿವುಡೆ**

ಯಕ್ಷಿಣಿಯು ನಾನೀ ಪ್ರದೇಶದ । ಲಕ್ಷಣಕೆ ಮನಸೋತೆನು । ಲಕ್ಷಿಸಿದೆ ನೀ ಬಳಲಿ ಬಿದ್ದುದ । ರಕ್ಷಿಸಲು ಮುಂದಾದೆನು ॥ ೧ ॥ ತಲ್ಲಣಿಸಿ ನಾವೆಯಲಿ ತೊಳಲಿದು । ದೆಲ್ಲವೂ ನೆನಪಿರ್ಪುದು ॥ ಇಲ್ಲಿಗೆಂತೈತಂದೆನೆಂಬುದ । ಬಲ್ಲ ನೀನೇ ಪೇಳ್ವುದು ॥ ೨ ॥ ಪಾಲಿಜಾಖನ ಶಾಪ । ವರುಣನ ಕೋಪ ದಿಂತಾಯಿತು ॥ ಕಾಲಮಹಿಮೆಯ ನರಿತು ನೀಗುಣ । ಶೀಲನಾಗಿ ವಿರಾಜಿಸು ॥ ೩ ॥ ಅಹಂಕಾರದಿ ಮೆರೆದು ಸತ್ವದ ಮೂಲವನೆ ಮರೆತಿರ್ದೆನು ॥ ಸ್ನೇಹವೇ ಜೀವನದ ಬೆಳಕೆಂದರಿತು ಸಂತಸಗೊಂಡೆನು ॥ ೪ ॥

**ದ್ವಿಪದಿ**

ಇಂತು ಕಲ್ಪನೆಯ ಸಾನಿಧ್ಯದಲಿ ನೃಪನು । ಸಂತಸದಿ ಕಳೆದನ್ಯೆ ಕೆಲವು ಕಾಲವನು ॥ ೧ ॥ ತೀರ್ಥತೇಜರ ಸೂಚನೆಯು ಮನದಿ ಸುಳಿಯೆ । ಯಾತ್ರೆಗನುವಾದ ನೃಪ ನಿಜನೆಲೆಗೆ ಸರಿಯೆ ॥ ೨ ॥ ಚಿಂತಾಮಣಿಯನಿತ್ತು ದ್ವೀಪವನು ತೋರಿ । ಸಂತೈಸಿ ತೆರಳಿದಳು ಕಲ್ಪನಾದೇವಿ ॥ ೩ ॥ ಯಕ್ಷಗಾನದ ಮುಖದಿ ಜ್ಞಾನವನು ಪಡೆದಿ । ದಕ್ಷನುಲ್ಲಾಸದತ್ತನು ಮುಂದೆ ನಡೆದ ॥

॥ ಮಂಗಳಂ ॥

ದ್ವೀಪದಿಗ್ವಿಜಯ ಮುಗಿದುದು.

ಉಲ್ಲಾಸದತ್ತ ವಿಜಯ ದ್ವಿತಿಯ ಭಾಗ ಸಮಾಪ್ತ

ಶ್ರಾವಣ ಮಾಸ- ಎಲೆಮನೆ - ೨೧/೮/೯೬ ರಿಂದ ೨೩/೮/೯೬

ಯಕ್ಷಗಾನ ಪ್ರಸಂಗ

# ಉಲ್ಲಾಸದತ್ತ ವಿಜಯ

ಭಾಗ – ೩

## ಸಾಮ್ರಾಜ್ಯ ವಿಜಯ

ರಚನೆ : ಹೊಸ್ತೋಟ ಮಂಜುನಾಥ ಭಾಗವತ

ಪಾತ್ರಗಳು :

* ಅಲೇಶ ಸಿಂಹ * ಆದಿತ್ಯ ಸಿಂಹ * ಮಂತ್ರಿ * ಚಾರರು
* ಉಲ್ಲಾಸದತ್ತ * ಘೋರವರ್ಮ– ಕಿರಾತ * ಅಂತಿನಾಥ * ಶಕುನಿ
* ಹುಚ್ಚ * ಯುದ್ಧಮುಷ್ಟಿ * ತೇಜೋದತ್ತ * ಪದ್ಮರೇಖೆ * ನಾನಿಕೆ
* ಸಖಿಯರು * ದೂತ * ದೀರ್ಘಬಾಹು

ಪುರಜನರು – ಕ್ರೀಡಾಪಟುಗಳು

### ಘನಾಂಬು ದೇಶದಲ್ಲಿ ಅಲೇಶ ಸಿಂಹನ ಒಡ್ಡೋಲಗ

**ಭೈರವಿ** **ಝಂಪೆ**

ಶರಧಿ ತೀರದೊಳಿಹ ಘನಾಂಬು ದ್ವೀಪದ ನೆಲೆಗೆ । ಅರಸ ನಾಗುತಲೇಶ ಸಿಂಹ ॥ ನಿರತಕೃಷಿ ವಾಣಿಜ್ಯ ಪಶುಪಾಲನೆಯೊಳಿರುವ । ಪರಿಜನರ ಕೂಡಿ ರಾಜಿಸಿದ ॥ ೧ ॥ ಆದಿತ್ಯಸಿಂಹಸುತ ನಾಸಿಕಾಸುತೆ ನೃಪಗೆ । ಆದಿಲಕ್ಷ್ಮೀಯ ಉಪಾಸಕನು ॥ ಸಾಧುಗಳು ಅಭಯ ಮಿತ್ರರು ಪುರೋಹಿತರ್ಹೈಸೆ । ಮೋದದಿಂ ಪೊರೆದ ಪ್ರಜೆಗಳನು ॥ ೨ ॥

**ಮಧ್ಯಮಾವತಿ** **ಏಕ**

ನಿಷ್ಠೆಯಿಂಗೈವ ವೈಭವಲಕ್ಷ್ಮೀ ವ್ರತಕೆ । ಪಟ್ಟಾಭಿಷೇಕದ ನೆನಪಿನ ಹರಕೆ ॥ ಒಟ್ಟಾಗಿ ಜನರೆಲ್ಲ ನಲಿಯೆ ಸಂಭ್ರಮದಿ । ಜಟ್ಟಿಕಾಳಗ ಕ್ರೀಡೆ ಮನರಂಜನೆಯಲಿ॥ ೧ ॥

**(ಅಲೇಶಸಿಂಹ ಮಂತ್ರಿಗಳೊಂದಿಗೆ ಉತ್ಸವದ ಬಗ್ಗೆ ಸೂಚಿಸಿ ನಿರ್ಗಮಿಸುವನು– ಮಂತ್ರಿ ಆ ಕುರಿತು ಪೌರರಿಗೆ ಸೂಚನೆ ಕೊಡುವನು )**

ಪರದೇಶಿಯಂತೆ ಬಂದುಲ್ಲಾಸದತ್ತ । ಪುರದ ವೈಭವ ನೋಡಿ ಸಂತೋಷ ಪಡುತ ॥ ಪರಿಪರಿ ಕ್ರೀಡೆಯೊಳ್ತಾಭಾಗವಹಿಸಿ । ಪರಿಕಿಪ ಹಿರಿಯರ ನಚ್ಚರಿ ಗೊಳಿಸೆ ॥ ೧ ॥

**ಶಂಕರಾಭರಣ** **ತ್ರಿವುಡೆ**

ವಿವಿಧ ಕ್ರೀಡೆಗಳಲ್ಲಿ ಗೆಲಿದವ । ನಿವನೆನುತ ಘೋಷಿಸಲು ಪದಕವ । ನಮಗೆ ಬಹುಮಾನಿಸುತ ಪೇಳಿದ । ನವನಿ ಪತಿಯು ॥ ೧ ॥ ನಿನ್ನ ಪರಿಚಯ ದೊರೆತುದೆಮ್ಮಯ । ಪುಣ್ಯವೈ ತವ ಜನ್ಮಭೂಮಿಯು । ಧನ್ಯಳೈ ಪೂರ್ವಾಪರವ ಪೇ । ಳಿನ್ನು ಹಿತದಿ ॥ ೨ ॥ ವರಗೃಹೀಕರ ನಾಡಿಥಾಕಾ । ಪುರದ ವಾಸಿಯು ನಾನು ಧರೆಯೊಳ । ಗಿರುವ ಸುದ್ವೀಪಗಳ ಮಹಿಮೆಯ । ನರಿಯೆ ಬಂದೆ ॥ ೩ ॥

**ಕಲ್ಯಾಣಿ** **ಅಷ್ಟ**

ವೀರಗೃಹೀಕ ಬಾರ್ಯೆ ಪೀಠವೇರು । ಸಾರ ಸಂಸ್ಕೃತಿಯ ಸಂಬಂಧವ ತೋರು ॥ ಪಲ್ಲ ॥ ಕಾರಣವನು ಪೇಳ್ವೆ ನಮ್ಮ ಪೂರ್ವಜರಿತ್ತ । ಸಾರಿಬಂದರು ಬಹುಕಾಲಾಂತರದ ಹಿಂದೆ । ತೀರ ಪ್ರದೇಶದೊಳು । ನೆಲೆಗಾಣುತ । ಲೂರ ನಿರ್ಮಿಸಿ ಬಾಳ್ದರು । ಪೂರ್ವದಕತೆ । ಪೌರಾಣಗಳ ಪೇಳ್ದರು । ಪ್ರತಿಷ್ಠೆ ಗಾ । ಧಾರವಾಯ್ತೀಗ ತ್ರಯಾದ್ರಿಯ ವಿಜಯವು ॥ ೧ ॥ ಈ ನೆಲೆಗೈತಂದು ನಿಮ್ಮ ಸಂಸ್ಕೃತಿ ಕಂಡು । ನಾನತಿ ಮುದಗೊಂಡು ತವಕಿಸುತಿರ್ದೆಸು । ಜ್ಞಾನಿ ನಿನ್ನನು ಕಾಣಲು । ಈ ಪೌರಸ । ನ್ಮಾನದ ವೇಳೆಯೊಳು । ನೀಡಿದೆ ಬಹು । ಮಾನವ

ಮಮತೆಯೊಳು । ಆಭಾರಿಯು । ನಾನಾದೆ ಮಣಿವೆ ವಿನೀತ ಭಾವ ದೊಳು ॥ ೨ ॥

**ಸುರುಟಿ** **ಏಕ**

ಅರಮನೆ ಗೈತಂದು । ನಮ್ಮನು । ಹರುಷಗೊಳಿಸು ಇಂದು ॥ ತರಳೆ ನಾನಿಕೆಯ ನೀ ಸ್ವೀಕರಿಸಲು । ಪರಿಣಯಗೈವೆನು ವಿಜ್ರಂಭಣೆಯೊಳು ॥ ೧ ॥ ನಿನ್ನಯ ಸಂಬಂಧ । ಒಪ್ಪುವೆ । ಧನ್ಯ ಭಾವದಿಂದ । ಎನ್ನಾತ್ಮಜ ತೇಜೋದತ್ತನು ಸಂ । ಪನ್ನೆ ನಾನಿಕೆಯ ವರಿಸುವನಿದು ನಿಜ ॥ ೨ ॥

**ಭಾಮಿನಿ**

ಅಹಹ ಈಗೆನಗರಿಕೆಯಾಯಿತು । ಮಹಿಮ ನೀನುಲ್ಲಾಸದತ್ತನು । ಬಹುಚತುರ ನೀ ಮಾರುವೇಷದೊಳೇತ ಕೈತಂದೆ ॥ ವಹಿಸಿ ಯಾತ್ರೆಯ ದ್ವೀಪ ಕ್ಷೇತ್ರವ । ಸಹಸದಿಂ ಸಂಚರಿಸಿ ನಿಮ್ಮಯ । ಮಹಿಯ ಪೊಕ್ಕೆನು ತೀರ್ಥತೇಜರು ನುಡಿದತೆರನಂತೆ ॥ ೧ ॥

**ತೋಡಿ** **ರೂಪಕ**

ಕರಣಿಕರನು ಕರೆದೆಂದನಲೇಶನು । ಭರದಿ ಕಪ್ಪವ ನೊಪ್ಪಗೊಳಿಸಿ ॥ ತ್ವರಿತದಿ ಕಳುಹಿಸದಿರೆ ಘೋರವರ್ಮನು । ಬರುವನು ಕೆರಳಿ ಹೂಂಕರಿಸಿ ॥ ೧ ॥ ಯಾರವನಾ ಘೋರವರ್ಮನ ಭಯವೇಕೆ । ಭೂರಿಕಾಣಿಕೆ ನೀಡುತಿಹಿರಿ ॥ ಧಾರಿಣೀಶನೊ ಸಿದ್ಧಪುರುಷನೊ ಅಮರನೊ । ಈ ರೀತಿ ಯಾಕಂಜು ತಿಹಿರಿ ॥ ೨ ॥ ಪೇಳಲೇನ್ನೈ ಕಾಡವ್ಯಾಧನಾತನು ಕೊಬ್ಬಿ । ದಾಳಿಗೈವುತ ಪೀಡಿಸು ವನು ॥ ಮೇಲಾದ ಬಿಲ್ಲುಗಾರನ ವೈರ ಬೇಡೆಂದು । ಓಲೈಸಿ ಧನವ ನೀಡು ವೆವು ॥ ೩ ॥ ಶ್ರಮದಿ ಸಂಪಾದಿಸಿದಂಥ ಸಂಪತ್ತನೀ । ಕ್ರಮದಿಂದ ವ್ಯಯಿಸುವಿರೇಕೆ ॥ ಕುಮತಿಯಾಕೊಳ್ಳೆ ಗಾರನು ಮುಳಿದೈತೆರೆ । ದಮಿಸುವೆನವನ ಹೆಗ್ಗಳಿಕೆ ॥ ೪ ॥

( ಅಲೇಶ ಸಿಂಹನಿಗೆ ಧೈರ್ಯಹೇಳಿ ನಿರ್ಗಮಿಸುವುದು )

ಘೋರವರ್ಮನ ಆಗಮನ

### ಮಾರವಿ ಏಕ

ಘೋರವರ್ಮನ ಹೆಸರಾ ಕೇಳಿ । ಹೆದರಿ ಸಾಯ್ತವ್ರೆ ॥ ಭಾರಿ ದರೋಡೆ ಮಾರಾಮಾರಿ ಕಂಡು ನಡುಗವ್ರೆ ॥ ೧ ॥ ನಾಕ್ ವರ್ಸಾತು ಅಲೇಸಸಿಂಹ । ಹಣವಾ ನೀಡ್ತವ್ನೆ ॥ ಯಾಕೂರ್ಕೊಳ್ಳೆ ಹೊಡಿಯೋದಂತ । ನಾನೂ ಸುಮ್ನಿವ್ನಿ ॥ ೨ ॥ ದಿನ ಈಟಾತು ಇನ್ನೂ ಹಣವ ಕಳಿಸಿ ಕೊಡ್ನಿಲ್ಲ ॥ ಘನಾಂಬುದೊರೆಗೆ ಗಿರ್ ಚಾರ ಹಿಡಿತೋ ಏನೋ ಗೊತ್ತಿಲ್ಲ ॥ ೩ ॥

### ಕಾಂಬೋಧಿ ಝಂಪೆ

ಅತಿಖತಿಯೊಳ್ಳೆ ತಂದಲೇಶ ಸಿಂಹನಿಗೆ ಸಂ । ಗತಿಯ ಸೂಚಿಸಲಾತ ನಂದು ॥ ಜತೆಯೊಳುಲ್ಲಾಸದತ್ತನ ಕೂಡುತಿದಿರಾಗೆ । ಪ್ರತಿಭಟಿಸಿ ನುಡಿದನಣಕದೊಳು ॥ ೧ ॥

### ಭೈರವಿ ಅಷ್ಟ

ತಡದಿ ಕಪ್ಪವ ಕೊಡಾಕ । ಹೀಗ್ಯಾತಕ । ನುಡಿದಂತೆ ನಡೆಯಬೇಕ ॥ ನಡಿನಡಿ ಬೇಗ ತಂದೊಪ್ಪಿಸು ನಿಲಬೇಡ । ಹೊಡೆದೇನು ಮುಖದ ಮ್ಯಾಕ ॥ ೧ ॥ ಘೋರವರ್ಮನು ನೀನಲ । ಕಾಡಿನ ಕೊಳ್ಳೆ । ಗಾರರೊಳತಿ ಪ್ರಬಲ ॥ ತೋರಿಸು ಬಿಲ್ಲುಗಾರಿಕೆಯ ಜಾಣ್ಮೆಯಕಾಂಬೆ । ಕ್ರೂರ ಮಾತಿನ್ನೇಕೆಲ ॥ ೨ ॥ ಯಾಕೋ ನೀ ಬಂದಿ ಇಲ್ಲಿ । ಪೇಳುವೆನು ಬಲ್ । ಜೋಕೆ ನೋಡೆನ್ನ ತಳ್ಳಿ ॥ ಬೇಕೆಂದು ಬಂದು ಬಡಾಯಿ ಕೊಚ್ಚದಿರು ಧಿ । ಮಾಕು ತೋರದಿರೆನ್ನಲಿ ॥ ೩ ॥ ಬಡಿದು ದೋಚುವುದ ಬಿಟ್ಟು । ಸನ್ಮಾರ್ಗದ । ದುಡಿಮೆಯ ನೀ ಹುಡುಕು ॥ ಕೆಡಕು ಬುದ್ಧಿಯ ಬಿಡದಿರೆ ದಂಡಿಸುವೆ ನಿನ್ನ । ಬಡಿವಾರ ಬೇಡ ಸಾಕು ॥ ೪ ॥

**ಶಂಕರಾಭರಣ** **ಮಟ್ಟೆ**

ಒಂದೇ ಬಾಣದಾಗ ನಿನ್ನ ನೆಲಕೆ ಕೆಡಹುವೆ । ಮುಂದೆ ಬಾರೆಲಾ ನಿನ್ನ ಬಲುಹ ಕಾಣುವೆ ॥ ೧ ॥ ಛಲದಿ ಕಾದಿ ಸೋತು ಬಳಿಕ ತಲೆಯತಗ್ಗುತ । ಬಳಲಿ ತಪ್ಪ ಕ್ಷಮಿಸಿರೆಂದ ಮಂಡಿಯೂರುತ ॥ ೨ ॥ ಊರ ಜನರ ಕಾಡದೆ ನೀ ಕಾಡೊಳು ಕೃಷಿಗೈದು । ಸಾರವರಿತು ಬದುಕು ಹೋಗು ಬಂದ ತೆರದೊಳು ॥ ೩ ॥ ಘೋರವರ್ಮತೆರಳಲಾ ಘನಾಂಬು ರಾಜನು । ಧೀರ ನೃಪನ ಪೊಗಳಿ ಪೇಳ್ದ ಮನದ ಮಾತನು ॥ ೪ ॥

**ಕಲ್ಯಾಣಿ** **ಏಕ**

ಲಾಲಿಸೈ ಗುಣಶೀಲ ಮಹರಾಜ । ವಿಕ್ರಮ ರವಿತೇಜ ॥ ಖೂಳ ವೃತ್ತಿಯ ಪುಂಡರಿಂದಲಿ ಬಾಳುವುದೆ ಬಲು ಕಷ್ಟವಾಗಿದೆ ॥ ೧ ॥ ಬಾಣ ವಿದ್ಯೆಯ ಬಗೆಯನರಿಯದೆ ಚಿಂತಿಸುತಲಿರ್ದೆ । ನೀ ನಿಲ್ಲಿಗೆ ಬಂದೆ ॥ ಕ್ಷೋಣಿಪನೆ ಗುರುವಾಗಿ ನೀರವಿ । ಸೇನನಿಗೆ ಧನುರ್ವಿದ್ಯೆ ಕಲಿಸೈ ॥ ೨ ॥ ವರುಷ ಹನ್ನೆರಡಾಯ್ತು ಪುರವನ್ನಗಲಿ ಬಂದಿರುವೆ । ಇಂತಲೆಯುತ ಬದುಕಿರುವೆ ॥ ಬರವ ನೋಡುತ ಮಡದಿ ಮಕ್ಕಳು । ಮರುಗುತಿಹರಾತಂಕ ಮನದೊಳು ॥ ೩ ॥

**ವಾರ್ಧಿಕ**

ಚಿಂತಿಸದಿರೈ ನಿನ್ನ ಜೊತೆಗೆ ನಾನೈತರುವೆ । ಕಾಂತೆಯಣುಗರ ಕೂಡಿ ಅಂಗರಕ್ಷಕರೊಡನೆ । ನಂತರದ ಸಂಗತಿಯ ನಾರಾಯಣನೆ ಬಲ್ಲ ಪಯಣ ಕಣಿಗೊಳಿಪೆ ಎನಲು ॥ ಸಂತಸವ ಪಟ್ಟೆ ನಿನ್ನಾಡಳಿತ ಕ್ರಮ ನೋಡಿ । ಎಂತಿದನ್ನಳವಡಿಸ ಬೇಕೆಂಬ ಯೋಜನೆಯ । ನಿಂತು ನಿನ್ನಿಂದಲೆ ಕಲಿವೆ ಸದ್ಯದ ಸ್ಥಿತಿಯ ತಿಳಿಯೆ ತಂತ್ರವ ಗೈವುದು ॥ ೧ ॥

**ಪಂತುವರಾಳಿ** **ಮಟ್ಟೆ**

ಬಹಳ ಕಾಲ ರಾಜ್ಯವಾಳಿದ । ಆ ಅಂತಿನಾಥ । ಕುಹಕಿಯೊ ಸಜ್ಜನನೊ

ಎಂಬುದ ॥ ಗೃಹಿಸಬೇಕು ದುಡುಕಿ ಪೋದೊ । ಡಹಿತ ವಹುದು ನೀನು ಹಿತದಿ । ಸಹಕರಿಸಿದೊಡೊಳ್ಳಿತಪ್ಪುದು । ಪ್ರಜೆಗಳಿರವ । ವಿಹಿತ ವೇಷದಿಂದ ತಿಳಿವುದು । ಆ ಮೇಲೆ ಪ್ರಕಟ । ವಹುದು ರಾಜಕೀಯ ಕ್ರಮವದು ॥ ೧ ॥

**ಅಂತಿನಾಥನ ಒಡ್ಡೋಲಗ**

**ಘಂಟಾರವ** **ಮಟ್ಟೆ**

ಪಟ್ಟ ದೊರೆತುದು ಅದೃಷ್ಟ ಬಲದೊಳು । ಸೃಷ್ಟಿಪಾಲನ ಸುಳಿವೆ ದೊರೆಯದು ॥ ಧಿಟ್ಟ ನೃಪಸುತನರಸನಾಗುವ । ಥಟ್ಟನೆನ್ನನು ಸರಿಸಿ ಮೆರೆಯುವ ॥ ೧ ॥ ಜಾಣಶಕುನಿ ನೀ ತೋರು ಪಥವನು । ನೀನು ಬಯಸಿದ ಪದವಿಯೀವೆನು ॥ ಕ್ಷೋಣಿಪಾಲನಾಗಿ ಬಾಳಲು । ಏನುಪಾಯವು ಹೇಳು ಜವದೊಳು ॥ ೨ ॥

**ಕೇದಾರಗೌಳ** **ಅಷ್ಟ**

ಉಲ್ಲಾಸದತ್ತನನೆಲ್ಲೆಲ್ಲೊ ಹುಡುಕಿದೆ । ಇಲ್ಲವಾತನ ಸುಳಿವು ॥ ಮೆಲ್ಲನೆ ಮುಂದಿನುಪಾಯ ಗೈಯುವದೆಂಬ । ಸೊಲ್ಲ ಪೌರರೊಳು ಪೇಳು ॥ ೧ ॥ ಜನಕ ಶೀಘ್ರದಿ ಬಹನೆಂದು ಸೂಚಿಸಿ ನೃಪ । ತನಯನ ಮರುಳು ಮಾಡು ॥ ಅನುಮಾನ ಬರದಂತೆ ವರ್ತಿಸೆ ನಿನ್ನ ಸಾ । ಧನೆಯು ಸಾರ್ಥಕವಹುದು ॥ ೨ ॥ ಅರಸಲೇಶ ಸಿಂಹನು ಪತ್ರ ಬರೆದಿಹ । ಬರುವೆನಿಲ್ಲಿರುವನೆಂದು ॥ ಹರುಷದೊಳವನ ಸತ್ಕರಿಸದಿರಲು ನಮ್ಮಾ । ಚರಣೆಗೆ ಕುಂದಹುದು ॥ ೩ ॥ ರಾಜನಾತನ ಬಹುಮಾನಿಸಿ ನಮ್ಮಯ । ರಾಜಕೀಯವ ಬಳಸಿ ॥ ತೇಜೋದತ್ತಗೆ ಪಟ್ಟ ಸಿಗದವೊಲೆಸಗುವ । ಸೋಜಿಗ ತಂತ್ರದಲಿ ॥ ೪ ॥

**ತೇಜೋದತ್ತನ ಪ್ರವೇಶ**

**ಘಂಟಾರವ** **ಅಷ್ಟ**

ಗುರುಗಳಾಶೀರ್ವಾದ ಪಡೆದು ತೇಜೊದತ್ತ । ತುರುಗವನ್ನಡರುತ್ತ ತನ್ನಯ ಪುರಕೆ

ಬಂದನು ವಹಿಲದಿ ॥ ೧ ॥ ಕಾಣುತಾ ಪದ್ಮರೇಖೆ ವಾತ್ಸಲ್ಯದಿ । ಜಾಣ ಬಾರೆನ್ನಾನೆ ಬಾರ್ಯೆ ನೀನೆನಗೆ ಸರ್ವಸ್ವವು ॥ ೨ ॥ ಚೌಷಷ್ಠಿ ವಿದ್ಯವ ಕಲಿತು ಬಂದಿರ್ಪೆನಿ । ನ್ನಾಶಿಷವು ಫಲಿಸಿದುದು ಮತ್ತೇ । ನಾಸೆಯಿರುವುದು ಸೂಚಿಸು ॥ ೩ ॥

**ಧನ್ಯಾಸಿ** **ಏಕ**

ಯಾತ್ರೆಗೆಂದು ಪೋದರಲ್ಲೊ ನಮ್ಮನಗಲುತ್ತ । ಪತ್ನೀ । ಪುತ್ರರನ್ನು ಮರೆತರೇನೊ ಬರಲಿಲ್ಲವಿತ್ತ ॥ ರಾತ್ರಿ ಹಗಲು ಬರವ ನೋಡಿ ಬಳಲಿದೆ ಕಂದ । ಪಿತನ । ವಾರ್ತೆಯನ್ನು ತಿಳಿಯೊ ನೀನು ಬುದ್ಧಿಬಲದಿಂದ ॥ ೧ ॥ ವಿಶ್ವದೊಳೆಲ್ಲಿರಲಿ ಪುಡುಕಿ ತರುವೆ ಜನಕನ । ಅಮ್ಮಾ । ವಿಶ್ವಾಸವನ್ನಿರಿಸಿ ಕೇಳು ಬೆಡಗಲ್ಲೀ ವಚನ ॥ ವಿಸ್ಮಯದ ಆಡಳಿತ ನಮ್ಮನಣಕಿಸುತ್ತಿದೆ । ಇನ್ನೀ ಕಲ್ಮಶವ ತೊಳೆಯದಿರೆ ಪುರಕೆ ಕುತ್ತು ಕಾದಿದೆ ॥ ೨ ॥ ರೆಕ್ಕೆ ಬಲಿಯದಿರುವ ಹಕ್ಕಿ ದುಡುಕಿ ಹಾರಲು । ಬಲೆಯ । ನಿಕ್ಕಿ ಕಾದ ಬೇಡರಿಂಗಾಹಾರ ವಪ್ಪುದು ॥ ಚಿಕ್ಕವ ನೀ ತಿರುಗಿ ತಿಳಿದು ರಾಜಕೀಯವ । ಬಳಿಕ । ಸೊಕ್ಕಿದವರ ಮರ್ದಿಸುತ್ತ ಪಡೆಯೊ ಪಟ್ಟವ ॥ ೩ ॥

**(ಪದ್ಮರೇಖೆಯ ಬುದ್ಧಿವಾದವನ್ನು ತಿಳಿದು ದುಗುಡದಿಂದ ಹೊರಡುವನು. ಇತ್ತ ಅಂತಿನಾಥನು ಅಲೇಶಸಿಂಹನನ್ನು ಸ್ವಾಗತಿಸುವನು. )**

**ಕಾನಡಾ** **ತ್ರಿವುಡೆ**

ಬನ್ನಿ ಬನ್ನಿ ಮಹಾನುಭಾವರೆ ನಿಮಗೆ ನಮ್ಮಯ ಸ್ವಾಗತ । ಧನ್ಯರಾದೆವು ನಿಮ್ಮ ದರ್ಶನದಿಂದ ನಾವ್ ತಲೆವಾಗುತ ॥ ೧ ॥ ದಣಿದಿಹಿರಿ ವಿಶ್ರಮಿಸಿ ಮಧುಕ್ಷೀರಗಳ ಸ್ವೀಕರಿಸುತ್ತಲಿ । ಮನದಿ ಸಂಕೋಚವನು ತೋರದೆ ನಮ್ಮವರೆ ನೀವಾಗಿರಿ ॥ ೨ ॥ ಒಂದು ದಿನವಲ್ಲರ್ಧವತ್ಸರವಿಲ್ಲಿಯೇ ನಾವಿರುವೆವು । ಹೊಂದಿ ನಿಮ್ಮಯ ಸಂಸ್ಕೃತಿಯ ಸೊಬಗನ್ನುಸವಿಯಲು ಬಂದೆವು ॥ ೩ ॥ ನಿಮ್ಮ ವಾಸಕೆ ರಾಜಮಂದಿರವನ್ನೆ ಕಾದಿರಿಸಿರ್ಪೆವು । ನಮ್ಮನಗರವೆ ನಿಮ್ಮ ಸೇವೆಗೆ ಸಿದ್ಧವಾಗಿರುತಿರ್ಪುದು ॥ ೪ ॥

**(ಸುವ್ಯವಸ್ಥೆಯನ್ನು ಕಾಣಿಸಲು ಕರೆದೊಯ್ಯುವನು. ಉಲ್ಲಾಸದತ್ತನು ಹುಚ್ಚನಂತೆ ಪುರವನ್ನು ಪ್ರವೇಶಿಸುವನು.)**

**ಹುಸೇನಿ** **ಅಷ್ಟ**

ನರಮಂಡಲದಲಿ ಬದುಕುವ ನರರಿಗೆ ಬುಡತುದಿಗಳೆ ಇಲ್ಲ ॥ ಮರಗಳಿಗಾದರೆ ಬೇರಿದೆ ಸಂತತ ಚಿಗುರುತಲಿಹುದಲ್ಲ ॥ ೧ ॥ ಕುಂಭಕರ್ಣನನು ಮರೆತೇ ಬಿಟ್ಟರು ರಾಮನ ಸ್ಮರಿಸುವರು ॥ ಹಂಬಲಿಸರು ಶಕುನಿಯ ಚಾತುರ್ಯವ ಕೃಷ್ಣನ ಪೂಜಿಪರು ॥ ೨ ॥ ಸ್ಥಾನಮಾನ ಸಿರಿಸಂಪತ್ತೆಂಬರು ಏನೇನೊ ಕರ್ಮ । ಪಾನ ಭೋಜನವ ಊಟ ಕೂಟಗಳೇ ಆಡಳಿತದ ಮರ್ಮ ॥ ೩ ॥ ಅಂತಿನಾಥ ಶಕುನಿಗಳೀ ಬಗೆಯನ್ನಣುಕಿಸಿ ತೆರಳಿದರು ॥ ಅಂತರಂಗವನ್ನರಿಯುವೆ ನೆನ್ನುತ ಯುದ್ಧಮುಷ್ಟಿ ಬರಲು ॥ ೪ ॥

**ಕಾಪಿ** **ಅಷ್ಟ**

ಅರರೆ ನೀನ್ಯಾರು ಮರುಳನೆ ಪೇಳು । ಪರಿಚಯ ತಿಳುಹು ಸರಿಯಾಗಿ ಬಾಳು ॥ ತಿರಿದು ನೀ ತಿರುಗೆ ಸೆರೆವಾಸ ನಿನಗೆ । ಕರೆಯುವೆ ಮನೆಗೆ ಭರದಿ ಬಾ ಜತೆಗೆ ॥ ನಿನ್ನನುಭವದಿ ಚನ್ನಾಗಿನುಡಿದಿ । ನಿನ್ನಯ ಗೃಹದಿ ಇನ್ನಿಹೆ ಮುದದಿ ॥ ಅನ್ಯರಿಗರುಹುವೆ ಅನ್ಯಾಯವಹುದ್ಯೆ । ಸನ್ಮತಿ ಗೃಹಿಸಿ ಮನ್ನಣೆ ಗಳಿಸ್ಯೆ ॥ ೨ ॥

**(ಉಲ್ಲಾಸದತ್ತನು ಯುದ್ಧಮುಷ್ಠಿಯ ಮನೆಯಲ್ಲಿ ಇರುವನು. ಅಂತಿನಾಥನು ಸಿಂಹಾಸನದ ಉತ್ತರಾಧಿಕಾರಕ್ಕೆ ಹೊಂಚುಹಾಕಿ ಗುಪ್ತ ಸಭೆ ಕರೆಯುವನು. ಅಲೇಶಸಿಂಹ, ತೇಜೋದತ್ತ, ಶಕುನಿ, ಅಂತಿನಾಥ– ಅಧಿಕಾರಿಗಳು, ಪೌರರು )**

**ಕಾಫಿ** **ಅಷ್ಟ**

ಬಲ್ಲವರು ನೀವೆಲ್ಲವರು ॥ ಪ ॥ ಉಲ್ಲಾಸದತ್ತ ಭೂಪಾಲ ಕಣ್ಮರೆಯಾದ । ಇಲ್ಲಿ ಪಟ್ಟವು ತೆರವಾಯ್ತಲ್ಲ ಅಳುವವರಿಲ್ಲ ಕಷ್ಟ ನಮಗೆಲ್ಲ ॥ ಊರಿ ನಲ್ಲೆಲ್ಲ ಗುಜುಗುಜು ಸುಳ್ಳಲ್ಲ । ನಾವಿ । ನ್ನಿಲ್ಲಿ ಸುಮ್ಮನೆ ಇಹುದೊಳಿತಲ್ಲ ॥ ೧ ॥ ಬದಲೋರ್ವ ಪಟ್ಟವ

ತಾನೇರು ವಂತಿಲ್ಲ । ಪದುಮರೇಖೆಯು ಮಹಾ ರಾಣಿಯು । ಬಹುಜಾಣೆಯು ಶುಕವಾಣಿಯು । ಅವಳಧಿಕಾರ ಬಯಸಲಾಕಾರಣ । ಮತ್ತೆ ಮದುವೆಯಾದರೆ ಎಲ್ಲ ಓರಣ ॥ ೨ ॥

**ತೇಜೋದತ್ತ ಬೇಸರದಿಂದ–**

## ಮೋಹನ ಏಕ

ಸಲ್ಲದು ಈ ವಚನ । ಬಲ್ಲವ । ರೊಲ್ಲದ ಮೂರ್ಖತನ ॥ ಎಲ್ಲಿರಲಾ ಪಿತನನ್ನು ಹುಡುಕಿ ನಾ । ನಿಲ್ಲಿಗೆ ಕರೆತಹೆನವಸರ ಪಡದಿರಿ ॥ ೧ ॥

**(ಅಲೇಶ ಸಿಂಹ ಪುನರ್ವಿವಾಹ ವಿಧಾನ ಸಮರ್ಥಿಸುತ್ತ )**

ಯಾಗ ಬಲದಿ ನಹುಷ । ಸುರಪತಿ । ಯಾಗುವ ಆ ನಿಮಿಷ ॥ ಆ ಗುರುವರುಹಿದ ಶಚಿಪತಿಯಾದರೆ । ಸಾಗಿಸಬಹುದೀ ಪದವಿಯನೆನ್ನುತ ॥ ೨ ॥ ಪುನಃ ಸ್ವಯಂ ವರವು । ಪಟ್ಟಕೆ । ಘನಸ್ಥಿಕೆಯ ತಹುದು ॥ ಮನಸಿಟ್ಟು ಮಹಾರಾಣಿಯೀ ಕಾರ್ಯಕೆ । ಧನುಸ್ಸಾಗೆ ಗುರಿಯೀಡೇರುವುದು ॥ ೩ ॥

**(ಅಂತಿನಾಥ– ಪರಿಸ್ಥಿತಿ ತನಗೆ ಅನುಕೂಲವೆಂದು ತಿಳಿದು )**

## ದ್ವಿಪದಿ

ಆಯಿತೀ ನಿರ್ಣಯವ ಸ್ವೀಕರಿಸಿ ಬಿಡುವ । ತಾಯಿಯನ್ನೊಪ್ಪಿಸಲಿ ಹಿತದಿ ನೃಪಕುವರ ॥ ೧ ॥ ದುಗುಡದಿ ಪ್ರಕಾಶದತ್ತನು ಸಭೆಯನಗಲಿ । ಬಗೆಬಗೆಯ ಹಂಬಲಿಸಿ ಬರುತಿರಲು ಕೆರಳಿ ॥ ೨ ॥

## ಭಾಮಿನಿ

ಅಂತಿನಾಥನು ನೀಚ ಸ್ವಾರ್ಥದೊ । ಳಿಂತು ನಿರ್ಣಯ ಗೈದ ಧೂರ್ತನ । ಪಂಥವಾಯ್ತು ಪುನಃ ಸ್ವಯಂವರ ಸಹಿಸಲೆಂತಿದನು ॥ ಅಂತರಂಗದಿ ಪತಿಯ ಕುರಿತೇ । ಚಿಂತಿಸುತ್ತಿಹ ಮಾತೆಗೀ ಗತಿ । ಬಂತಲಾ ಅಕಟಕಟ ನಾ ಬದುಕಿರ್ದು

ಫಲವೇನು ॥ ೧ ॥

**ರೇಗುಪ್ತಿ** **ರೂಪಕ**

ವ್ಯಥಿಸಿದೊಡೇನಹುದೆನ್ನಯ ಪಿತನೆಲ್ಲಿಹನೆಂಬುದನಾ । ಅತಿಜವದಲಿ ಶೋಧಿಸಿ ದುರ್ಗತಿಯಿಂದ ತಪ್ಪಿಸುವೆ । ಗುಣವಂತನು ರಣಮುಷ್ಟಿಯೊಳನುವರುಹುತ ಗುಪಿತದೊಳೀ । ಜನಪದವಗಲುವೆ ತಾನೆಂದೆನುತಲಿ ನಡೆತರಲು ॥ ೨ ॥

**ಸಾವೇರಿ** **ಆದಿ**

ತೇಜೋದತ್ತನ ಕಾಣುತ । ಯುದ್ಧಮುಷ್ಟಿ । ಸೋಜಿಗವನು ಪಡುತ ॥ ನೀ ಜವದಿಂದಿತ್ತ ನಡೆತಂದ ಪರಿಯೇನು । ರಾಜಕಾರಣದಲ್ಲಿ ತೊಂದರೆ ಬಂತೇನು ॥ ೧ ॥ ಅರಸನಿಲ್ಲದ ರಾಜ್ಯದಿ । ಆಡಳಿತ ತುಂ । ಬಿರುವುದು ಬಲುವ್ಯಾಜ್ಯದಿ । ಧರೆಯನೆಲ್ಲವ ಸುತ್ತಿ ಹುಡುಕುವೆ ಪಿತನನು । ಪರಿಯ ನಿನ್ನೊಳು ಪೇಳಲೆಂದು ಬಂದಿರುವೆನು ॥ ೨ ॥ ಮಗನಮಾತನು ಕೇಳುತ । ಉಲ್ಲಾಸದತ್ತ । ಹಗರಣವಾಯ್ತೆನುತ ॥ ಬಗೆಯನರುಹದೀಗ ಗುಪಿತದೊಳಿರ್ದರೆ । ಅಗಲಿ ಪೋದರೆ ಈತ ಮರಳಿ ಸಿಗನು ಕೈಗೆ ॥ ೩ ॥

**ಪೂರ್ವಿ** **ಝಂಪೆ**

ಬಾಲಕನೆ ನೀ ನೀ ವಿಶಾಲ ಭೂಮಂಡಲವ । ಜಾಲಾಡಿ ಪಿತನ ಹುಡುಕುವೆಯ ॥ ಕಾಲುವೆಯೆ ಶರಧಿ ದ್ವೀಪಾಂತರಗಳೆಷ್ಟಿಹವು । ಆಲೋಚಿಸದೆ ದುಡುಕಬೇಡ ॥ ೧ ॥ ನೋಡಿದರೆ ತಿರುಕ ಮಾತಾಡಿದರೆ ವಿಭುಧ ನಾ । ಡಾಡಿಯಲ್ಲಿವನೆನುತ ತಿಳಿದು ॥ ಗಾಢ ಬಂಧುತ್ವದಾಕರ್ಷಣೆಗೆ ಸಿಲುಕಿ ತಾ । ನೋಡಿ ಬಂದೀಕ್ಷಿಸಿದ ನೊಲಿದು ॥ ೨ ॥ ಒತ್ತರಿಸಿ ತಳಮಳದಿ ಪುತ್ರನನು ಬಿಗಿದಪ್ಪೆ । ಆತ್ಮೀಯತೆಯ ಮಿಲನವಾಯ್ತು ॥ ಅತ್ಯಂತ ತೊಡಕಿನಲಿ ಸತ್ಯವನು ಮರೆಗೈದ । ಗುಪ್ತವಾಸವು ಪ್ರಕಟವಾಯ್ತು ॥ ೩ ॥

**( ಉಲ್ಲಾಸದತ್ತ ತನ್ನ ನಿಜವನ್ನೂ ಹೀಗಿರುವುದಕ್ಕೆ ಕಾರಣವನ್ನು ಹೇಳಿದ ನಂತರ )**

## ನೀಲಾಂಬರಿ ಏಕ

ಏನಂಬೆನಯ್ಯೋ ಜನಕ । ಆ ಸಭೆಯ ತೀ । ರ್ಮಾನದೊಳಿಹ ತೊಡಕ ॥ ಮಾನಭಂಗವ ಗೈದರೂ । ಕುಲಗೌರವ । ಹಾನಿ ಗೈದರೂ ಖೂಳರು ॥ ೧ ॥ ಮಗನೆ ನೀ ಧೈರ್ಯ ತಾಳು । ಅಲೇಶಸಿಂಹ । ಸುಗುಣಿ ಸುಜ್ಞಾನಿ ಕೇಳು ॥ ಮಿಗಿಲು ತಂತ್ರದಿ ದುಷ್ಟನ । ದಂಡಿಸುವೊಡೀ । ಬಗೆಯ ಪೇಳಿರ್ಪ ಜಾಣ ॥ ೨ ॥ ಕೋಮಲೆ ಪದ್ಮರೇಖೆ । ಏನ್ ಗೈವಳು । ಕ್ಷೇಮದೊಳಿಹಳೇ ನಾಕೆ ॥ ಭಾಮೆ ಸ್ವಯಂವರಕೆ । ತಾನೊಪ್ಪಲಿ । ನೇಮವು ಗುರಿಗಾರಿಕೆ ॥ ೩ ॥

## ಕಂದಪದ್ಯ

ಜನಕನ ನುಡಿಯನು ಮಾನಿಸಿ । ಘನಜವದಿಂದವನೈತಂದವ್ವೆಯ ಬಳಿಯೊಳ್ ॥ ಕನಿಕರದಿಂ ನೋಡುತಲಿರೆ । ಅನುವರಿಯದೆ ಪರಿಯೇನೆನುತಲಿ ಬೆಸಗೊಂಡಳ್ ॥ ೧ ॥

## ಮಾಯಾಮಾಳವ ಗೌಳ ರೂಪಕ

ಬಾರೊ ತೇಜೋದತ್ತ ಆತಂಕದಲಿ ಬಂದ ಕಾರಣವೇನು ಕುಮಾರ ॥ ಊರೊಳೇನಾಯ್ತು ಆಡಳಿತ ಸಮಸ್ಯೆಯೊ ಧೀರ ಪೇಳೆನು ವಿಚಾರ ॥ ೧ ॥ ಅಮ್ಮ ಕೇಳೊಂದು ನಿರ್ಣಯಕಾಗಿ ನಿನ್ನಯ ಸಮ್ಮತಿ ಬೇಕೆನಗೀಗ ॥ ಧರ್ಮಾಧರ್ಮಗಳ ಚರ್ಚೆಯು ಬೇಡ ರಾಜ್ಯದ ನೆಮ್ಮದಿಗಿದು ಶುಭ ಯೋಗ ॥ ೨ ॥ ಈ ಗೃಹೀಕರ ಬಾಳಹಿತ ಸಂವಿಧಾನಕೆ ಆಗ್ರಹವೆನಗೇಕೆ ಮಗನೆ ॥ ಶೀಘ್ರದೊಳೊರೆ ಎನ್ನಿಂದೇನಾಗಬೇಕೆಂದು ಸಾಗಲಿ ನಮ್ಮ ಸಂಘಟನೆ ॥ ೩ ॥ ದೊರೆತನಕುತ್ತರದಾಯಿತ್ವ ನಿನ್ನಿಂದ ದೊರೆಯ ಬೇಕವ್ವ ನೀನೊಲಿದು ॥ ಭರದಿ ಪುನಃ ಸ್ವಯಂವರಕೊಪ್ಪಿ ರಾಜ್ಯಕೆ ನೆರವಾಗು ದುಗುಡವ ಕಳೆದು ॥ ೪ ॥

## ವಾರ್ಧಿಕ

ಹರಿತವಾಗಿಹ ಖಡ್ಗದಿಂದ ಕೊರಳರಿಯದೀ । ಬಿರುನುಡಿಯೊಳಿರಿದು ಕಗ್ಗೊಲೆ

ಗೈವೆಯೇಕೆ ನೀ । ತರಳನಾದುದಕೆ ಸಾರ್ಥಕವಾಯ್ತು ಹೆತ್ತೊಡಲ ಮಾರಿ ನೆಮ್ಮದಿ ಪಡೆವೆಯ ॥ ಹರಣದೊಲ್ಲಭನಗಲಿ ಪೋದರೂ ಬದುಕಿರುವೆ । ಭರಿತ ದುರ್ಭಾಗ್ಯೆ ನಾನೆನ್ನ ಮಾಂಗಲ್ಯವನೆ । ಪರಿ ಪರಿಯೊಳೊಡ್ಡಿ ಜೂಜಾಡಿ ನೀವ್ ಕುಣಿದಾಡಿ ಸ್ಥಿರಗೊಳಿಸುವಿರೆ ಪದವಿಯ ॥ ೧ ॥

**ನಾಟಿಕುರಂಜಿ** **ಏಕ**

ಅಂತಿನಾಥನ ದುರಿತ ಕರ್ಮಕಾಂಡದಲಿ । ಅಂತಿಮಾಧ್ಯಾಯವೀ ಘಟನೆಯಾಗಿರಲಿ ॥ ತಂತ್ರವಿದವ್ವ ನೀನೊಪ್ಪಲೇಬೇಕು । ಚಿಂತೆಯ ಒರೆಗೆ ಚಿನ್ನವು ನಿನ್ನ ಬದುಕು ॥ ೧ ॥ ಮಾತೆಯಾತಂಕವ ಶಮಿಸಿ ಸಂತೈಸಿ । ಧೂರ್ತನ ಕಂಡೀ ಸಂಗತಿಯನು ತಿಳಿಸೆ ॥ ಆತುರದೊಳು ಚೈತ್ರ ಪೂರ್ಣಿಮೆ ದಿವಸ । ನೂತನ ಪರಿಣಯವೆಂದವ ಸಾರ್ದ ॥ ೨ ॥

**(ಅಲೇಶಸಿಂಹನು ಅರಮನೆಯಲ್ಲಿ ಅಂತಿನಾಥನನ್ನು ಸಂದರ್ಶಿಸಿ )**

**ಮಧುಮಾಧವಿ** **ತ್ರಿವುಡೆ**

ಪುರದೊಳಿರುವ ವಿಶೇಷಗಳ ನಾ । ವರಿತೆವತಿ ಸಂತೋಷವಾಯಿತು । ಗಿರಿಝರಿಗಳಿಹ ಕಾಡಿನಂದವ । ಪರಿಕಿಸುವ ಮನವಾದುದು । ಪೋಗಲೇನು ॥ ೧ ॥ ನಗರದಿಂದತಿ ದೂರ ಕಾಡಿನೊ । ಳಿರುವುದೈ ಉದಯಾದ್ರಿ ಸುಂದರ । ಮೆರೆವುದಲ್ಲಿ ಮಹೋಷ್ಣಜಲಪು । ಷ್ಕರಣಿ ಬಹಳಚ್ಚರಿಯದು । ಪರಿಕಿಸುವುದು ॥ ೨ ॥ ಭರಿತಗೊಂಡಾರಣ್ಯ ಸಿಂಹಗ । ಳಿರುವ ನಾಗರ ಕಾಡನೋಳ್ಪಿರೆ । ತೆರಳಲನುಕೂಲಗಳನೊದಗಿಪೆ । ಪೊರಡೆ ನೀವಣಿಯಾಗಿರಿ । ಮುದದೊಳಿಂತು ॥ ೩ ॥ ಅತಿಥಿ ಅಭ್ಯಾಗತರ ಸಾದರ । ಮತಿಯೊಳಗೆ ಸತ್ಕರಿಸುವಂದವ । ಕಥಿಸಲಾರೆನು ನಿನ್ನ ಪೋಲ್ವರು । ಕ್ಷಿತಿಯೊಳಿಲ್ಲೈ ಪರಿಕಿಸಿ । ಹರುಷವಾಯ್ತು ॥ ೪ ॥

**( ಅಲೇಶಸಿಂಹನ ನಿರ್ಗಮನ, ಶಕುನಿಯ ಆಗಮನ. )**

## ಯರಕಲ ಕಾಂಬೋಧಿ ಆದಿ

ಶಕುನಿ ನೀ ಬಾರೊ ಮೋಹದ ಗೆಳೆಯ । ನಿನ್ನ । ಯುಕುತಿಯಿಂದಲಿ ಕಂಡೆ ಸಿರಿ ಕಳೆಯ ॥ ಸುಕುಮಾರಿ ನಾನಿಕೆ ಸುಂದರಾಂಗಿ । ಅವಳ । ನಿಕಟ ಸಂಪರ್ಕಕೆಲ್ಲಿದೆ ದಾರಿ ॥ ೧ ॥ ಆ ಕನ್ಯೆ ನಿನ್ನ ಕೈಯೊಳೆ ಇಹಳು । ಬರಿ । ದೇಕೆ ಯೋಚಿಪೆ ಬೇಗ ವಶವಹಳು ॥ ಜೋಕೆಯಿಂದವಳ ಮಾತಾಡಿಸುತ । ಕೂಡ । ಬೇಕು ಕುತಂತ್ರವ ಯೋಜಿಸುತ ॥ ೨ ॥ ಪೋಗಿಹಳವಳು ಪ್ರಯಾಣಕೆ । ನಾನು । ಪೋಗುವೆನಲ್ಲಿ ಸಂಧಾನಕೇ ॥ ಹೇಗಾದರಾ ನೃಪಜಾತನ । ಇಲ್ಲ । ವಾಗಿಸಿದರೆ ಈ ಸಿಂಹಾ ಸನ ॥ ೩ ॥

**( ನಿರ್ಗಮನ. ಸಖಿಯರೊಂದಿಗೆ ನಾನಿಕೆಯ ವನಾಗಮನ )**

## ಹಿಂದೋಳ ಏಕ

ಬಂದಳು ನಾನಿಕೆ ಬಲುಶೃಂಗಾರದಿ ಘನವಯ್ಯಾರದಿ ವನವಿಹಾರದಿ । ಚಲುವೆ ॥ ಕಂಧರವನಲುಗಿಸುತ್ತ ನಿಂದು ನೋಡಿ ಸುತ್ತಮುತ್ತ । ಸುಂದರ ಹೂವುಗಳ ಕಂಡು ತಂದು ಮುಡಿಯಬೇಕು ಎಂದು ॥ ೧ ॥ ಗರಿಬಿಡಿಸಿ ಕುಣಿವ ನವಿಲ ನೋಡುತ ಸರಸವಾಡುತ ನಾಟ್ಯಮಾಡುತ । ನಗುತ ॥ ಹರಿವ ತೊರೆಯ ಝರಿಯ ಪರಿಯು । ಪರಿಕಿಸುತಚ್ಚರಿಯು ಪಡುತ । ಭರಿತ ಶೋಭೆಯಿಂದ ಮೆರೆವ । ಪರಿಸರವಿದಹಹಾ ಎನುತ ॥ ೨ ॥

## ದೇವಗಾಂಧಾರಿ ಏಕ

ಬಿಸಿನೀರ ಪುಷ್ಕರಣಿಯ ನೋಡಿ ಹಿಗ್ಗುತ । ಕುಸುಮಾಕ್ಷಿ ಸಖಿಯರ ಕರೆದು ॥ ಕುಶಲದಿ ಜಲಕೇಳಿಯಾಡುವ ನಾವೆಂದು । ಶಶಿವದನೆಯು ಪೇಳ್ದ ಳೊಲಿದು ॥ ೧ ॥

## ಕಮಾಚ್ ರೂಪಕ

ಜಲಕೇಳಿಯ ನಾಡಿದವರುಲ್ಲಾಸದಿ ॥ ಪ ॥ ಅಲೆಗಳೊಳಲೆಯುತ ನಲಿಯುತ ।

ಸಲಿಲವ ನಳೆಯುತ ಸುಳಿಯುತ ॥ ಅ. ಪ. ॥ ಥಲದಿ ಮುಳುಗುತ ಘಳಿಲ ನೇಳುತ । ನಲಿದು ಈಜುತ ಜಲದಿ ತೇಲುತ ॥ ಝಳಪಿಸಿ ನೀರನ್ನೆರಚುತ ಮುಳಿಸಿನಿಂದಲೆಚ್ಚಾಡುತ । ಸುಳಿಗಳ ಸಳಪಳ ಸದ್ದಿಗೆ ಕಿಲಿಕಿಲಿ ಕಲರವ ಸೇರಿಸಿ ॥ ೧ ॥

**ಭಾಮಿನಿ**

ನಾರಿಯರನೊಡಗೊಂಡು ನಾನಿಕೆ । ವಾರಿ ಕೇಳಿಯ ಮುಗಿಸಿ ಬರುತಿರೆ । ಚಾರನೋರ್ವನಲೇಶಸಿಂಹನಿಗೆರಗುತಿಂತೆಂದ ॥ ೧ ॥

**ನಾದನಾಮಕ್ರಿಯೆ** **ಅಷ್ಟ**

ಕೇಳಬೇಕು ನೀವೆಲ್ಲರು ಏಳಬೇಕು ॥ ಪ ॥ ಪೇಳಲೇನಮಿತ ವಿಸ್ಮಯದ ವಲ್ಮೀಕವು । ಹಾಳಡವಿಯೊಳಿದೆ ಚಿತ್ರತರದ ಮುಖ । ವೇಳುವುದಾ ಹುತ್ತದಿ । ನಿಸರ್ಗದ । ಲೀಲೆಯರಿಯೆ ಜವದಿ । ನೀವ್ ನೋಡಿರಿ । ಆಲದ ಮರದಡಿಯಿಹುದು ವಿಚಿತ್ರದಿ ॥ ೧ ॥

**ಶಂಕರಾಭರಣ** **ಮಟ್ಟೆ**

ಸೃಷ್ಟಿಯದ್ಭುತವನು ನೋಡಲಿಷ್ಟ ತಮಗೆ ತಮಗೆನುತ್ತ । ತಟ್ಟನವರು ಬಂದರು ಘೋರಡವಿ ಮಧ್ಯಕೆ ॥ ೧ ॥ ಮೂಡಿ ವಿವಿಧ ಮುಖಗಳಲ್ಲಿ ರೂಢಿಗುರುಳಿ ಬಿದ್ದ ಬಗೆಯ । ನೋಡುತಿರ್ದರಿವರಚ್ಚರಿಯ ತಾಳಿ ವನದಲಿ ॥ ೨ ॥

**ಮಾರವಿ** **ಏಕ**

ಕರ್ಬುರನಾಗಿಹ ದೀರ್ಘಬಾಹು ಬಲು । ಬೊಬ್ಬೆಯೊಳ್ಮೈ ತಂದು ॥ ನಿಬ್ಬೆರಗಾಗುತ ನೋಡಿದನಿವರನು । ಹಬ್ಬವು ತನಗೆಂದು ॥ ೧ ॥ ಸಿಕ್ಕಿತು ತನಗಾಹಾರವೆನುತ ಬಲು । ಸೊಕ್ಕಿನೊಳಾ ಖಳನು ॥ ತಿಕ್ಕಿ ತಿಂಬೆನುತಲಿ ಬರೆ ಮುಂದಕೆ । ರಕ್ಕಸನನು ಕಂಡು ॥ ೨ ॥ ಬೆದರುತ ಓಡಲು ದಿಕ್ಕುದೆಸೆಯ ಮರೆ, । ತೆದೆಗೆಡುತೆಲ್ಲವರು ॥

ಹದನವ ನರಿಯದೆ ನಾನಿಕೆ ವೃಕ್ಷದ । ಬದಿಯೊಳಗಡಗಿರಲು ॥ ೩ ॥ ಎಳೆಗರುವಿನ ಬಳಿ ಜಿಗಿದಾರ್ಭಟಿಸುವ । ಹುಲಿಯಂದದಿದೈತ್ಯ ॥ ಕಳವಳಿಸುವ ನಾನಿಕೆಯನು ತಾಪಿಡಿ । ದೆಳೆದನು ಗರ್ಜಿಸುತ ॥ ೪ ॥

**ಹಂಸಾನಂದಿ** **ಕೋರೆ**

ಕೆಟ್ಟೆನಯ್ಯೋ ಕ್ರೂರ ಖಳನ ಮುಷ್ಟಿಯಲ್ಲಿ ಸಿಲುಕಿ ನಾನು । ತಟ್ಟನೆನ್ನ ನುಂಗುವನೀ ಪಾಪಿಯಯ್ಯಯ್ಯೋ ॥ ೧ ॥

**ಮೋಹನ** **ಝಂಪೆ**

ಖಳನ ತೋಳಿಗೆ ಬಾಣವು । ನಾಟಲ್ಕೆ । ಮುಳಿದು ಸಡಿಲಿಸೆ ಕೈಯನು ॥ ಬಳಲಿ ಬಿದ್ದಳು ನಾನಿಕೆ । ಕರ್ಬುರನು । ಬಳಿಕ ನೋಡಿದ ಹಿಂದಕೆ ॥ ೧ ॥ ನರಗುರಿಯೆ ನೀನ್ಯಾವನು । ಬಂದಿಲ್ಲಿ । ಶರಗುರಿಯ ತೋರ್ಪೆಯೇನು ॥ ಮುರಿದು ನಿನ್ನನು ಮುಕ್ಕುತ । ಬಳಿಕಿವಳ । ಹರಿದು ತಿನ್ನುವೆ ನೆಕ್ಕುತ ॥ ೨ ॥ ಕೊರಳಿರಲು ನುಂಗ ಬಹುದು । ಈಗದ । ನ್ನುರುಳಿಸುವೆ ಮಾರ್ಗಣೆಯೊಳು ॥ ನರರಹಂತಕನು ನೀನು । ನಿನಗೆ ನಾ । ಭರದೊಳಂತಕ ನಪ್ಪೆನು ॥ ೩ ॥ ಹಸಿವು ಹೆಚ್ಚಾದು ದೀಗ । ನಿನ್ನನಾ । ಹಿಸುಕಿ ಹಿಂಡುವೆನು ಬೇಗ ॥ ಮಿಸುಕಾಡೆ ಬಿಡೆನೆನ್ನುತ । ಬೊಬ್ಬಿರಿದು । ಅಸುರ ನುಗ್ಗಲು ಕಾಣುತ ॥ ೪ ॥ ಕರಕೆರಡು ಕೊರಳಿಗೊಂದು । ಶರ ಬಿಡಲು । ದುರುಳ ಕಡಿಯಾಗುರುಳಲು ॥ ಪರಿಕಿಸುತ ನೃಪಜಾತನು । ನಾನಿಕೆಯ । ಸರಿಸಕ್ಕೈದುತ ಕಂಡನು ॥ ೫ ॥

**ಕೇದಾರಗೌಳ** **ಅಷ್ಟ**

ಬವಳಿ ಬಂದೊರಗಿದ ಯುವತಿಯ ನೀಕ್ಷಿಸಿ । ತವಕದಿ ಜಲವ ತಂದು ॥ ಸವನಿಸಿ ಚಿಮುಕಿಸಿ ಗಾಳಿಯ ಬೀಸಲು । ಬೆವರಿ ಮೈಮುರಿದೆದ್ದಳು ॥ ೧ ॥ ಒಮ್ಮೆ ಕಣ್ದೆರೆದು ಹಾ ಎಂದು ಬೆಚ್ಚುತ ಬಳಿ । ಕೊಮ್ಮೆ ಮುಂದೆಸೆಗೆ ನೋಡೆ ॥ ಗುಮ್ಮನಂತಿಹ ದೈತ್ಯ ಕಡಿಯಾಗಿ ಬಿದ್ದರೆ । ನೆಮ್ಮದಿಯಲಿ ತರಳೆ ॥ ೨ ॥

ಹಲವರಿಯುವ ಚಲುವೆಯ ಕಂಡು ಮನದೊಳು । ನಲಿದು ತೇಜೋದತ್ತನು ॥ ಬಳಲಿಕೆ ಕಡಿಮೆಯಾದುದೆ ಪೇಳು ವಿರಮಿಸು । ಕಳವಳ ಬೇಡೆಂದನು ॥ ೩ ॥

**ಕಾಫಿ** **ಅಷ್ಟ**

ತೇಜೋದತ್ತನನು ನೋಡಿದಳು । ಬಾಲೆ । ಸೋಜಿಗವಾಂತು ನಾಚಿದಳು ॥ ಈ ಜಾಣನಿಂದೆನ್ನ ಜೀವನವುಳಿಯಿತು । ರಾಜಪುತ್ರನ ಶೌರ್ಯ ಧೈರ್ಯಕೆ । ಈ ಜಗದೊಳೆಣೆಯಿಲ್ಲ ನಿಜವಿದು ॥ ೧ ॥ ಜೀವದಾನವನಿತ್ತೆ ಎನಗೆ । ನೀನಿ । ನ್ನಾವ ಮಾಯದಿ ಬಂದೆ ಹೀಗೆ । ಈ ವನ ವೈಚಿತ್ರ್ಯದನುಭವ ಕೈತಂದು । ಸಾವಿನನುಭವವಾಯ್ತೆನಗೆ ಮಹ । ದೇವನಾಗಿಯೆ ಬಂದು ಸಲಹಿದೆ ॥ ೨ ॥ ಅತಿಥಿಗಳನ್ನಾದರಿಪುದು । ಸುಸಂ । ಸ್ಕೃತಿಯ ಆಚರಣೆಯಾಗಿಹುದು ॥ ಪಥವಿಡಿಯುತ ನೀವೀಗಿರಿಗೆ ಬಂದುದ ಕಂಡು । ಸ್ಥಿತಿಯರಿಯಲೈತಂದು ಬಂದುಪ । ಹತಿಯ ತಪ್ಪಿಸಿ ಧನ್ಯನಾದೆನು ॥ ೩ ॥

**ಸಾವೇರಿ** **ಆದಿ**

ಈ ಸದಾಚಾರವು ನಿಮ್ಮ ದೇಶದಾಚಾರವಾಯ್ತು । ಲೇಸನೆಣಿಸಿ ಬಂದೆ ಬೆಂಬಲಕೆ । ಈ ವನದಿ ನಾನು । ಘಾಸಿಯಾಗುತಿರ್ದೆನರಕ್ಷಣಕೆ । ಈ ಬಗೆಗೆ ನಾನಿ । ನ್ವೇಸು ಪೊಗಳಿದೊಡೇನು ಫಲವಿದಕೆ । ನಿನಗೇನ ಕೊಡಲಿ । ಈ ಶರೀರವ ಮನಸಿನೊಂದಿಗೆ । ನಾ ಸಮರ್ಪಿಸಿ ಧನ್ಯಳಾಗುವೆ ॥ ೧ ॥ ಅನ್ಯಥಾ ಭಾವಿಸಬೇಡ ಎನ್ನ ಮನವು ಎನ್ನೊಳಿಲ್ಲ । ನಿನ್ನನು ನೋಡಿದ ತಕ್ಷಣ । ನಾ ಮರುಳಾಗಿರ್ಪೆ । ಕನ್ನೆ ನಿನ್ನ ಮುಖದ ಲಕ್ಷಣ । ಸೆರೆವಿಡಿದುದೆನ್ನ । ಬಿನ್ನಾಣವ ಗುರುತ್ವಾಕರ್ಷಣ । ಕರೆ ತಂದುದಿಲ್ಲಿ । ನಿನ್ನೊಲವಿನ ಹಿತ ಸನ್ನಿಧಯೊದಗಲು । ಧನ್ಯತೆ ದೊರೆವುದು ಎನ್ನ ಬದುಕಿನೊಳು ॥ ೨ ॥

**(ನಾನಿಕೆಯನ್ನು ನೆಲೆಗೆ ತಲುಪಿಸುವ ಬಗ್ಗೆ ಹೊರಡುವುದು, ಅಲೇಶಸಿಂಹ ಮಗಳನ್ನು ಕಾಣದೆ- )**

**ಪೂರ್ವಿ** **ತ್ರಿವುಡೆ**

ಮಗಳೆ ನೀನಿನ್ನೆತ್ತ ಪೋದೆ । ಬಗೆಯರಿಯೆ ನಾ ಬೇಗ ಬಾರೆ । ಸುಗುಣೆ ನೀನಾ ಖಳನ ಕೈಗೆ । ಸಿಗದೆ ಬದುಕುಳಿದಿರುವೆಯ ॥ ೧ ॥ ಯಾಕೆ ಬಂದೆವಿಥಾಕಾ ಪುರಕೆ । ಯಾಕೆ ಈ ವನ ನೋಳ್ಪ ಬಯಕೆ । ಲೋಕದೊಳು ಮುಂದೆಂತು ಬಾಳ್ವೆ । ನೀ ಖಳನ ತುತ್ತಾದೆಯ ॥ ೨ ॥

**(ಅಂತಿನಾಥ ಪ್ರವೇಶಿಸಿ )**

**ಭೈರವಿ** **ಏಕ**

ಬೆದರದಿರ್ರೈ ಭೂಪಾಲ । ನಮ । ಗೊದಗಿತು ಈ ಪ್ರತಿಕೂಲ ॥ ಮೊದಲೇ ನಾ ಬರಲಿಲ್ಲ । ದು । ರ್ವಿಧಿಯಿಂತಾಗಿಹುದಲ್ಲ ॥ ೧ ॥ ನಾನಿಕೆ ಎಲ್ಲಿಯ ಇರಲಿ । ಆ । ದಾನವನೆಳೆದೊಯ್ದಿರಲಿ ॥ ಕಾನನದೊಳಗಡಗಿರಲಿ । ತಹೆ । ನಾನವಳನು ಹುಡುಕುತಲಿ ॥ ೨ ॥

**ದ್ವಿಪದಿ**

ಇಂತು ಪಂಥವಗೈಯ್ಯುತಿರುವ ಸಮಯದೊಳು । ದಂತಿಗಾಮಿನ ಬಂದು ಪಿತಗೆ ವಂದಿಸಲು ॥ ೧ ॥ ಬಾರೆನ್ನ ಕಣ್ಮಣಿಯೆ ಬಾ ಮುದ್ದುಮಗಳೆ । ಕ್ರೂರ ಖಳನಿಗೆ ಸಿಗದೆ ಎಂತುಳಿದೆ ಪೇಳೆ ॥ ೨ ॥

**ಮಧುಮಾಧವಿ** **ಏಕ**

ಖಳಕೈಗೆ ನಾ ಸಿಲುಕಿರ್ದೆ । ತಂದೆ ಕೇಳು । ಬಾಣ । ಸೆಳೆದು ಗುರಿಯೊಳೆಸೆದ ನೋರ್ವ । ತಂದೆ ಕೇಳು ॥ ೧ ॥ ಸಿಲುಕಿ ಶರಕೆ ದೈತ್ಯನಳಿದೆ । ತಂದೆ ಕೇಳು । ವೀರ । ಫಳಿಲನಿಲ್ಲಿ ಕರೆದುತಂದ । ತಂದೆ ಕೇಳು ॥ ೨ ॥

**(ಅಂತಿನಾಥ ನಾನಿಕೆಯ ಮಾತುಕೇಳಿ ಮತ್ಸರದಿಂದ )**

**ಪಂತುವರಾಳಿ** **ಮಟ್ಟೆ**

ಬೇಡ ಬೇಡ ಬೇಡ ಬೇಡವೆ । ಆ ಹುಡುಗ ತೇಜ । ನಾಡಿಗೊಡೆಯ ನಪ್ಪುದಿಲ್ಲವೆ ॥ ಕೇಡುಗಳಿಗೆಯಲ್ಲಿ ಜನಿಸಿಕೂಡೆಪಿತನ ತೊರೆದ ಯೋಗ । ನೋಡಿ ಬಾಡಿ ಪದ್ಮರೇಖೆ ಕೂಡಿಕೆಗೊಪ್ಪಿಹಳು ಮುನಃ ॥ ೧ ॥ ಚಪಲ ಚಿತ್ತನಲ್ಲ ದಿರ್ದೊಡೆ । ವನಕೇಕೆ ಬಂದ । ಗುಪಿತದಿಂದ ನಿನ್ನ ಹಿಂಗಡೆ ॥ ಕಪಟತಂತ್ರಬಲ್ಲ ಕುವರ ನಿಪುಣ ಮಾತುಗಾರ ಇನ್ನೀ । ನೆಪದಿ ನಿನ್ನ ಮರುಳುಗೊಳಿಸಿ । ಸಫಲ ಸಿರಿಯ ಸೆಳೆಯ ಬಂದ ॥ ೨ ॥ ರತಿಯ ಧಿಕ್ಕರಿಸುವ ರೂಪಿದೆ । ನೀನಲ್ಲಪ್ಪಳಲ್ಲ । ಪಿತನು ದೊರೆ ಘನಾಂಬು ದ್ವೀಪಕೆ ॥ ಹಿತಾಹಿತವನಳೆಯದೀಗ ಕಿತಾಪತಿಯ ನೊಲಿಯಬೇಡ । ವ್ರತಾ ಕಥೆಯ ಪೇಳ್ದುದಲ್ಲ । ಯಥಾಸ್ಥಿತಿಯ ಮಾತಿದ್ಯೆಸೆ ॥ ೩ ॥

**ಭಾಮಿನಿ**

ಚಾಡಿಯಲಿ ಜನಮನವ ಕೆಡಿಸುವ । ಖೋಡಿಯಿವನೆಂದೆನುತ ನಾನಿಕೆ । ನೋಡಿ ಪಿತನನು ಪುರಕೆ ಪಯಣವಗೈವುದೆಂದೆನಲು ॥ ರಾಡಿಗಪ್ಪುದೆ ಕೆಸರು ಸಾಧನೆ । ಮಾಡಿದೆನು ತಾನೆನುತ ಹಿಗ್ಗುತ । ನಾಡಿಗವರನು ಕರೆದು ತಂದನು ಕಾಡದಾರಿ ಯೊಳು ॥ ೧ ॥

**ಭೂಪಾಳಿ** **ಝಂಪೆ**

ಚೈತ್ರ ಪೂರ್ಣಿಮೆ ಸ್ವಯಂವರದ ಘನಗುರಿಯ ವೈ । ಚಿತ್ರ್ಯ ವೀಕ್ಷಿಸಲು ಪುರ ಜನರು ॥ ಅರ್ತಿಯಿಂದೊಪ್ಪಿರಲು ಶಕುನಿ ಕಂಚುಕಿಯಂತೆ । ಬಿತ್ತರಿಸಿದನು ನಿಯಮಗಳನು ॥ ೧ ॥ ನೇರಗುರಿಗಾರಿಕೆಯ ತೀರ್ಮಾನಕಾ ಬಿಂದು । ದೂರದೊಳಗಿದೆ ಪರಿಘವಿಹುದು ॥ ದಾರದೊಳು ಪೋಣಿಸಿದ ಮುತ್ತು ತೂಗಾಡುತಿದೆ । ಹಾರಿಸಲು ಬೇಕದರ ನಿಂದು ॥ ೨ ॥ ಗೆದ್ದವರ ವರಿಸುವಳು ಪದ್ಮರೇಖೆಯು ಪುರದ । ಗದ್ದುಗೆಯು ಲಭ್ಯವಾಗುವುದು ॥ ಎದ್ದೇಳಿ ಬನ್ನಿ

ವೇದಿಕೆಗೆ ಗಜಿಬಿಜಿ ಯಾಕೆ । ಸ್ಪರ್ಧಿಗಳು ನೀವಾಗಬಹುದು ॥ ೩ ॥ ಮುಖ್ಯ ಅತಿಥಿಗಳೀ ಘನಾಂಬುದೊರೆಗಳು ನಮಗೆ । ಸಿಕ್ಕಿಹರು ಪುಣ್ಯಫಲದಿಂದ ॥ ಚೊಕ್ಕಟದಿ ಶರವಿದ್ಯೆ ಕಲಿತ ತೇಜೋದತ್ತ । ಬಿಕ್ಕಳಿಸುತಿಹ ಮಮತೆ ಯಿಂದ ॥ ೪ ॥ ದ್ವೀಪದರಸುಗಳ ದೇಶಾಧಿಪರ ಕರೆದಿರ್ದೆ । ವೀ ಪರಿಣಯಕ್ಕೆ ಬರಲಿಲ್ಲ ॥ ಈ ಪುರದ ಪಟ್ಟದಧಿಕಾರಿಗಳನಾರಿಸುವ । ಈ ಪಣಕೆ ಬನ್ನಿ ನೀವೆಲ್ಲ ॥ ೫॥

**( ಯಾರೂ ಮುಂದಾಗದಿದ್ದಾಗ ಅಂತಿನಾಥ ಎದ್ದು ಸೊಕ್ಕಿನಿಂದ )**

**ಮೇಚ್ ಗೌಳ** **ಅಷ್ಟ**

ಗುರಿಗಾರಿಕೆಗೆ ನಿಲ್ಲ ಬಲ್ಲವರಿಲ್ಲ । ಹಿರಿಮೆಯ ಗುರಿಗಾರ ನಾನೆ ಸುಳ್ಳಲ್ಲ ॥ ಪರಿಕಿಸಿರೆನ್ನ ಸಾಮರ್ಥ್ಯವ ನೆಂದು । ಅರುಹಿದನಂತಿನಾಥನು ಬಂದು ನಿಂದು ॥ ೧ ॥ ನೇರಗುರಿಯನೀಕ್ಷಿಸಿ ಶರವೆಸೆಯೆ । ಸಾರಿಪರಿಘರೇಖೆಯಂಚಿಗೆ ಬಡಿಯೆ ॥ ವೀರವಹವ್ವಾ ನೀನಿದರೊಳು ಗೆದ್ದೆ । ಬೇರಾರಿಲ್ಲವು ಸ್ಪರ್ಧಿಗಳು ನಿನ್ನಹಿಂದೆ ॥ ೨ ॥ ಎತ್ತರದೊಳಗಿಹ ಮುತ್ತ ನೀಕ್ಷಿಸುತ । ಸತ್ವದಿ ಶರವೆಸೆಯಲು ಹೂಂಕರಿಸುತ ॥ ಕತ್ತರಿಸಿತು ದಾರದಾಧಾರ ಗಳವೆ । ಸುತ್ತಲೂ ನೋಡಿ ಶಕುನಿ ಪೇಳ್ದ ಭರದಿ ॥ ೩ ॥

**ಸುರುಟಿ** **ಮಟ್ಟೆ**

ಅಂತಿನಾಥನು । ಪಣವ ಗೆದ್ದನು । ದಂತಿಗಾಮಿನಿ ಮಾಲೆ ತೊಡಿಸಲಿ ॥ ೧ ॥ ಪರಿಯ ನೋಡುತಾ ಉಲ್ಲಾಸದತ್ತನು । ಭರದಿ ವೇದಿಕೆಯೇರಿ ನಿಂತನು ॥ ೨ ॥ ತಿರುಕ ನೀನಲ ಮರುಳರಂತಿಹೇ । ಅರ್ಹನಲ್ಲವೊ ಇಳಿಯೊ ವೇದಿಕೆ ॥ ೩ ॥ ಗುರಿಯಗಾರಿಕೆಗಿಲ್ಲಿ ಮಾನ್ಯತೆ । ಸರಿದು ನಿಂತು ನೀ ನೋಡು ಯೋಗ್ಯತೆ ॥ ೪ ॥

**ಸೌರಾಷ್ಟ್ರ** **ತ್ರಿವುಡೆ**

ವಂದಿಸುತ ವರ್ತುಲದ ನಡುವಿನ । ಬಿಂದುವಿಗೆ ನಾಟಿಸಿದ ಶರವನು । ಹೊಂದಿಸಿದ ಮುತ್ತುರುಳೆ ಶರತುದಿ । ಯಿಂದ ಧರೆಗೆ ॥ ೧ ॥ ಭಳಿರೆ ಭಾಪುರೆ ಭಲರೆ ಧಿರುರೇ । ಬಲು ಗುರಿಯ ಕರ್ಣೆಗಾರ ಧೀರಾ । ಸಲೆ ಪಣವ ನೀ ಗೆದ್ದೆ ಎಂ । ದುಲಿದೇಳೆ ಜನರು ॥ ೨ ॥

**ಘಂಟಾರವ ಅಷ್ಟ**

ಏನಿದೀ ಹುಚ್ಚನನ್ನೇಕೆ ಪೊಗಳ್ವಿರಿ । ಸ್ಥಾನಮಾನಗಳಿಲ್ಲವೇ ನಿಮಗೂನ ತಂದಿರಿ ಘನತೆಗೆ ॥ ೧ ॥ ಮೊದಲೀತ ತನ್ನಯ ಪರಿಚಯ ವರುಹಲಿ । ಕದಿವ ಕಳ್ಳನೊ ಮದನ ಹರನೊ ಬುಧರು ನಿರ್ಣಯಗೈಯಲಿ ॥ ೨ ॥ ಘೋರನೆದ್ದು ಘನಾಂಬು ಭೂವರನಾಗ । ಧಾರಿಣೀಶನನಪ್ಪಿ ಸಕಲ ವಿಚಾರವನು ಸಭೆಗೆಂದನು ॥ ೩ ॥

**ಬಿಲಹರಿ** **ಅಷ್ಟ**

ಈತನೆ ಉಲ್ಲಾಸದತ್ತ । ಬಲು । ಖ್ಯಾತನು ಸುಪವಿತ್ರ ನೆನಗಿವ ಮಿತ್ರ ॥ ತೀರ್ಥಯಾತ್ರೆಯ ಮಾಡಿಬಂದು । ಬಳಿ । ಕೀತರ ತಂತ್ರವ ಮಾಡಿಹ ನಿಂದು ॥ ೧ ॥ ಪಣದಂತೆ ವರಿಸಲಿ ಸುದತಿ । ಪಟ್ಟ । ವನು ಸಂಭ್ರಮದೊಳೇರಿ ಮೆರೆಯಲಿ ನೃಪತಿ ॥ ವಿನುತ ಗೃಹೀಕರ ಕುಲದಿ । ಇವ । ನನು ಪೋಲ್ವರಿಲ್ಲ ಸಾಹಸ ಶೌರ್ಯ ಗುಣದಿ ॥ ೨ ॥ ಪದ್ಮರೇಖೆಯು ಬಂದು ಮಣಿದು । ಸಂ । ಬದ್ಧ ಕುರುಹ ನೊಂದ ಪೇಳಲಿ ವಲಿದು ॥ ಹೊದ್ದುವೆ ನಿವನ ಸಂಗವನು । ಪಣ । ಗೆದ್ದರೇನಾಯ್ತು ಸತ್ಯವ ಶೋಧಿಸುವೆನು ॥ ೩ ॥

**ಭಾಮಿನಿ**

ನಿಪುಣೆ ನಿನ್ನಯ ಬಾಹು ಮೂಲದಿ । ಗುಪಿತ ರಕ್ಷಾಸೂತ್ರ ಬಿಗಿದಿಹೆ । ಕಪಟವೋ ಪ್ರಾಮಾಣಿಕವೊ ನಿರ್ಧರಿಸು ನೀನಿದನು ॥ ಸಫಲವಾಯಿತು ಬಾಳೆನುತ ಸಂ । ತಪಿಸಿ ಕಾಂತನ ಪಾದಕೆರಗಲು । ನೃಪತಿಯಾಲಿಂಗಿಸಲು ಮನವುಮ್ಮಳದಿ

ಕಂಪಿಸಲು ॥ ೧ ॥

**ಸಾಂಗತ್ಯ** **ರೂಪಕ**

ಬಹುಕಾಲ ನಿನ್ನ ಬಳಲಿಸಿದ ಪಾಪಕೆ ನಾನೀ । ಮಹಿಯೊಳು ತಿರುಕರಂತಲೆದೆ ॥ ಅಹಿತ ದೂರಾಯಿತು ಗುಣವತಿ ನಿನ್ನಂಯು । ಸಹನೆಯು ಶುಭವ ಕಾಣಿಸಿದೆ ॥ ೧ ॥ ನೀವೆನ್ನ ಹೃದಯದೊಳಿಹಿರೆಂದು ಭಾವಿಸಿ । ನಾನಿಷ್ಟು ಕಾಲ ಬಾಳಿರ್ದೆ ॥ ಜಾಣ ತೇಜೋದತ್ತ ನಿಮ್ಮೆತ್ತರಕೆ ಬೆಳೆದ । ಕಾಣಿ ರಾತನನಾಶೀರ್ವದಿಸಿ ॥ ೨ ॥ ಹಿರಿಯನಲೇಶಸಿಂಹನು ಭಾಗ್ಯವಂತನು । ಪರಿಪೂರ್ಣ ಸಹಕಾರವಿತ್ತ ॥ ತರಳ ತೇಜೋದತ್ತನಿಗೆ ನಾನಿಕೆಯ ತರುವ । ಪರಿಯೊಳಾಗಿದೆ ನಿಶ್ಚಿತಾರ್ಥ ॥ ೩ ॥

**ಭೂಪಾಳಿ** **ಏಕ**

ಯುದ್ಧಮುಷ್ಟಿಯನು ಮನ್ನಿಸಿ ಬಳಿಕಾ । ವಿದ್ರೋಹಿಗಳನು ಶಿಕ್ಷಿಸುತ ॥ ಹೊದ್ದಿ ಪಟ್ಟದ ಸಮಾಜ ವಿಕಾಸದ । ವೃದ್ಧಿಯ ಯೋಜನೆ ರೂಪಿಸುತ ॥ ೧ ॥ ಘನಾಂಬುರಾಜನ ಕುಮಾರಿ ನಾನಿಕೆ ತೇಜೋದತ್ತನ ವರಿಸಿದಳು ॥ ವಿನೋದ ವೈವಾಹೋತ್ಸವದಲಿ ಜನಶುಭ ಮಂಗಳವನು ಹಾಡಿದರು ॥ ೨ ॥

**ವಾರ್ಧಿಕ**

ಚಾರುಕವಿ ಹೋಮರನ ಓಡಿಸ್ಸಿ ಇಲಿಯಡ್ ಗ । ಳ್ಸಾರವಂ ಸಂಗ್ರಹಿಸಿ ಧೋರಣೆಯನನು ಸರಿಸಿ । ಭಾರತೀಯರ ಕಥಾಕಲ್ಪನೆಯ ನೆರವಿನಿಂ ಹೆಸರುಗಳ ಬದಲಿಸುತ ॥ ಓರಂತೆ ಉಲ್ಲಾಸದತ್ತ ಚಾರಿತ್ರ್ಯವಂ । ಸಾರಿದವರಾ ಬಾಲಚಂದ್ರ ಕರ್ಣಿಕರ್‍ರೈಸೆ । ಮೂರುಹಂತದೊಳು ಸಾಹಿತ್ಯ ವಿವರಂಗಳಂ ಪೂರೈಸಿದರು ಶ್ರಮದಲಿ ॥ ೧ ॥

**ಭಾಮಿನಿ**

ಮೊದಲ ಭಾಗ ತ್ರಯಾದ್ರಿ ವಿಜಯವು । ಒದಗಿ ದ್ವೀಪಾಂತರವ ಚರಿಸುವ । ಹದನವೆರಡನೆ ಭಾಗವಾಯಿತು ದ್ವೀಪದಿಗ್ವಿಜಯ ॥ ಅದರಮೇಲ್ ಸಾಮ್ರಾಜ್ಯ ವಿಜಯದಿ । ತುದಿಗೊಳಿಸಿದೆನು ಯಕ್ಷಗಾನದಿ । ವಿದಿತ ವಿನಯದಿ ಗ್ರೀಕ ಕವಿಗೀಕೃತಿಯನರ್ಪಿಸುವೆ ॥ ೧ ॥

**ಬಿಲಹರಿ** — **ಏಕ**

ಮಂಗಳ ಗಾನವಿನೋದಿನಿಗೆ । ಮಂಗಳ ಜ್ಞಾನ ಪ್ರದಾಯಿನಿಗೆ । ಮಂಗಳ ವಿಶಭರಸುವಿಲಾಸಗೆ । ಮಂಗಳ ನಿತ್ಯಾನಂದ ಸ್ವರೂಪಗೆ । ಮಂಗಳವನು ಬಯಸುತ ಶುಭರಂಜಕ । ಮಂಗಳಾರತಿಯ ಬೆಳಗಿರೆ ॥ ೧ ॥

**॥ ಮಂಗಳಂ ॥**

ಉಲ್ಲಾಸದತ್ತ ವಿಜಯಕ್ಕೆ ಮಂಗಳಮಸ್ತು

ಮಂಜುನಾಥ ಭಾಗವತ ಹೊಸ್ತೋಟ

ಶ್ರಾವಣಮಾಸ ೧೬/೮/೧೯೯೬ ರಿಂದ ೨೭/೮/೧೯೯೬ ರ ವರೆಗೆ

ಯಕ್ಷಗಾನ ಪ್ರಸಂಗ

# ಅಕ್ಷರ ಸಾಕ್ಷಾತ್ಕಾರ

ಪಾತ್ರಗಳು:

* ವಿನಯಾದಿತ್ಯ * ಕ್ಷೇಮಶೇಖರ * ಹೇಮಶೆಟ್ಟಿ * ಈರಗೌಡ
* ರಾಜದೂತ * ಪುರೋಹಿತ * ವಿದ್ಯಾವತಿ

## ಭಾಮಿನಿ

ಅಕ್ಷಯಾಕ್ಷರ ಬಿಂದುರೇಖಾ । ಲಕ್ಷಣಾನ್ವಿತೆ ನಾದ ಸಂಯುತೆ । ರಕ್ಷಿಸೆಮ್ಮ ಸರಸ್ವತಿಯೆ ವಿದ್ಯಾ ವಿಶಾರದೆಯೆ ॥ ಪಕ್ಷಪಂಗಡವಿರದ ಪ್ರಗತಿಯ । ವೀಕ್ಷಣೆಗೆ ಮನತಂದು ವರ್ಣಿಪೆ । ಯಕ್ಷಗಾನದಿ ಸಾಕ್ಷರತೆಯ ಮಹತ್ವ ಸಂಸ್ಕೃತಿಯ ॥

## ರಾಗ : ಕಾಂಭೋದಿ – ತಾಳ : ಝಂಪೆ

ಕುಂತಳಾಧಿಪ ಸುಗುಣವಂತ ವಿನಯಾದಿತ್ಯ । ಮಂತ್ರಿ ಸುಕ್ಷೇಮಶೇಖರ ನೊಳಿಂತೆಂದು ॥ ಸಂತಸಕೆ ಸುವಿವೇಕ ಸಾಂಗತ್ಯ ಬೇಕು ಜನ । ತಿಂಥಿಣಿಯ ಹಿತಕೆ ಯೋಜಿಸು ಕಾರ್ಯಬಂಧ ॥

ವಿನಯಾದಿತ್ಯ :– ಓ ಕ್ಷೇಮಶೇಖರಾ, ಈ ಕುಂತಳ ನಾಡು ಸಂಪತ್ತಿನ ತವರುಮನೆಯಾಗಿದೆ. ಜನ ಸಂತೋಷದಿಂದ ಕಾಲಕಳೆಯುತ್ತಿದ್ದಾರೆ. ಬದುಕಿಗೆ

ಅಗತ್ಯವಾದ ಭೋಗಭಾಗ್ಯಗಳೆಲ್ಲಾ ಇವೆ. ಅಡಳಿತ ಚೆನ್ನಾಗಿ ಸಾಗುತ್ತಿದೆ. ನಮ್ಮ ಅಧಿಕಾರಕ್ಷೇತ್ರಕ್ಕೆ ಸಂಬಂಧಪಟ್ಟ ಸುಧಾರಣೆಗಳೇನಾಗಬೇಕು. ಆ ಬಗ್ಗೆ ಸುಧೋರಣೆಯುಳ್ಳ ನೀನು ಹೇಳಬೇಕು.

ಕ್ಷೇಮಶೇಖರ :– ಮಹಾರಾಜಾ, ಪ್ರಜಾಪಾಲಕನಾದವನಿಗೆ ವಿಶೇಷ ಹೊಣೆಗಾರಿಕೆಯಿರುತ್ತದೆ. ಮಗುವನ್ನು ಮನುಷ್ಯನಾಗಿ ರೂಪಿಸುವಾಗ ತಂದೆ ತಾಯಿಗಳು ಹೇಗೆ ಪರಿಶ್ರಮಿಸುತ್ತಾರೋ ಅದಕ್ಕೂ ಮಿಗಿಲಾಗಿ ಅರಸರಾದವರು ಆಲೋಚಿಸಬೇಕಾಗುತ್ತದೆ. ನಮ್ಮ ಕುಂತಲ ಪ್ರದೇಶ ಅಗ್ರಸ್ಥಾನದಲ್ಲಿ ಇದೆ. ಶಿರೋಭಾಗಕ್ಕೆ ಕುಂತಲ ಪ್ರದೇಶವೆಂದು ಕರೆಯುತ್ತಾರೆ. ಕೂದಲು ಬೆಳೆಸುವುದಕ್ಕಷ್ಟೇ ತಲೆಯ ಉಪಯೋಗವಲ್ಲವಲ್ಲ.

ವಿನಯಾದಿತ್ಯ :– ಬುದ್ಧಿಯೂ ಬೆಳೆಯ ಬೇಕು. ಬುದ್ಧಿ ಇದ್ದವನಿಗೇ ತಲೆ ಇದ್ದವನು ಅಂತ ನಾವು ಹೇಳೋದು. ನಿನ್ನ ಮಾತಿನ ಮತಿತಾರ್ಥ ತಿಳಿದು ನಾನು ಮನಸ್ಸಿನಲ್ಲಿ ಅನುಮಾನಿಸುತ್ತಾ ಇದ್ದೇನೆ. ಮಂತ್ರೀ, ನಾಡಿನ ಜನರ ಸುಖ ಸಮಾಧಾನಗಳಿಗೆ ಸಂಬಂಧಿಸಿದ ಸೂಚನೆಗಳೇನಾದರೂ ಇದ್ದರೆ ತಿಳಿಸು. ಯೋಚನೆ ಮಾಡಿ ಯೋಜನೆ ರೂಪಿಸೋಣ.

ಕ್ಷೇಮಶೇಖರ :– "ಸು' ಎಂದೊಡನೆ ರಾಗವನ್ನು ಗುರುತಿಸುವ ಚಾಣಾಕ್ಷಮತಿ ನಿಮ್ಮದು ಪ್ರಭೂ.

### ರಾಗ : ಕಾನಡಾ –ತಾಳ : ತ್ರಿವುಡೆ

ಸಿರಿಯಿರ್ದೊಡೇನು ಸಾಹಸವಿರ್ದೊಡೇನು । ಅರಿವಿನ ಸಾಮರಸ್ಯವು ಬೇಡವೇನು? ॥ ಕೊರತೆಯಾಂತಿಹರನಕ್ಷರತೆಯಿಂ ಜನರು । ಬರೆಹ ಓದುಗಳಿಂದ ಮುದಗೊಳಲವರು ॥

ಕ್ಷೇಮಶೇಖರ :– ಆರ್ಥಿಕವಾಗಿ ನಮಗೆ ತೊಂದರೆಯಿಲ್ಲ. ಆರೋಗ್ಯಕ್ಕೆ ಸಂಬಂಧಿಸಿ

ಆಕ್ಷೇಪ ಎತ್ತುವಂತಿಲ್ಲ. ಊಟ-ಉಣಿಸಿಗೆ ಬೇಕಾದ ಧವಸ- ಧಾನ್ಯಗಳಿವೆ. ಉಡುಗೆ-ತೊಡುಗೆಗೆ ಬೇಕಾದ ವಸ್ತ್ರಾಭರಣಗಳಿವೆ. ಇಷ್ಟಾದರೆ ಸಾಕೇ? ಇನ್ನೇನಾದರೂ ಬೇಕೇ ? ಅಂತ ಆಲೋಚಿಸಿದಾಗ ಒಂದು ಕೊರತೆ ಎದ್ದು ಕಾಣುತ್ತದೆ.

ವಿನಯಾದಿತ್ಯ :- ಬದುಕಿನ ಬಹಿರಂಗದ ಬೆಡಗನ್ನು ನೋಡಿ ಮರುಳಾಗುವವ ನೀನಲ್ಲ. ಅಂತರಂಗ ಸಮೀಕ್ಷೆ ನಡೆಸಿ ಕೊರತೆಯನ್ನು ಗುರುತಿಸಿದ್ದೀಯೆ ಅಂತಾಯ್ತು. ಯಾವುದು ಅದು ನಮ್ಮ ಗಮನಕ್ಕೆ ಬರಲಿಲ್ಲವಲ್ಲ.

ಕ್ಷೇಮಶೇಖರ :- ಅಲ್ಲಲ್ಲಿ ಅಲ್ಲಲ್ಲಿ ಜನರ ಅಸಮಾಧಾನ ಅಸಮಾನತೆಗಳಿಗೆ ಮುಖ್ಯ ಕಾರಣ-ಅನಕ್ಷರತೆ. ಅದೊಂದು ಮಹಾರೋಗ ಮಹಾರಾಜಾ. ತಿಳುವಳಿಕೆಯ ಬೆಳವಣಿಗೆಗೆ ಬೇಕಾದ ಓದು ಬರಹಗಳಿಲ್ಲದೆ ಬಹುಜನ ಸಂಕಟಪಡುತ್ತಿದ್ದಾರೆ.

ವಿನಯಾದಿತ್ಯ:- ಸರಿ ಸರಿ ವಿದ್ಯೆಯಿಲ್ಲದವನು ಹದ್ದಿಗಿಂತ ಕಡೆ. ಅಕ್ಷರ ವಿದ್ಯೆಯ ಅರಿವನ್ನೇ ನೀಡದೆ ನಾವು ರಕ್ಷಣಾಕಾರ್ಯ ನಿರ್ವಹಿಸುತ್ತಿದ್ದೇವೆ. ಅನುಭವದ ವಿಸ್ತಾರಕ್ಕೆ ಅವಕಾಶವಿಲ್ಲದೆ ಅದೆಷ್ಟೋ ಜನ ನಿರಕ್ಷರಕುಕ್ಷಿಗಳಾಗಿ ಬಳಲುತ್ತಿದ್ದಾರೆ ತೊಳಲುತ್ತಿದ್ದಾರೆ. ಈ ಕುರಿತು ಆಲೋಚಿಸಬೇಕಾದ ಅಗತ್ಯವಿದೆ.

ಕ್ಷೇಮಶೇಖರ :- ದೈಹಿಕ ಶ್ರಮದಿಂದ ದುಡಿಯುತ್ತಾರೆ. ಪಾರಂಪರಿಕ ಬದುಕಿಗೆ ಹೊಂದಿ ಹೆಣಗುತ್ತಾರೆ, ಹೆಣವಾಗುತ್ತಾರೆ. ಸೂಕ್ತ ತಿಳುವಳಿಕೆಯಿಲ್ಲದವರ ಬಾಳು ಮೃಗ-ಪಕ್ಷಿಗಳ ಬಾಳಿಗಿಂತಲೂ ಕೀಳಾಗುತ್ತದೆ. ಆನೆಯಂತಹ ಬಲಿಷ್ಠ ಪ್ರಾಣಿಯನ್ನು ಪಳಗಿಸಿ ನಾವು ದುಡಿಸಿಕೊಳ್ಳುತ್ತೇವೆ. ಗಿಣಿಯಂತ ಪಕ್ಷಿಗೂ ಮಾತುಕಲಿಸಿ ಮನೋರಂಜನೆ ಪಡೆಯುತ್ತೇವೆ. ನಮ್ಮ ಸುತ್ತಲಿನ ಜನಸಾಮಾನ್ಯರನ್ನು ಮಾನವರನ್ನಾಗಿಸುವ ಬಗ್ಗೆ ಪ್ರಯತ್ನಿಸಬೇಡವೇ ಪ್ರಭೂ.

ವಿನಯಾದಿತ್ಯ :- ಆಳವಾಗಿ ಚಿಂತಿಸಿ ಅನುಕಂಪವುಳ್ಳ ಧ್ವನಿಯಲ್ಲಿ ವಿಷಯವನ್ನು ಸೂಚಿಸಿದ್ದೀಯೆ. ಬರೆಹ ಬಲ್ಲವರು ಬರೆಯಲು ಬಾರದವರನ್ನು ವಂಚಿಸುತ್ತಾರೆ.

ಎಲ್ಲಾ ಅವರವರ ಹಣೆಯ ಬರೆಹ ಅಂತಹೇಳಿ ಸ್ವಾರ್ಥಸಾಧಿಸಿಕೊಳ್ಳುತ್ತಾರೆ. ಈ ಬಗ್ಗೆ ನಾವು ಸೂಕ್ತಕ್ರಮ ತೆಗೆದುಕೊಳ್ಳಬೇಕು. ಕಟ್ಟಳೆಯ ಭಯದಿಂದ ಶಿಸ್ತು-ಸಂಯಮಗಳನ್ನು ರೂಢಿಸಿಕೊಂಡ ನಮ್ಮ ಪ್ರಜೆಗಳನ್ನು ಅಕ್ಷರಸ್ಥರನ್ನಾಗಿಸುವ ಬಗ್ಗೆ ಕಾರ್ಯ ಪ್ರವೃತ್ತರಾಗೋಣ.

## ಸಾಂಗತ್ಯ – ರೂಪಕ ತಾಳ

**ಕಿನಿಸಿನಿಂದೀರ ಗೌಡನ ಕಂಡು ಪೇಳಿದ । ವಣಿಕನಾಗಿಹ ಹೇಮಶ್ರೇಷ್ಠಿ ॥ ಹಣದ ಬಡ್ಡಿಯನಾಯದಣಕ ಗೈಯ್ಯುವೆಯೇನು ॥ ಮನೆಮಾರನೆನಗಡವಿಟ್ಟೆ ॥**

ಹೇಮಶೆಟ್ಟಿ :– ಏ ಈರಗೌಡ ನಿಲ್ಲು. ಮಗಳ ಮದವೀ ಅಂತ ನೀನು ಸಾಲ ಕೇಳ್ದಿ–ನಾನ್ ಕೊಟ್ಟೆ ಕೆಟ್ಟೆ– ಕಾಲವೇ ಹಾಂಗಾಗ್ಯೆತಿ, ಕೊಟ್ಟವ ಕೋಡಂಗಿ ತೆಗೆದುಕೊಂಡವ ಈರಭದ್ರ. ಈಗ ನಮ್ಮ ಗಿರವೀ ಅಂಗಡೀ ಕಡೆ ನೋಡೋದಿಲ್ಲ. ಮುಖಮರೆಸಿ ಅಡ್ಡಾಡ್ತೀ. ಲೆಖ್ಖದ ಪಟ್ಟಿಯಾಗ ಬಡ್ಡಿ ಒಂದೇಸವನೆ ಏರಾಕ ಹಿಡದ್ಯೆತಿ. ಹೀಗೆ ಆದ್ರೆ ಮನೆ ಮಾರಿದರೂ ಸಾಲತೀರಲಿಕ್ಕಿಲ್ಲ. ನಿನ್ನ ಮನೆ ಮಾರು ಎಲ್ಲಾ ನನ್ನ ತಾಬಾ ಬರತ್ಯೆತಿ. ಹುಚ್ಚಗೌಡ ಕುಡಿಯಾಕ ಶುರುಮಾಡಿಯೇನು? ಅಮಲನಾಗೆ ನನ್ನ ಗುರುತು ಸಿಗಲಿಲ್ಲ ಅಲ್ಲೇನು ? ಹಡಬೀ ದುಡ್ಡು ಅಂತ ತಿಳಿದ್ಯಾ ನನ್ನ ಸ್ವಂತಗಳಿಕೀ ಅದು.

ಈರಗೌಡ :– ಶೆಟ್ಟರೇ ಯಾಕ ಬಡಾಯಿ ಹೊಡಿತೀರಿ. ನಿಮ್ಮ ಸ್ವಂತ ಗಳಿಕೆ ಅಂದರ ನಮ್ಮಂತವರು ಕೊಟ್ಟ ಬಡ್ಡೀನೆ. ನಾನು ನಿಮ್ಮ ಸಾಲ ಎಂದೋ ತೀರಿಸಿದೀನಿ.

ಹೇಮಶೆಟ್ಟಿ :– ಯಾವಾಗ ಕೊಟ್ಟಿ ಎಷ್ಟು ಕೊಟ್ಟಿ ಎಲ್ಲ ಇದರಾಗ್ಯೆತಿ ನೋಡು ಈ ಪಟ್ಟಿ.

ಈರಗೌಡ :– ಬರೆಯಾಕ್ ಓದಾಕ್ ನಮಗ್ ಬರಾಕಿಲ್ಲ. ಮಾತಿನಮೇಲೇ ನಮ್ಮ ವ್ಯವಹಾರ. ನೀವು ನಮಗೆ ಕೊಟ್ಟದ್ದು ನೂರು ವರಹ.

## ರಾಗ : ಹಂಸಧ್ವನಿ – ತಾಳ : ಏಕ

**ನೂರು ವರಹ ಸಾಲವ ಬಡ್ಡಿಯಸಹ । ತೀರಿಸುವೆ ನಾನು ॥ ಯಾರೆಂದರಿಯದೆ ಗದರಿಸುವಿರಿ ಮತಿ । ಸೂರೆಹೋದುದೇನು ॥**

**ಈರಗೌಡ** :– ಒಂದು ನೂರು ವರಹ ನಿಮ್ಮಿಂದ ತಗೊಂಡೆ. ಅದಕ್ಕೆ ಬಡ್ಡಿ ನೂರೈವತ್ತು ವರಹ ಸೇರಿಸಿದ್ರಿ, ಆಯ್ತು ಅಂತ ನಾನು ಒಪ್ಪಿಕೊಂಡೆ. ಇನ್ನೂರೈವತ್ತು ವರಹ ಕಳೆದ ಸಲಾನೇ ಚುಕ್ತಾ ಮಾಡಿದೀನಿ. ನಿಮಗೇನೋ ಹೆಚ್ಚು ಕಡಿಮೆ ಆಗಿರಬೇಕು. ಈರಗೌಡನ ಲೆಖ್ಖವೋ ಅಥವಾ ಬೀರಗೌಡನ ಲೆಖ್ಖವೋ ಅಂತ ಸರಿನೋಡಿಹೇಳಿ.

**ಹೇಮಶೆಟ್ಟಿ** :– ಏಯ್ ಏನಂದೆ? ಸಾವಿರ ವರಹ ಸಾಲ ಪಡೆದು ನೂರು ಅಂತ ಅಂತಿಯೇನು? ಖಬರ್‌ದಾರ! ಇನ್ನೂರೈವತ್ತು ಅಂದ್ರೆ ಅಸಲಿನಾಗ ಕಾಲವಾಸೇ ಆತು. ಇನ್ನೂ ಏಳುನೂರಾ ಐವತ್ತು ಅಂದರೆ ಸಾಡೇಸಾತ್ ಹಾಗೇ ಉಳೀತು. ಅದಕ್ಕೆ ಮೂರು ವರ್ಷದ ಬಡ್ಡಿ. ನಮ್ಮ ಹತ್ರ ಹಣಪಡೆದು ನಮಕ್‌ಹರಾಮ್ ಆಗಾಕ್ಹತ್ತಿಯೇನು.

**ಈರಗೌಡ** :– ನೂರುವರಹ ಸಾಲ ಕೊಟ್ಟಿ–ಸಾವಿರ ಅಂತ ಬರದ್ ಇಟ್ಟಿ, ಎಲಾ ಕೊರಮ ಶೆಟ್ಟಿ ಸುಡುನಿನ್ನ ಲೆಖ್ಖದಪಟ್ಟಿ, ಈ ಈರಗೌಡನ ತಳ್ಳಿಗೆ ಬಂದರೆ ನೀನು ಕೆಟ್ಟಿ, ಹೆಚ್ಚ ಮಾತಾಡಿದರೆ ಮುಸುಡಮ್ಯಾಗ ಬಿದ್ದೀತು ಮುಷ್ಟಿ.

**ಹೇಮಶೆಟ್ಟಿ** :– ಹೆಂಡ ತಲೀಗೇರಾಕ ಹತ್ತ್ಯೆತೇನೋ ಗೌಡಾ ! ಸುಲಸ್ತೀನಿ ನಿನ್ನ ಚಮಡಾ, ಇದ್ದ ಮಾತ ಇದ್ದಾಂಗ್ ಹೇಳಿದ್ರೆ ಗುದ್ದಾಡಾಕ್ ಬರ್ತೀಯೇನು? ಕೈಯಾಗ ಬೆತ್ತ ಐತಿ ಬೀಸಿ ಬಡದೆ ಅಂದ್ರ ಸೊಂಟ ಮುರದೀತು.

**ಈರಗೌಡ** :– ಕಚ್ಚಾ–ಪಕ್ಕಾ ಅಂತೆಲ್ಲಾ ಲೆಕ್ಕಾ ಬರದು ಹುಚ್ಚಾಪಟ್ಟಿ ವ್ಯವಹಾರ ಮಾಡಾಕ ಹತ್ತೀಯೇನು? ಎಷ್ಟ ಮನೀ ಹಾಳಮಾಡದಿ, ನಿನ್ನ ಹುಟ್ಟಡಗಿಸ್ತೀನಿ ಬಾ ಮುಂದೆ.

**ರಾಜದೂತ :–** ಏನು ಗದ್ದಲ, ಬೀದಿ ಜಗಳ. ನಿಲ್ಲಿ ಅಲ್ಲಿ

**ರಾಗ : ಮೋಹನ – ತಾಳ : ತ್ರಿವುಡೆ**

**ಕಟ್ಟಳೆಯ ಕಡೆಗಣಿಸುತೀ ಪರಿ । ಸಿಟ್ಟಿನಿಂ ಬಡಿದಾಡುತಿರುವಿರಿ । ಸೃಷ್ಟಿಪನ ಸಮ್ಮುಖಕೆ ನಿಮ್ಮನು । ಕಟ್ಟಿ ಒಯ್ವೆ ॥**

**ರಾಜದೂತ :–** ಯಾರು ನೀವು? ಯಾವ ಊರು? ಏನು ಉದ್ಯೋಗ ನಡೆಸ್ತಾ ಇದ್ದೀರಿ? ಸರಿಯಾಗಿ ನಿಮ್ಮ ಪೂರ್ವಾಪರ ತಿಳಿಸಿ.

**ಹೇಮಶೆಟ್ಟಿ :–** ನಾನು ನಾನ್ರೀ ಹೇಮಶೆಟ್ಟಿ, ಗಿರವಿ ಅಂಗಡಿ ಮಾಲೀಕ. ಇಲ್ಲೇ ಶೆಟ್ಟರ ಬೀದೀಲಿ ನಮ್ಮ ಮನೆ. ಅಪ್ಪನ ಹೆಸರು ಭೂಮಶೆಟ್ಟಿ.

**ರಾಜದೂತ:–**ನೀನು ಯಾರೋ? ಹಗಲೆಲ್ಲಾ ಕುಡಿತೀಯೇನು?

**ಈರಗೌಡ :–** ನಾನ ಇಲ್ಲೇ ಹೊನ್ನೇಕೊಪ್ಪದವ. ಈರಗೌಡ ಅಂತ ಕರೀತಾರ್ರೀ– ನಮ್ಮಪ್ಪ ಬೀರಗೌಡ. ಹೊಲಾ, ಮನೀ, ತೋಟ ಎಲ್ಲಾ ಐತರೀ. ಸ್ವಲ್ಪ ಕುಡದದ್ದ ಹೌದ್ರೀ.

**ರಾಜದೂತ :–** ಪೌರ ಶಾಸನ ನಿಮಗೆ ಗೊತ್ತಿಲ್ಲವೋ? ಶಾಂತತಾಭಂಗ ಮಾಡ್ತಾ ಇದ್ದೀರಿ. ನಿಮ್ಮ ಗದ್ದಲದಿಂದ ಆಚೆ ಈಚೆ ಅಡ್ಡಾಡುವವರಿಗೆ ತೊಂದರೆ. ಯಾಕೆ ತಕರಾರು.

**ಹೇಮಶೆಟ್ಟಿ :–** ನಾನು ಇವನಿಗೆ ಸಾವಿರವರಹ ಸಾಲಾ ಕೊಟ್ಟೆ. ಆ ಸಾಲ ತಿರುಗಿ ಕೊಡದೆ, ಈಗ ನೂರು ಅಂತ ಹೇಳ್ತಾ ಇದ್ದಾನೆ ಗಂಟುಗಳ್ಳ.

**ಈರಗೌಡ :–** ನಂಬಬೇಡಿ ಆ ಶೆಟ್ಟೀ ಮಾತ. ನೂರು ಕೊಟ್ಟು ಸಾವಿರ ಅಂತ ಲೆಖ್ಖ ತೋರಿಸ್ತಾನೆ.

**ರಾಜದೂತ :–** ನಿಮ್ಮನ್ನು ಮಹಾರಾಜರ ಎದುರಿಗೆ ಒಯ್ದುನಿಲ್ಲಿಸ್ತೇನೆ. ನ್ಯಾಯ

ನಿರ್ಣಯ ನೀಡುವ ಮಂತ್ರಿಗಳೂ, ಪುರೋಹಿತರೂ ಎಲ್ಲಾ ಅಲ್ಲಿ ಇರ್ತಾರೆ. ಯಾವುದೇ ತಂಟೆ ತಕರಾರಿದ್ದರೂ ಅವರು ಬಗೆ ಹರಿಸ್ತಾರೆ, ಬನ್ನಿ ಬಂಧಿಗಳು ನೀವು.

**ವಿನಯಾದಿತ್ಯ** :– ವಿಚಾರಣಾ ಚಾವಡಿಯನ್ನು ಸೇರಿದ್ದಾಗಿದೆ. ಮಂತ್ರಿಗಳೂ ಪುರೋಹಿತರೂ ಉಪಸ್ಥಿತರಿದ್ದಾರೆ. ವಿಶೇಷ ಅಂದ್ರೆ ಮಹಾರಾಣಿಯವರ ಸವಾರಿಯೂ ಬಂದಿದೆ. ಯಾವ ಪ್ರಕರಣ ಅಂತ ವಿಚಾರಿಸೋಣ.

**ರಾಜದೂತ** :– ಮಹಾರಾಜರೇ, ಇವ ಹೇಮಶೆಟ್ಟಿ– ಇವ ಈರಗೌಡ. ಇವರೀರ್ವರೂ ರಾಜಮಾರ್ಗದಲ್ಲಿ ಪರಸ್ಪರ ಬೈದಾಡಿಕೊಂಡು ಬಡಿದಾಟ ಆರಂಭಿಸಿದ್ದರು. ಸಾರ್ವಜನಿಕರಿಗೆ ತೊಂದರೆ ಉಂಟುಮಾಡಿವ ಕಟ್ಟಳೆಯನ್ನು ಮೀರಿ ವರ್ತಿಸಿದ ಇವರ ವಿಚಾರಣೆ ಆಗಲಿ.

**ವಿನಯಾದಿತ್ಯ** :– ಜಗಳವಾಡಿಕೊಂಡು ಬಂದವರೋ ಇವರು. ಎಲಾ ಅವಿವೇಕಿಗಳೇ–

**ರಾಗ : ಮಧ್ಯಮಾವತಿ – ತಾಳ : ಏಕ**

**ಶಾಸನವನು ಅರಿತು । ನೀವ್ ವಿಶ್ವಾಸದೊಳಿರದಿನಿತು ॥ ಬೇಸರದಲಿ ಬಡಿದಾಡಿದಿ ರೇತಕೆ । ದೋಷಕೆ ಕಾರಣವೇನಿಹುದರುಹಿರಿ ॥**

**ವಿನಯಾದಿತ್ಯ** :– ನಮ್ಮ ರಾಜ್ಯದ ಪ್ರಜೆಗಳು ಸಾಮರಸ್ಯದಿಂದ ಬದುಕಬೇಕು. ಪರಸ್ಪರ ವಿಶ್ವಾಸದಿಂದ ವ್ಯವಹರಿಸಬೇಕು. ಒಗ್ಗಟ್ಟಿನಿಂದ ಬದುಕು ಭದ್ರವಾಗುತ್ತದೆ. ಒಡಕಿನಿಂದ ಬಾಳು ಛಿದ್ರವಾಗುತ್ತದೆ. ಈ ನಿಯಮವನ್ನು ಒತ್ತಿ ಹೇಳಿ ಶಾಸನವನ್ನು ರೂಪಿಸಿದ್ದೇವೆ. ಹೀಗಿದ್ದೂ ನೀವು ಬೀದಿಯ ಜಗಳಕ್ಕೆ ಇಳಿದಿದ್ದೇಕೆ. ನಿಮ್ಮ ನಿಮ್ಮಲ್ಲಿ ವಿವಾದವೆದ್ದರೆ ಆಡಳಿತದ ನೆರವಿನಿಂದ ನ್ಯಾಯ ತೀರ್ಮಾನಿಸಿ ಕೊಳ್ಳಬೇಕು. ಯಾವ ಕಾರಣಕ್ಕೆ ನಿಮ್ಮಲ್ಲಿ ವ್ಯಾಜ್ಯ.

ಈರಗೌಡ :– ಮಹಾರಾಜರೇ ನನ್ನಿಂದ ಅಪರಾಧವಾಗಿದೆ. ಅದಕ್ಕೆ ಕಾರಣ–

### ರಾಗ : ಕೇದಾರಗೌಳ – ತಾಳ : ಅಷ್ಟ

**ಮಗಳ ಮದುವೆಗೆಂದು ನೂರು ವರಹ ಸಾಲ । ಕೇಳಿ ನೀವು ॥ ನಾನು । ನಗದು ಪಡೆದು ಬಡ್ಡಿ ಸಹಿತ ತೀರಿಸಿದೆನು । ಕೇಳಿ ನೀವು ॥ ವಿಗಡನೀ ಶೆಟ್ಟಿ ಸಾವಿರವೆಂದು ಬರೆದಿರ್ಪ । ಕೇಳಿ ನೀವು ॥ ಇನ್ನೀ । ಬಗೆಯ ವಿರೋಧಿಸಿ ತಂಟೆಯ ಮಾಡಿದೆ । ಕೇಳಿ ನೀವು ॥**

ಈರಗೌಡ :– ನನ್ನ ಕಿರೇಮಗಳು ಮಾದೇವೀ ಲಗ್ನಕ್ಕೆ ನಾನು ಈ ಹೇಮ ಶೆಟ್ಟರಿಂದ ನೂರು ವರಹ ಸಾಲ ಪಡೆದೆ. ಆ ಸಾಲವನ್ನು ಬಡ್ಡಿ ಸಹಿತ ಮರಳಿ ಕೊಟ್ಟಿದ್ದೇನೆ. ನನಗೆ ಓದು ಬರೆಹ ಬರುವುದಿಲ್ಲ. ಈಗ ಇವರು ಲೆಖ್ಖದ ಪಟ್ಟಿ ಕಾಣಿಸಿ ನೂರಲ್ಲ ಸಾವಿರ ಅಂತ ಹೇಳ್ತಾ ಇದ್ದಾರೆ. ನಾನು ತೆಗೆದುಕೊಂಡಿದ್ದು ನನಗೆ ನೆನಪಿದೆ. ಸುಳ್ಳು ಲೆಖ್ಖ ಕೇಳಿ ನನಗೆ ಸಿಟ್ಟು ಬಂತು. ನಾನು ಕೈಮುಂದೆ ಮಾಡಿದ್ದು ಹೌದು.

ವಿನಯಾದಿತ್ಯ :– ಈ ಬಗ್ಗೆ ನಿಮ್ಮ ಅಂಬೋಣವೇನು ಶೆಟ್ರೇ.

ಹೇಮಶೆಟ್ಟಿ :– ಮಹಾರಾಜರೇ, ಈತ ಗೌಡ –

### ರಾಗ : ತೋಡಿ – ತಾಳ : ಮಟ್ಟೆ

**ಗೌಡನೀತ ಬರೆಹವರಿಯನು । ತಿಳಿದವರು ನೀವು । ನೋಡಬೇಕು ಲೆಕ್ಕವಿದರನು ॥ ಬೇಡಲೆಂದು ಹೋಗಲಿಲ್ಲ ಸೇಡಿನಿಂದ ಕೇಳ್ದುದಲ್ಲ । ಕುಡಿದಮಲಿನಿಂದ ಜಗಳವಾಡಿ ಬಡಿಯಬಂದನೆನ್ನ ॥**

ಹೇಮಶೆಟ್ಟಿ :–ಮಹಾರಾಜರೇ, ಈ ಗೌಡ ನಿರಕ್ಷರಕುಕ್ಷಿ. ಸಾವಿರ–ನೂರು ಭೇದವೇ ಗೊತ್ತಿಲ್ಲ. ನಾನು ಇವನಿಗೆ ಕೊಟ್ಟಿದ್ದು ಸಾವಿರ ವರಹ. ನೋಡಿ ಇಲ್ಲಿ ಹಚ್ಚಿಟ್ಟಿದ್ದೇನೆ. ಈ ಲೆಕ್ಕ ಪತ್ರದ ಕೆಳಗಡೆ ಇವನ ಎಡಗೈ ಹೆಬ್ಬೆಟ್ಟಿನ ಗುರುತು ತೆಗೆದುಕೊಂಡಿದ್ದೇನೆ.

ಪ್ರಭುಗಳು ಪರಾಂಬರಿಸಬೇಕು. ನನ್ನ ಹಣ ಮುಳುಗಿಸುವ ಆಲೋಚನೆಯಲ್ಲಿ ಇವ ಜಗಳ ತೆಗೆದಿದ್ದಾನೆ. ಈ ಗೌಡನ ಬಳಿ ಬೇಡಲಿಕ್ಕೆ ನಾನು ಹೋಗಲಿಲ್ಲ. ಕೇಡಿಗೋ ಸೇಡಿಗೋ ಕೇಳಲಿಲ್ಲ. ಹಣ, ಹಣದ ಬಡ್ಡಿ ಕೂಡಿಸಿಟ್ಟಿದ್ದೇನೆ. ಬಾಯ ಮಾತಲ್ಲ. ಬರೆದಿಟ್ಟ ಲೆಕ್ಕ. ಇವನಿಗೆ ಕುಡಿದ ಮತ್ತಿನಲ್ಲಿ ಇದೇ ಭಾರೀ ತಪ್ಪಾಗಿ ಕಂಡಿತು. ತಂಟೆಗೆ ತೊಡಗಿದ್ದಾನೆ.

ಈರಗೌಡ :– ಮಹಾರಾಜರೇ ದೇವರಾಣೆಯಾಗಿ ನಾನು ತೆಗ್ದುಕೊಂಡಿದ್ದು ನೂರೇ ವರಹ.

ವಿನಯಾದಿತ್ಯ :– ಮಂತ್ರಿಗಳೇ ಶೆಟ್ಟಿ ಲೆಕ್ಕ ಪತ್ರ ಇಟ್ಟಿದ್ದಾನೆ. ಗೌಡ ಆಣೆ ಮಾಡಿ ಹೇಳುತ್ತಿದ್ದಾನೆ. ಈ ಪ್ರಕರಣ ಬಗೆ ಹರಿಸೋದು ಹೇಗೆ?

ಕ್ಷೇಮಶೇಖರ :– ಇಂತಹ ವ್ಯವಹಾರಗಳ ಕುರಿತೇ ಚಿಂತಿಸಿ ಈ ಹಿಂದೆ ಅನಕ್ಷರತೆಯ ಬಗ್ಗೆ ಪ್ರಸ್ತಾಪಿಸಿದ್ದೆ. ಪ್ರಭೂ ಇರಲಿ. ಈ ಬಗ್ಗೆ ಕೂಲಂಕುಷವಾಗಿ ವಿಚಾರಿಸೋಣ. ಶೆಟ್ಟರೇ–

ಹೇಮಶೆಟ್ಟಿ :– ನಮಸ್ಕಾರ ಮಂತ್ರಿಗಳೇ.

ಕ್ಷೇಮಶೇಖರ :– ಬನ್ನಿ ಇಲ್ಲಿ. ತೆಗೆಯಿರಿ ನಿಮ್ಮ ಪಟ್ಟಿ.

## ರಾಗ : ಜಂಜೂಟಿ – ತಾಳ : ಮಟ್ಟೆ

**ಒಂದ ಬರೆದು ಸೊನ್ನೆಯೆರಡ ಮೊದಲು ಬರೆದಿರಿ । ಮುಂದೆ ಬದಲು ಸೊನ್ನೆಯೊಂದ ಸೇರಿಸಿರ್ಪಿರಿ ॥ ಹೊಂದಿ ಸಾವಿರಕ್ಕೆ ಮೊತ್ತ ವೇರಿತಲ್ಲವೆ । ಮಂದಮತಿಗಳನ್ನು ದೋಚಿ ಮೆರೆಯುತಿರುವಿರೆ ॥**

ಕ್ಷೇಮಶೇಖರ :– ನಿಮ್ಮ ಲೆಕ್ಕ ತಪಾಸಣೆ ಮಾಡೋಣ. ಮೊದಲು ಒಂದು ಅಂಕೆ ಬರೆದು ಎರಡು ಸೊನ್ನೆಗಳನ್ನು ಬರೆದಿರಿ. ಮೊತ್ತ ನೂರಾಯ್ತು. ಇದನ್ನು ಓದಿ ಹೇಳಿ. ಈ ಗೌಡನಿಂದ ಎಡಗೈ ಹೆಬ್ಬೆಟ್ಟು ಒತ್ತಿಸಿಕೊಂಡ್ರಿ, ಆ ಮೇಲೆ ಆ ಮೊತ್ತಕ್ಕೆ

ಮತ್ತೊಂದು ಸೊನ್ನೆ ಸೇರಿಸಿದ್ದೀರಿ. ಒಂದರ ಮುಂದೆ ಸೊನ್ನೆ ಮೂರಾದರೆ ಮೊತ್ತ ಸಾವಿರವಾಯ್ತೋ ಇಲ್ಲವೋ? ಈಗ ಲೆಕ್ಕ ತೋರಿಸ್ತಾ ಇದ್ದೀರಿ. ಅನಕ್ಷರಸ್ಥರನ್ನು ವಂಚಿಸುವುದಕ್ಕೆ ನಿಮ್ಮ ಬುದ್ಧಿಯನ್ನು ಉಪಯೋಗಿಸ್ತಾ ಇದ್ದೀರಿ. ಬರೆಹ ಬರದವರು ಸುಲಭವಾಗಿ ನಿಮ್ಮ ಬಲೆಯಲ್ಲಿ ಬೀಳ್ತಾರೆ. ದೋಚುವುದಕ್ಕೇ ಯೋಚನೆಯನ್ನು ಬಳಸುವ ನಿಮ್ಮಂಥವರಿಂದ ಬಡಪಾಯಿಗಳಿಗೆ ಭಿಕ್ಷಾಪಾತ್ರೆಯೇ ಗತಿಯಾಗಿದೆ.

**ಹೇಮಶೆಟ್ಟಿ :–** ಇಲ್ಲ ಇಲ್ಲ. ನಾನು ಹಾಗೆಲ್ಲಾ ಮಾಡಲಿಲ್ಲ. ಸಾವಿರವೇ ಸರಿ. ಬರೆಯುವಾಗಲೂ ಅಂಕೆ ಒಂದು ಸೊನ್ನೆ ಮೂರು ಬರೆದಿದ್ದು.

**ಕ್ಷೇಮಶೇಖರ :–** ಹೌದೋ ಸಾವಿರ ಸಾವಿರ ಅಂತ ಸಮರ್ಥನೆ ಮಾಡಿಕೊಳ್ಳುತ್ತೀರೋ? ಸಾವು ಎಂದರೇನು – ಇರ ಎಂದರೇನು ನಾನು ಕಾಣಿಸಿಕೊಡ್ತೇನೆ. ನೂರು ಚಾಟೀ ಏಟು ಬಿದ್ದರೆ ನಿಜ ಗೊತ್ತಾಗುತ್ತದೆ. ಯಾರೋ ಅಲ್ಲಿ.

**ಹೇಮಶೆಟ್ಟಿ:–** ಬೇ ಬೇ ಬೇ ಬೇಡ. ನೂ– ನೂರೇ ನಾನು ಕೊಟ್ಟಿದ್ದು. ದುರಾಸೆಯಿಂದ ತಪ್ಪು ಮಾಡಿದೆ. ಕ್ಷಮಿಸಿ. ಕ್ಷಮಿಸಿ.

**ಕ್ಷೇಮಶೇಖರ :–** ಮಹಾರಾಜರೇ ಈ ವ್ಯವಹಾರ ಈಗ ಬಯಲಾಯ್ತು ನೋಡಿ. ಈರಗೌಡ ನೀನು ಬಾ ಇಲ್ಲಿ. ಈ ಬಡ್ಡಿ ವ್ಯವಹಾರದಲ್ಲಿ ನಿನ್ನ ತಪ್ಪಿಲ್ಲ.

**ಈರಗೌಡ:–** ಬದುಕಿದೆ ಬುದ್ಧಿ. ನಿಮ್ಮ ಉಪಕಾರ.

**ಕ್ಷೇಮಶೇಖರ :–** ಕುಡಿಯುವ ಚಟ ನಿನಗುಂಟು.

**ಈರಗೌಡ :–** ಖರೇ ಮಾತು ಮದ್ಯಪಾನ ಮಾಡ್ತೇನೆ ನಾನು. ಏನೋ ಒಂದು ಥರಾ ಅಮಲು. ಗುಂಗು. ಅದು ಬೇಕೆ ಬೇಕೆನಿಸುತ್ತದೆ.

**ಕ್ಷೇಮಶೇಖರ :–** ಬಿಡು ಆ ಚಟವನ್ನು. ವ್ಯವಹಾರದ ಪರಿವೆಯೇ ಇಲ್ಲದ ಒಬ್ಬ ಹುಚ್ಚನನ್ನು ಸುಖೀಮನುಷ್ಯ ಅಂತ ಹೇಳಬಹುದೋ. ಅಮಲಿನ ಪದಾರ್ಥ

ಸೇವಿಸಿ ಸ್ಥಿಮಿತ ಕಳೆದುಕೊಂಡು ಭ್ರಮಿಷ್ಠರಂತೆ ವರ್ತಿಸಿದರೆ ಸಮಾಧಾನ ಸಿಕ್ಕೀತೋ? ಇನ್ನು ಮೇಲೆ ಮದ್ಯಪಾನ ಮಾಡಬೇಡ. ಹೆಂಡ ಸರಾಯಿಯ ಸಹವಾಸ ಹೆಂಡತಿ ಮಕ್ಕಳ ಉಪವಾಸ ಅಂತ ತಿಳಿ. ದುಡಿದ ದಣಿವಾರಿಸಿ ಕೊಳ್ಳುವುದಕ್ಕೆ ಕುಡಿತದ ಚಟ ಅಂಟಿಸಿಕೊಂಡರೆ ಅಂಟಿದ ಆ ಚಟ ಘಟವನ್ನೇ ಕೆಡಿಸುತ್ತದೆ. ಬುದ್ಧಿಗೆ ಭ್ರಮೆ ಕವಿದರೆ ದೇಹ ಸಮತೋಲನ ಕಳೆದುಕೊಂಡರೆ ತೂರಾಡಿ ಚೀರಾಡಿ ಸಾಯಬೇಕಾಗುತ್ತದೆ. ಇಂದಿನಿಂದ ಹೆಂಡವನ್ನು ಮುಟ್ಟಬೇಡ. ಹೆಂಡ ಅಧೋಗತಿಯ ಬೆಂಕಿಯ ಕೆಂಡ ಅಂತ ತಿಳಿ.

**ಈರಗೌಡ** :– ಆಯ್ತು ಬುದ್ಧಿ. ನಿಮ್ಮ ಮಾತನ್ನು ನೆನಪಿನಲ್ಲಿಟ್ಟುಕೊಳ್ತೇನೆ. ನೀವೇ ನಮ್ಮಂಥವರನ್ನು ತಿದ್ದಿ ಉದ್ಧರಿಸಬೇಕು.

**ವಿನಯಾದಿತ್ಯ** :– ಮಂತ್ರೀ ನಿನ್ನ ವರ್ತನೆಯನ್ನು ಕಂಡು ಮೆಚ್ಚಿದ್ದೇನೆ. ಅಷ್ಟೇ ಅಲ್ಲ. ನೀನಿತ್ತ ಸೂಚನೆಯ ಬಗ್ಗೆ ನಿರ್ಣಯವನ್ನು ತಿಳಿಸುತ್ತೇನೆ.

### ರಾಗ : ನವರೋಜ – ತಾಳ : ಏಕ

**ಅಕ್ಷರವಾ ಬರೆದೋದಿ । ಶುಭ । ಲಕ್ಷಣದಿ ನಲಿದಾಡಿ । ಶಿಕ್ಷಣದಲಿ ಭಾಷೆಯ ಬಲಗಳಿಸುತ । ಲಕ್ಷಿಸಿ ಪ್ರಜೆಗಳುಲ್ಲಾಸದಿ ಬಾಳಲಿ ॥**

**ವಿನಯಾದಿತ್ಯ** :– ಇಂದಿನಿಂದಲೇ ನಮ್ಮ ರಾಜ್ಯದಲ್ಲಿರುವ ಅನಕ್ಷರಸ್ಥರನ್ನು ಸಾಕ್ಷರರನ್ನಾಗಿಸಲು ಪ್ರಯತ್ನಿಸಬೇಕು. ನಮ್ಮ ನಾಡಿನ ಪ್ರತಿಯೊಬ್ಬ ಪ್ರಜೆಯೂ ಬರೆಹ ಓದುಗಳ ಮೂಲಕ ತನ್ನ ಅನುಭವವನ್ನು ವಿಸ್ತರಿಸಿಕೊಳ್ಳಬೇಕು. ಅ-ಅಕ್ಷರ ಬರೆಯಲು ಬಾರದವರಿಗೂ ಬರೆಹದ ಅರಿವು ಮೂಡಿಸಬೇಕು. ವಿದ್ಯೆಯುಳ್ಳವನ ಮುಖವು ಮುದ್ದು ಬರುವಂತಿಕ್ಕು ವಿದ್ಯೆಯಿಲ್ಲವನ ಒಣ ಮುಖವು ಹಾಳೂರ ಹದ್ದಿನಂತಕ್ಕು ಎಂಬುದನ್ನು ತಿಳಿದು ಎಲ್ಲರೂ ಲಕ್ಷಣವಂತರಾಗಿ ಬಾಳಬೇಕು. ಶಿಕ್ಷಣದ ಮೂಲಕ ಭಾಷೆಯನ್ನು ಕಲಿತು ಸಾಹಿತ್ಯ ಸಂಗೀತ ಕಲಾ ರಸಿಕರಾಗಿ ಸಂಸ್ಕೃತಿವಂತರಾಗಿ ಬದುಕಬೇಕು. ನಮ್ಮ ಆಡಳಿತದಲ್ಲಿ ಬರೆಹ ಪ್ರಸಾರವೇ

ಮೊದಲಾಗಲಿ. ನಿರಕ್ಷರತೆಯ ನಿರ್ಮೂಲನವಾಗಲಿ. ಬದುಕಿಗೆ ಭಾವನೆಯೇ ಬಲ. ಭಾವನೆಗೆ ಅರಿವೇ ಬಲ. ಅರಿವಿಗೆ ಅನುಭವವೇ ಬಲ. ಅನುಭವಕ್ಕೆ ಆಸಕ್ತಿಯೇ ಬಲ. ಆಸಕ್ತಿಗೆ ಅಕ್ಷರಾಭ್ಯಾಸವೇ ಬಲ ಎಂಬುದನ್ನು ತಿಳಿಸಬೇಕು. ಧನಬಲವಾಗಲಿ, ದೇಹಬಲವಾಗಲಿ ಆಡಂಬರದ ಪ್ರದರ್ಶನಕ್ಕೆ ವಿನಹ ಅಂತರಂಗದ ಸಮಾಧಾನಕ್ಕೆ ಅಲ್ಲ. ಅಂತರಂಗದ ಅರಿವಿಗೆ ಅನುಭವದ ಬಾಗಿಲು ಅಕ್ಷರ ಜ್ಞಾನ. ಈ ದಿಸೆಯಲ್ಲಿ ಎಲ್ಲರೂ ಕಟಿಬದ್ಧರಾಗಿ ಕಾರ್ಯಪ್ರವೃತ್ತರಾಗಬೇಕು. ಅಲ್ಲವೇ ಪುರೋಹಿತರೇ?

**ಪುರೋಹಿತ** :– ರಾಜೇಂದ್ರಾ! ಉತ್ಸಾಹದಿಂದ ವಿದ್ಯಾಪ್ರಸಾರಕ್ಕೆ ನೀನು ಅಣಿಯಾಗುತ್ತಿದ್ದೀಯೆ. ಆದರೆ ಈ ವ್ಯವಹಾರದಲ್ಲಿ ಪೂರ್ವಿಕರ ಧ್ಯೇಯ ಧೋರಣೆಗಳನ್ನು ಅಲಕ್ಷಿಸಿ ಮುಂದುವರಿಯಬಾರದು. ಅತಿಯಾದ ಅನುಕಂಪವೂ ಅನಾಹುತಕ್ಕೆ ಕಾರಣವಾದೀತು. ಸಾರಾಸಾರ ವಿವೇಚನೆಯಿಂದ ವರ್ತಿಸಬೇಕು.

**ವಿನಯಾದಿತ್ಯ** :– ಶುಭಸ್ಯಂ ಶೀಘ್ರಂ ಎಂದು ನಾನು ಭಾವಿಸಿದ್ದೇನೆ. ಈ ಬಗ್ಗೆ ನೀವು ಮೀನ ಮೇಷ ಎಣಿಸುವುದೇಕೆ ಅಂತ ಗೊತ್ತಾಗಲಿಲ್ಲ. ಆತಂಕವೇನಾದರೂ ಇದ್ದರೆ ತಿಳಿಸಿ.

**ಪುರೋಹಿತ** :– ನನ್ನ ಅಭಿಪ್ರಾಯ ಹೇಗೂ ಇರಲಿ. ಶಾಸ್ತ್ರಾಧಾರದಿಂದ ಈ ಬಗ್ಗೆ ತಿಳಿಸುವುದಾದರೆ –

**ರಾಗ : ಧನ್ಯಾಸಿ – ತಾಳ : ಅಷ್ಟ**

**ವೇದ ಕೋವಿದರು । ಹೇಳಿದ ಮಾತು । ಬೋಧೆಯಾಗಿಹುದು ॥ ಶೂದ್ರಗು ಸ್ತ್ರೀಗು ವಿದ್ಯಾಧಿಕಾರಗಳಿಲ್ಲ । ಬಾಧೆ ಸಂಸ್ಕೃತಿಗದರಿಂದಲೆಂದಿಹರಲ್ಲ ॥**

**ಪುರೋಹಿತ** :– ಬ್ರಹ್ಮವಿದ್ಯೆಯ ಬಗೆಗೆ ಬೋಧಿಸಿದ ಋಷಿಮುನಿಗಳು–ಶೂದ್ರರನ್ನೂ ಸ್ತ್ರೀಯರನ್ನೂ ಬಹಿಷ್ಕರಿಸಿದ್ದಾರೆ. ಜ್ಞಾನದ ದಾರಿಯಲ್ಲಿ ಸಾಗುವ ಸಂಸ್ಕಾರ ಅವರಿಗಿಲ್ಲ ಎಂದಿದ್ದಾರೆ. ಇದನ್ನು ಮಡಿವಂತಿಕೆಯ ಮಾತೆಂದು ತಳ್ಳಿ ಹಾಕುವಂತಿಲ್ಲ.

ಯಾಕೆಂದರೆ ಈವರೆಗೆ ಆಳಿದ ರಾಜ ಮಹಾರಾಜರುಗಳು ಈ ವಿಧಿಯನ್ನು ಒಪ್ಪಿದ್ದಾರೆ. ಇದನ್ನು ಸಾಧು ಬೋಧೆ ಎಂದು ಸಮ್ಮತಿಸಿದ್ದಾರೆ. ಈ ದಾರಿ ಬಿಟ್ಟು ಹೊಸ ಹಾದಿ ನಿರ್ಮಿಸತೊಡಗಿದರೆ ಆಡಳಿತಕ್ಕೆ ತೊಡಕಾದೀತು. ಆಯಾ ಜೀವಿಗಳ ಕರ್ಮಫಲ ಅನುಸರಿಸಿ ಅವರಿಗೆ ಬುದ್ಧಿ ಬರುತ್ತದೆ. ಬುದ್ಧಿ ಕರ್ಮಾನುಸಾರಿಣೀ ಎಂದು ಸೂಕ್ತಿ ಇದೆ. ಹಾಗಾಗಿ ಎಲ್ಲಾ ಪ್ರಜೆಗಳನ್ನೂ ಬುದ್ಧಿವಂತರನ್ನಾಗಿಸುವ ಆತುರದಲ್ಲಿ ನೀವೇ ಬುದ್ಧಿಗೇಡಿ ಗಳಾಗಬೇಡಿ. ಆಲೋಚಿಸಿ ವ್ಯವಹರಿಸಿ.

ವಿದ್ಯಾವತಿ :– ಪುರೋಹಿತರೇ ಶಾಸ್ತ್ರದ ಗೊತ್ತು ಗುರಿಗಳೇನೇ ಇರಲಿ. ನಿಮ್ಮ ತರ್ಕದ ಗತ್ತುಗಾರಿಕೆಯ ಅರಿವು ನನಗಾಯ್ತು. ಅಹಹಾ..

## ರಾಗ : ಮೋಹನ ಕಲ್ಯಾಣಿ – ತಾಳ : ಆದಿ

**ಅಹಹ ನಿಮ್ಮಯ ನುಡಿ ಗ್ರಹಿಸಿದೊಡೆ ಕಿಡಿ । ಅಹಿತವೇತಕೆ ಸ್ತ್ರೀಯರು । ಕರ್ತವ್ಯ ನಿ । ರ್ವಹಿಸಿ ಬಾಳುವೆ ಮಾಳ್ಪರು । ಸಂಸಾರದಿ । ಗೃಹಿಣಿಯರಾಗಿರ್ಪರು । ಈ ಬಗೆಯ ಸಂ । ವಹನೆಯ ಮರೆಯುವುದು । ಸರಿ ಎನಿಸದು ॥ ಬಹಳ ಶ್ರಮದ ಕಾಯ ಕಷ್ಟದಿ ಶೂದ್ರರು । ದಹಿಸುವ ಮೌಢ್ಯದಿ ಸಿಲುಕಿ ಬಾಳುವರಲ್ಲ ॥**

ವಿದ್ಯಾವತಿ :– ಹೆಣ್ಣು ಸಂಸಾರದ ಕಣ್ಣು ಎಂದು ಬಲ್ಲವರು ಹೇಳಿದ್ದಾರೆ. ಆ ಕಣ್ಣು ಕುರುಡಾಗಬೇಕು ಅಂತ ಯಾರೂ ಹೇಳಲಿಕ್ಕಿಲ್ಲ. ವೇದ ವಿದ್ಯೆಯನ್ನು ಸ್ತ್ರೀಯರಿಗೂ ಶೂದ್ರರಿಗೂ ಬೋಧಿಸಬಾರದು ಎಂದು ಶಾಸ್ತ್ರ ಹೇಳಿರಬಹುದು. ಅಲ್ಲಿ ವ್ಯಾವಹಾರಿಕ ಸ್ವಾರ್ಥವಿದೆ. ಮಾನವೀಯತೆಯ ತಳಹದಿ ಇಲ್ಲ. ಯಾಕೆಂದರೆ ಮನುಷ್ಯ ಬುದ್ಧಿಜೀವಿ. ವಿಜ್ಞಾನ ಚೇತನಿ ಎಂದು ಶಾಸ್ತ್ರಗಳೇ ಹೇಳುತ್ತವೆ. ತಾಯಿಯಾಗಿ ಕಾರ್ಯನಿರ್ವಹಿಸುವ ಹೆಣ್ಣು ಸಾಮಾಜಿಕ ಬೆಳವಣಿಗೆಯ ಮೂಲಬಿಂದುವೆನಿಸುತ್ತಾಳೆ. ಆದುದರಿಂದ ಜನನಿ ತಾನೆ ಮೊದಲ ಗುರುವು ಎಂಬುದನ್ನು ಬಲ್ಲವರು ಹೇಳಿದ್ದಾರೆ. ಮನುಷ್ಯ ನಾಗರಿಕನಾಗುವುದಕ್ಕೆ ಮೊದಲು ವಿಧಿಸಿಕೊಂಡ ಕಟ್ಟುಪಾಡುಗಳು ಪ್ರಗತಿ ಧೋರಣೆಗೆ

ಹೊಂದುವುದಿಲ್ಲ. **ಬುದ್ಧಿಃ ಕರ್ಮಾನುಸಾರಿಣೀ** ಎಂತ ಹೇಳಿದಿರಿ. ಅದಕ್ಕೂ ಹಿಂದಿನ ಸಾಲು **ಅಭ್ಯಾಸಾನುಸಾರಿಣೀ ವಿದ್ಯಾ** ಅಂತ ಇದೆ. ವಿದ್ಯೆ ಅಭ್ಯಾಸಾನು ಸಾರಿಣಿಯಾದ್ದರಿಂದ ಯಾರು ಅಭ್ಯಾಸ ಮಾಡಿದರೂ ಅವರಿಗೆ ಸಿದ್ಧಿಯಿದೆ ಅಂತ ತೀರ್ಮಾನ. ಶೂದ್ರರೂ ಸ್ತ್ರೀಯರೂ ಕಲಿಯಬಾರದು ಎಂಬ ನಿರ್ಬಂಧ ಹೇರಿದವರು ಸ್ವಾರ್ಥಾನುಶಕ್ತಿಯಿಂದ ವ್ಯವಹರಿಸಿದ್ದಾರೆ. ಒಮ್ಮೆ ಅವರು ಕಲಿತು ಬುದ್ಧಿವಂತರಾದರೆ ಕಾಯಕಷ್ಟದ ಕೆಲಸಗಳೆಲ್ಲ ತಮ್ಮ ಪಾಲಿಗೂ ಬಂದೀತು ಅಂತ ತರ್ಕಿಸಿ ಕಲಿಯಲು ಅಡ್ಡಿಪಡಿಸಿದ್ದಾರೆ. ಆ ಅಡ್ಡಿಯನ್ನು ಲೆಕ್ಕಿಸದೆ ಗಾರ್ಗಿ, ಮೈತ್ರೇಯಿ ಮೊದಲಾದವರು ಬ್ರಹ್ಮವಾದಿನಿಯರಾಗಿದ್ದಾರೆ. ವ್ಯಾಧನಾದ ವಾಲ್ಮೀಕಿ ಮಹಾಕವಿಯಾಗಿದ್ದಾನೆ. ಇಲ್ಲಿ ಮಹಾರಾಜರು ಅನಕ್ಷರತೆಯ ನಿವಾರಣೆಗೆ ಕಟಿಬದ್ಧರಾಗಿದ್ದಾರೆ. ಉದಾರ ಚರಿತ್ರೆಯುಳ್ಳವರಿಗೆ ವಿಶ್ವವೇ ಕುಟುಂಬ. ಸಂಕುಚಿತ ಬುದ್ಧಿಯವರಿಗೆ ಸಂಸಾರವೆಂದರೆ ತಮ್ಮ ಮನೆಯ ಕಂಬ. ಬಲಿಚಕ್ರವರ್ತಿ ಭೂಮಿಯನ್ನು ದಾನ ನೀಡುವಾಗ ಜಲಪಾತ್ರೆಯ ನೀರು ಬೀಳದಂತೆ ಶುಕ್ರಾಚಾರ್ಯ ಕಣ್ಣು ಹಾಯಿಸಿದನಂತೆ. ವಾಮನ ವಟು ದರ್ಭೆಯಿಂದ ಚುಚ್ಚಿದಾಗ ಭಾರ್ಗವರ ಕಣ್ಣು ಕುರುಡಾಯಿತಂತೆ. ಮಹಾರಾಜರ ಸದುದ್ದೇಶಕ್ಕೆ ಅಡ್ಡಿ ಬರಬೇಡಿ.

**ವಿನಯಾದಿತ್ಯ** :- ಸ್ತ್ರೀಯರ ಸುದ್ದಿ ಬಂದ ತಕ್ಷಣ ಮಹಾರಾಣಿಯವರಿಗೆ ಮಹಾಕೋಪಬಂತು. ಪುರೋಹಿತರ ಮೇಲೆ ವಾಗ್ಬಾಣದ ಸುರಿಮಳೆಯೇ ಆಯ್ತು.

**ಕ್ಷೇಮಶೇಖರ** :- ಪುರೋಹಿತರು ಅಕ್ಷರ ಪ್ರಸಾರ ಆಗಲೇಬಾರದು ಅಂತ ಹೇಳಲಿಲ್ಲ. ಅವರ ಅಭಿಪ್ರಾಯದಲ್ಲಿ ಸ್ವಂತ ಅನುಭವಕ್ಕಿಂತ ಪೂರ್ವಿಕರ ಪ್ರಭಾವವೇ ಹೆಚ್ಚಾಗಿದೆ. ಆ ಬಗ್ಗೆ ಕಟುವಾಗಿ ವಿಮರ್ಶಿಸುವ ಅಗತ್ಯವೇನೂ ಇಲ್ಲ. ಮಹಾರಾಜರು ಈ ಬಗ್ಗೆ ಯಾಕೆ ಆತುರರಾಗಿದ್ದಾರೆ ಇದನ್ನು ಯೋಚಿಸೋಣ.

**ರಾಗ : ಮೋಹನ – ತಾಳ : ತ್ರಿವುಡೆ**

**ಓದು ಬರಹವನರಿತು ಮನುಜರು । ಸಾಧು ಮಾರ್ಗದಿ ಬಾಳಲು ॥ ಸಾಧನೆಗೆ**

**ಸಾಹಿತ್ಯ ದೊರೆಯುವ । ಹಾದಿಯಕ್ಷರಜ್ಞಾನವು ॥**

**ಕ್ಷೇಮಶೇಖರ :–** ಓದು ಬರಹದ ಮೂಲಕ ವಿಚಾರ ತಿಳಿದುಕೊಂಡು ವಿಕಾರಗಳನ್ನು ಬದಿಗೊತ್ತಿ ವಿವೇಕದಿಂದ ಬಾಳಲು ಅಕ್ಷರ ಜ್ಞಾನ ಅಗತ್ಯವಿದೆ. ಲಿಪಿಯ ಅರಿವಿನ ಮೂಲಕ ಭಾಷಾಜ್ಞಾನವಾದರೆ ಸ್ವತಃ ಸಾಹಿತ್ಯಾಸಕ್ತಿ ಬೆಳೆಯುತ್ತದೆ. ಆ ಮೂಲಕ ಅರಿವು ಲಭಿಸಿ ಅನುಭವ ವಿಸ್ತಾರಗೊಳ್ಳುತ್ತದೆ. ಸಂಕುಚಿತ ಬುದ್ಧಿ ದೂರಾಗುತ್ತದೆ. ಈ ಸಂಗತಿಯನ್ನು ನಮ್ಮವರು ಅರ್ಥ ಮಾಡಿಕೊಳ್ಳಬೇಕು. ಸುತ್ತಲಿನ ಸಮಾಜವು ಸುಸಂಸ್ಕೃತವಾದಾಗ ಮಾತ್ರ ಸಾಮರಸ್ಯ ಬೆಳೆಯುತ್ತದೆ. ಶಾಂತಿ ಉಳಿಯುತ್ತದೆ. ಈ ಸದುದ್ದೇಶಕ್ಕೆ ನಾವೆಲ್ಲಾ ಸಹಕರಿಸಿ ದುಡಿಯಬೇಕು.

**ವಿನಯಾದಿತ್ಯ :–** ಜನ ತಿಳಿದೇ ಈ ವ್ಯವಹಾರ ಮಾಡಲಿ ಎಂದು ನಾವು ಕುಳಿತು ಹೇಳಿದ್ದರಿಂದ ಉಪಯೋಗವಾಗುವುದಿಲ್ಲ. ಈ ಅಕ್ಷರ ಪ್ರಸಾರ ಯೋಜನೆಗೆ ಕಟ್ಟಳೆಯನ್ನೆ ರೂಪಿಸುತ್ತೇನೆ. ಈ ಆಜ್ಞೆ ಎಲ್ಲರಿಗೂ ಅನ್ವಯಿಸುತ್ತದೆ.

**ರಾಗ : ಭೂಪಾಲಿ – ತಾಳ : ಝಂಪೆ**

**ಒಂದು ಸಂವತ್ಸರದೊಳು । ಸಾಕ್ಷರತೆ । ಹೊಂದಿ ನಲಿಯಲಿ ಪ್ರಜೆಗಳು ॥**
**ಮಂದಮತಿಯನು ತೋರಲು । ದುರ್ಮರಣ । ದಂಡನೆಗೆ ಒಳಗಾಹರು ॥**

**ವಿನಯಾದಿತ್ಯ :–** ಈ ಸಂವತ್ಸರವನ್ನು ಅಕ್ಷರಪ್ರಸಾರಕ್ಕೆಂದೇ ಮೀಸಲಿಡಬೇಕು. ಒಂದು ವರ್ಷದ ಅವಧಿಯಲ್ಲಿ ಒಬ್ಬರಿಗೊಬ್ಬರು ಸಹಕರಿಸಿ ಅಕ್ಷರದ ಅರಿವು ಪಡೆಯಲೆಬೇಕು. ಆ ಬಗ್ಗೆ ವಿದ್ಯಾವಂತರೂ, ಅಧಿಕಾರಿಗಳೂ, ನಾಗರಿಕರೂ ಸ್ವಯಂಸೇವಕರಾಗಿ ದುಡಿಯಬೇಕು. ಈ ವರ್ಷದ ಕೊನೆಗೆ ಈ ನಾಡಿನಲ್ಲಿ ಬರಹ ಬಾರದ ವ್ಯಕ್ತಿಗಳು ಇರಬಾರದು. ಅವಿವೇಕದಿಂದ ಈ ಆಜ್ಞೆಯನ್ನು ಅಲಕ್ಷಿಸಿದರೆ ಅವರಿಗೆ ಮರಣದಂಡನೆ. ಅವಕಾಶವಿದ್ದಾಗಲೂ ಅಕ್ಷರಸ್ಥರಾಗಲು ಬಯಸದ ಜನ ಬದುಕಲು ಅರ್ಹರಲ್ಲವೆಂದೇ ತೀರ್ಮಾನ. ಉತ್ತಮ ವೈದ್ಯರು ರೋಗಿಯ ಮೂಗು ಹಿಡಿದು ಬಾಯಿ ಕಳೆಸಿ ಔಷಧ ಹೊಟ್ಟೆಗೆ ಸೇರುವಂತೆ

ಮಾಡುತ್ತಾರೆ. ಶಸ್ತ್ರಕ್ರಿಯೆ ಅನಿವಾರ್ಯವಾದಲ್ಲಿ ರೋಗ ನಿವಾರಣೆಗೆ ಬಳಸಲೇಬೇಕು. ಸಾಂಸ್ಕೃತಿಕ ಸಂಪನ್ನತೆಯ ಬಗೆಗೆ ಸಾಂಸರ್ಗಿಕ ರೋಗ ನಿವಾರಣೆಗೆ ನಾವು ಯತ್ನಿಸುತ್ತಿದ್ದೇವೆ. ಹಾಗಾಗಿ ಕಠೋರ ಶಾಸನದ ಮೂಲಕ ಸಾಕ್ಷರತೆಯನ್ನು ಸಾಧಿಸಲೇಬೇಕು. ನಾಡಿನ ಮೂಲೆ ಮೂಲೆಗಳಿಗೂ ವಿದಿತವಾಗುವಂತೆ ಕಾರ್ಯಕ್ರಮಗಳನ್ನು ಬಿತ್ತರಿಸು.

ಕ್ಷೇಮಶೇಖರ :– ಸಾರ್ವಜನಿಕರ ಹಿತದೃಷ್ಟಿಯಿಂದ ಕೈಗೊಂಡ ಈ ಯೋಜನೆ ಮಂಗಳಪ್ರದವಾಗಿ ಜನಮನವನ್ನು ಬೆಳಗಲಿ.

**ಘವಳಾರ – ಏಕ**

**ಸುಲಲಿತ ಸುಂದರ ಬಿಂದು ರೇಖಾನ್ವಿತೆ । ಚಲುವಾಕ್ಷರ ಸಂದೋಹಿನಿಗೆ ॥ ಬಲುವಿನ ಕಾವ್ಯ ಸಾಹಿತ್ಯಾರಾಧಿತೆ । ನಲುಮೆಯ ಕನ್ನಡ ಸಿರಿದೇವಿಗೆ ॥ ಜಯವೆಂದಾರತಿಯ ಬೆಳಗೀರೆ ॥**

॥ ಮಂಗಲಂ ॥

**ಅವಧಿ–45 ನಿಮಿಷ**

**– ಮಂಜುನಾಥ ಭಾಗವತ ಹೊಸ್ತೋಟ**

**( ಹೆಗಡೆಕಟ್ಟಾದಲ್ಲಿ ಬರೆದಿದ್ದು.)**

**(ಬರೆದ ಅವಧಿ –1993/7/21 ರಿಂದ 1993/7/22)**

ಯಕ್ಷಗಾನ ಪ್ರಸಂಗ

# ಕನಕಾಕ್ಷಿ ಕಲ್ಯಾಣ ರತ್ನಾಂಗದ ಚರಿತ್ರೆ

(ಮೊದಲು ಪ್ರಚಲಿತವಿದ್ದ "ರತ್ನಾಂಗದ ಚರಿತ್ರೆ" ಯಕ್ಷಗಾನ ಕೃತಿಯ ಆಧಾರದಿಂದ ಸನ್ನಿವೇಶ, ಪಾತ್ರ, ಸೂತ್ರಗಳನ್ನು ಮಾರ್ಪಡಿಸಿ ಬರೆದದ್ದು)

ಯಕ್ಷಗಾನದ ವೇಷಭೂಷಣಗಳ ವೈಚಿತ್ರಮಯ ಪಾತ್ರಗಳ ಸಮ್ಮಿಲನವನ್ನು ಈ ಕೃತಿಯಲ್ಲಿ ಕಾಣಬಹುದು. ಕಪಿ, ಗಂಧರ್ವ, ಶಬರ, ರಕ್ಕಸ, ಸ್ತ್ರೀಬಣ್ಣ ಮುಂತಾದ ವೈವಿಧ್ಯಮಯ ಪಾತ್ರಗಳು ಈ ಕಥೆಯ ರಚನೆಗೆ ಮೂಲ ಪ್ರೇರಕ.

ಪಾತ್ರಗಳು:

* ತುಂಗಕೇತ * ವೀರಸೇನ * ಅಗಸ್ತ್ಯ * ಚಂದ್ರರೇಖೆ * ಋಕ್ಷರಾಜ
* ವಜ್ರಕೇತ * ಸುಮುಖ * ಮಂತ್ರಿ- ವಜ್ರಕೇತನ ಮಂತ್ರಿ ಸುಗುಣ
* ಕನಕಾಕ್ಷಿ * ಮಣಿವರ್ಮ * ರತ್ನಾಂಗದ * ಮರ್ಮುಖ * ಅಗ್ನಿನೇತ್ರ
* ಸುಲೋಚನ * ಗಂಧರ್ವಕನ್ಯೆಯರು
* ಯಮ * ಚಿತ್ರಗುಪ್ತರು * ಮೃತ್ಯು * ಈಶ್ವರ * ಚಾರಕರು
* ಪುರೋಹಿತರು * ಸೈನಿಕರು

ಭಾಮಿನಿ

ನಮಿಸಿ ವಿಘ್ನೇಶ್ವರನ ಪಾದಕೆ । ಸುಮತಿದಾಯಿನಿ ವಾಣಿಗೊಂದಿಸಿ । ಕಮಲನಯನ ಮಹೇಶ ವಿಧಿಗಳ ಸ್ಮರಿಸಿ ಭಕ್ತಿಯಲಿ ॥ ಸುಮನಸರ ಕೊಂಡಾಡಿ ಕವಿಗಳ । ಮಮತೆಯಿಂಧ್ಯಾನಿಸುತ ವಿವರಿಪೆ । ರಮಿಪ ರತ್ನಾಂಗದನ ಚರಿತೆಯ ಯಕ್ಷಗಾನದಲೀ ॥ ೧ ॥

**ರಾಗ–ಸೌರಾಷ್ಟ್ರ** **ತಾಳ–ತ್ರಿವುಡೆ**

ರಾಜಿಸುವ ಸೌರಾಷ್ಟ್ರದೇಶದ । ರಾಜನೆನಿಸುತ ತುಂಗಕೇತನು । ಓಜೆಯಿಂ ವಿಷ್ಠರದಿ ತಾನು ವಿರಾಜಿಸಿರ್ದಾ ॥ ೧ ॥ ವೀರಸೇನನೆ ಕೇಳು ಪ್ರಜೆ ಪರಿ । ವಾರ ಕುಶಲದೊಳಿಹರೆ ನಮ್ಮಯ । ಪಾರುಪತ್ಯದ ನೆಲೆಯ ಬಗೆಯನು । ಸಾರು ಮುದದೀ ॥ ೨ ॥ ಇಂದು ಸನ್ನಿಭನೃಪನೆ ರಾಜ್ಯದಿ । ಕುಂದಕಾಣೆನು ಪ್ರಜೆಗಳೆಲ್ಲರು । ತಂದೆಯೆಂದೇ ನಿನ್ನ ನಂಬಿಹರಿಂದು ಕೇಳೊ ॥ ೩ ॥

**ರಾಗ–ಕಾಫಿ** **ತಾಳ–ಅಷ್ಟ**

ಗುಣವಂತ ಸಚಿವ ಕೇಳಯ್ಯಾ । ಎನ್ನ । ಮನದೊಳು ಸೇರಿದ ಚಿಂತೆಯ ಬಗೆಯಾ ॥ ಕನಸಿನಂತಾಯ್ತು ಜೀವನವು । ನೋಡೆ । ತನಯರಿಲ್ಲವು ಗತಿಗೇನು ಸಾಧನವು ॥ ೧ ॥ ಅಷ್ಟೈಶ್ವರ್ಯಗಳಿದ್ದರೇನೂ । ಮತ್ತೀ । ಸೃಷ್ಟಿಯಾಳ್ವಿಕೆಯಿಂದ ಸಾರ್ಥವೇನು ॥ ನಷ್ಟವಾಯ್ತಲ್ಲ ಸದ್ಗತಿಯೂ । ನಮ್ಮ । ದೃಷ್ಟವೇನುಂಟೊ ಶಾಂತಿಯೊಳಿಲ್ಲ ಮತಿಯೂ ॥ ೩ ॥

**ರಾಗ–ಕಾಂಬೋದಿ** **ತಾಳ–ಏಕ**

ಅರಸಿ ಕೇಳು ಮನದೊಳಿಂತು । ಮುರುಗಲೇಕೆ ಕಾಲದಿರವ । ಅರಿವರಾರು ನಿನ್ನೊಳಿರುವ । ಕೊರತೆಯಲಿದೂ ॥ ೧ ॥ ಅರಿತು ನೀತಿ ಬಿಡದೆ ಜನರ । ಪೊರೆಯುತಿರುವೆ ಧರ್ಮಗುಣಕೆ। ಕೊರತೆಯಿಲ್ಲ ನಿನ್ನ ಪುಣ್ಯ । ಪೊರೆವು ದೆಂದನು ॥ ೩ ॥

**ಕಂದಪದ್ಯ**

ಇಂತಿವರಿರುತಿಹ ಸಮಯಕೆ । ಸಂತಸದಿಂ ಕಲಶೋದ್ಭವ ನಡೆತರೆ ಜನಪಂ ॥ ಮುಂತಾ ವಿಷ್ಟರ ವಿಳಿಯುತ । ಅಂತಕ ಭಯದೂರನ ಸತ್ಕರಿಸಿದ ಮುದದಿಂ ॥ ೧ ॥

**ರಾಗ–ಕಾಂಭೋದಿ** **ತಾಳ–ಝಂಪೆ**

ವರ ತಪೋನಿಧಿ ನಿನ್ನ ದರುಶನದಿ ಮಮ ಚಿಂತೆ । ಹರಿದು ಸಂತೋಷ ತೋರಿದುದು ॥ ದುರಿತ ತಮ ಕಳೆವೆ ಸುಜ್ಞಾನ ಭಾಸ್ಕರನೆ ತವ । ಚರಣಕೆರಗುವೆ ಪಾಲಿಸುವದೂ ॥ ೧ ॥ ಭೂಮಿಪಾಲನೆ ನಿನ್ನ ನೇಮನಿಷ್ಠೆಯಕಂಡು । ನಾ ಮನದಿ ತೋಷ ತಾಳಿದೆನೂ ॥ ಏ ಮಹೇಶ್ವರ ಮನದ ಸಂಕಲ್ಪ ಸಿದ್ಧಿಸಲಿ । ಸೋಮಶೇಖರ ಪಾಲಿಸುವನೂ ॥ ೨ ॥ ಧನ್ಯನಾದೆನು ಸ್ವಾಮಿ ಸುತರಿಲ್ಲ ವೆಂದೆನುತ । ಖಿನ್ನನಾಗಿರ್ದೆನೀವರೆಗೇ ॥ ಎನ್ನಿಷ್ಟ ಸಫಲವಾಯ್ತೈಸೆ ತವ ದಯದಿಂದ । ಇನ್ನೂ ಭಯವಿಲ್ಲ ಸದ್ಗುರುವೇ ॥ ೩ ॥

**ವಾರ್ಧಿಕ್ಯ**

ಧರಣಿಯೊಳು ಬಹುಕಾಲ ಜೀವಿಸುವ ತರಳನನು । ಅರಸ ನೀಬಯಸುವೆಯೊ ಕಿರಿದು ದಿನದೊಳೆ ಕೀರ್ತಿ । ಧರಿಸಿ ಮಡಿಯುವ ಸುತನ ಬಗೆಗೆ ಸಂತೃಪ್ತಿಯೋ ಅರುಹು ನಿನ್ನಯ ಮತವನೂ । ಹರನ ದಯದಿಂದ ಕ್ಷಿಪ್ರದಲಿ ನಿನ್ನಭಿಲಾಷೆ । ಪರಿಪೂರ್ಣವಹುದು ನಿನ್ನೆಣಿಕೆಯೇನೆಂಬುದನು । ಒರೆವುದಾಯುರ್ಮಾನವೋ ಕೀರ್ತಿಮಾನವೋ ನಿರ್ಧರಿಸಿ ನುಡಿಯೆಂದನೂ ॥ ೧ ॥

**ರಾಗ–ಸುರುಟಿ** **ತಾಳ–ಏಕ**

ಲಾಲಿಸು ಮುನಿಪಾಲಾ । ಸುಗುಣ ವಿ । ಶಾಲ ಸುಜನ ಶೀಲಾ ॥ ಬಾಳಿದರೇನ್ನೈ ಬಹುದಿನ ಕೀರ್ತಿಯ । ತಾಳದಿರಲು ನರ ಜೀವನ ನಿಷ್ಫಲ ॥ ೧ ॥ ರೂಢಿ ಪತಿಯೆ ಕೇಳು । ನೀ ನಿಂ । ದಾಡಿದ ರೀತಿಯೊಳು ಕೂಡಿದ ದೈವ ಸಹಾಯದಿ ಮಗನಹ । ಬಾಡದಿರ್ಕೈ ಶುಭವಹುದೆನು ತೈದಿದ ॥ ೨ ॥ ತರಳನುದಿಪನೆಂದು । ಹರುಷದಿ । ಧರಣಿ ಪಾಲನಂ ನಾ ॥ ತರುಣೀ ಮಣಿ ಶಶಿರೇಖೆಯೊಳೀ ನುಡಿ । ಅರುಹುವೆನೆನುತರ ಮನೆಗೈತಂದನು ॥ ೩ ॥

ತಾಳ–ಅಷ್ಟ

ಗುಣಮಣಿ ಚಂದ್ರರೇಖೆಯು ತನ್ನಗೃಹದೀ । ವಿನಯದೊಳಿರೆ ಶುಭಚರಿತೆ ಸಮ್ಮುದದಿ ॥ ಇನಯನ ಬರವನೀಕ್ಷಿಸಿ ತೋಷದಿಂದಾ । ಮಣಿದು ಮನ್ನಿಸಿ ಪೇಳ್ದಳೀರೀತಿಯಿಂದಾ ॥ ೧ ॥ ಅಹಹ ಇದೇನು ನಿಮ್ಮಾನನವಿಂದು । ಬಹುತೋಷ ಕಳೆಯೇರಿ ಶೋಭಿಸುತ್ತಿಹುದು ॥ ವಿಹಿತವಿಚಾರವೇನೊದಗಿದು ಮನಕೇ । ಸಿಹಿಯೊಳೆನಗೆ ಭಾಗನೀಡು ಪರಾಕೇ ॥ ೨ ॥ ಮತಿವಂತೆ ಕೇಳೆಮ್ಮ ಬಾಳಿನ ಬಗೆಗೇ । ವ್ಯಥಿಸುತಲೀರ್ದನೀದಿನ ಸಭೆಯೊಳಗೆ ॥ ಯತಿಪನಗಸ್ತ್ಯ ನೈತಂದು ಕೃಪೆಯಲೀ । ಸುತನಪ್ಪನೆಂದು ಪೇಳಿಹನು ಪ್ರೀತಿಯಲೀ ॥ ೩ ॥ ಅರಸ ಕೇಳೆಮ್ಮ ದಾಂಪತ್ಯ ಜೀವನದಾ । ಪರಿಪೂರ್ಣಫಲ ಸಿದ್ಧಿಸಿತು ಮುನಿಯಿಂದಾ ॥ ಮರುಕವು ದೂರಾಯ್ತು ಜೀವಿತೇಶ್ವರನೆ । ತರಳನಕಾಂಬ ಸುಕೃತ ತಂದೆ ನೀನೇ ॥ ೪ ॥

ಭಾಮಿನಿ

ನಲಿವಿನಿಂದಿರಲಿಂತು ಕೆಲದಿನ । ಕಳೆಯಲಾ ಶಶಿರೇಖೆ ಗರ್ಭವ । ತಳೆದಳೈ ಷಣ್ಮಾಸವುರಳಲು ತಿಳಿದು ಭೂಮಿಪನು ॥ ಒಲಿದು ಪುಂಸವನಾದಿಕ್ರಮಗಳ । ಇಳೆಯ ಮರರಿಂ ವಿರಚಿಸಲು ಸತಿ । ಕಳೆದು ನವಮಾಸಗಳ ಪಡೆದಳು ವಂಶವರ್ಧನನಾ ॥ ೧ ॥

ರಾಗ–ಸೌರಾಷ್ಟ್ರ ತಾಳ– ತ್ರಿವುಡೆ

ಅರಿತು ಪುತ್ರೋದಯದ ವಾರ್ತೆಯ । ಧರಿಣೀಪತಿ ತೋಷದಲಿ ಕರೆಸುತ । ಧರಣಿ ಬುಧರಿಂಜಾತ ಕರ್ಮವ । ಭರದೀಗೈಸೀ ॥ ೧ ॥ ಕರೆದು ರತ್ನಂಗದನೆನುತ ನಿಜ । ತರಳನನು ಭೂದಿವಿಜರನು ಸ । ತ್ಕರಿಸಿ ಪ್ರಜೆಗಳ ಹರುಷಪಡಿಸಿದ । ಅರಸ ನಲಿದು ॥ ೨ ॥ ಶ್ವೇತ ಪಕ್ಷದ ಶಶಿಯ ತೆರದಲಿ । ಪ್ರೀತಿಯಿಂಬಾಲಕನು ಬೆಳೆಯಲು । ಸಾತಿಶಯ ವಿದ್ಯಗಳ ಕಲಿಸಿದ । ಜಾತನಿಂಗೇ ॥ ೩ ॥

ರಾಗ– ಮಾರವಿ ತಾಳ–ಏಕ

ರತ್ನಾಂಗದ ತಾನೊಂದಿನ ತನ್ನಯ । ಚಿತ್ತದಿ ಯೋಚಿಸಿದಾ ॥ ಪೃಥ್ವಿಪರೊಳು ಸೆಣೆಸುತ ದಿಗ್ವಿಜಯದಿ । ಸತ್ವಮೆರೆಸಲೆನುತಾ ॥ ೧ ॥ ತಂದೆಯೊಳಪ್ಪಣೆ ಪಡೆಯುವೆ ಮಮಮನ । ದಂದ ನುಡಿವೆನವಗೇ ॥ ಇಂದೇ ತೆರಳುವೆನೆನುತಲಿ ತವಕದಿ । ಬಂದನು ಪಿತನೆಡೆಗೇ ॥ ೨ ॥ ಬಾರಿತ್ತಲು ಸುಕುಮಾರನೆ ಯೌವನ । ವೇರಿದೆ ನಿನಗೀಗಾ ॥ ಧಾರುಣಿಯೊಡೆತನ ನಿನಗೀಯುವೆ ಸುಖಿ । ಚಾರದಿ ಪೊರೆ ಬೇಗಾ ॥ ೩ ॥

ರಾಗ – ಮೋಹನ ತಾಳ–ಅಷ್ಟ

ಲಾಲಿಸುತಾತ ನೀನು । ಮನದಿರವನು । ಪೇಳುವೆನೀಗ ನಾನೂ ॥ ಮೇಲೆನಿಸುವ ಭೂಮಿಪಾಲರವರ್ಗವ । ಕಾಳಗದೊಳು ಗೆದ್ದುಬರುವೆನು ಕಳುಹಿಸು ॥ ೧ ॥ ವಿವಿಧ ರಾಜ್ಯಂಗಳನು । ಸಂಚರಿಸುತ । ವಿವರವ ಗ್ರಹಿಸುವೆನು ॥ ಬವರಕೆ ಬಂದರ ದಂಡಿಸಿ ಮನ್ನಿಸಿ । ದವರ ಸಖ್ಯವ ಪೊಂದಿಬರುವೆನು ಶೀಘ್ರದಿ ॥ ೩ ॥

ರಾಗ–ಸೌರಾಷ್ಟ್ರ ತಾಳ– ರೂಪಕ

ಮಗನೇ ಕೇಳು ಸರಸ ವೇನಿದು । ವಿಖ್ಯಾತರಾದ । ವಿಘಡ ನೃಪರ ಗೆಲಿದೂ ಬರುವದೊ ॥ ಬಗೆದ ಭಾವಲೇಸಿದಲ್ಲಿ ಚಿಗುರು ಮೀಸೆ ಬಲಿಯಲಿಲ್ಲ । ಸುಗುಣ ಕೇಳು ಸುಮ್ಮನಿಲ್ಲಿ ಸೊಗಸಿನಿಂದ ರಾಜ್ಯವಾಳು ॥ ೧ ॥ ಗುರುಪ್ರಸಾದ ವಿದ್ಯ ದಿಂದಲ್ಲೀ । ಭೂಮಿಪರ ಗೆಲಿದು । ತರುವೆ ಯಶವ ಸಹಸದಿಂದಲೀ ॥ ಬರಿದೆ ತಡೆಯಲೇಕೆ ತಂದೆ ಕರುಣಿಸಪ್ಪಣೆಯನು ಮುಂದೆ । ಪರಿಕಿಸೆನ್ನಬಗೆಯ ಹರಸಿಕಳುಹು ಸಮರಕೀಗ ॥ ೨ ॥

ಸಾಂಗತ್ಯ ತಾಳ–ರೂಪಕ

ಕಂದ ಕೇಳೆಲೊ ನಿನ್ನ ಜಾತಕ ಫಲದಿಂದ । ಬಂದುದೀಮತಿಯಿಂದು ನಿನಗೇ ॥

ಸಂದೇಹ ಮನಕಿಲ್ಲ ಪೋಗು ಸತ್ಕೀರ್ತಿಯ । ಹೊಂದು ನೀ ಸೇನೆಯ ಕೊಡುವೇ ॥ ೧ ॥ ವೀರಸೇನನ ಕೂಡಿ ಧಾರುಣಿಯೆಲ್ಲ ಸಂ । ಚಾರ ಮಾಡುತ ಸಂವತ್ಸರಕೇ ॥ ಸೇರಬೇಕಿಲ್ಲಿ ಮಾರಾರಿ ಕಾಪಾಡುವ । ಧೀರನಾಗೆಂದು ಮೈದಡವೇ ॥ ೨ ॥ ಬಂದು ರತ್ನಾಂಗದ ಮಾತೆಯ ಚರಣಕೆ । ವಂದಿಸಿ ವಿನಯದಿ ನಿಲಲು ॥ ಬಂದೆಯಾ ಬಾರೆನ್ನ ಕಣ್ಮಣಿ ಬಾರೆಂದು । ಅಂದವಳಾಲಿಂಗಿಸಿದಳೂ ॥ ೩ ॥

**ರಾಗ–ಶಂಕರಾಭರಣ** **ತಾಳ–ತ್ರಿವುಡೆ**

ತಾಯೆ ಲಾಲಿಸು ಧರಣಿಯಾಳುವ । ರಾಯರಲಿ ಸಂಗ್ರಾಮಕೇ ॥ ಆಯದಿಂ ಪೊರಟಿರುವೆ ನೇಮವ । ಪ್ರೀಯದಿಂ ಕೊಡು ವಿಜಯಕೇ ॥ ೧ ॥ ಮಗನೆ ನಿನ್ನಯ ಮತವಿದಕೆ ನಾ । ನಗಲೆ ವ್ಯಥೆಯನು ತಾಳಲೇ ॥ ಬಗೆಯು ಲೇಸಲ್ಲೆನಲು ಕೀರ್ತಿಯು । ಸಿಗುವದೇ ಬರಿದೀರ್ದರೇ ॥ ೨ ॥ ಅನುದಿನವು ಆ ಶಿವನ ಕರುಣೆಯು । ಘನತೆಯಿಂ ಕಾಪಾಡಲೀ ॥ ತನಯ ಜವದಲಿ ಪೋಗಿಬಾ ಜಯ । ವನಿತೆ ನಿನ್ನವಳಾಗಲೀ ॥ ೩ ॥

**ರಾಗ– ಹಿಂದೋಳ** **ತಾಳ–ಝಂಪೆ**

ಜನನಿಯನು ಬೀಳ್ಗೊಂಡು ಜನಪಾಲಸುತ ಬಳಿಕ । ವಿನಯದಿಂ ಸಚಿವನೊಳು ಇನಿತು ಪೇಳಿದನು ॥ ೧ ॥ ದಕ್ಷಿಣದ ದಿಸೆಯನು ಪ್ರದಕ್ಷಿಣೆಯಗೈಯ ಬೇ । ಕೀಕ್ಷಣವೆ ನಡೆಯಲಿ ಪರೀಕ್ಷೆಯಲಿ ದಳವು ॥ ೨ ॥ ಅಂಗನೃಪನನು ಗೆಲಿದು ಸಂಗರದಿ ಸೆಣೆಸಿ ಕಾ । ಳಿಂಗನೃಪ ಬರ್ಬರರ ಭಂಗಗೊಳಿಸುತಲೀ ॥ ೩ ॥ ತುಂಗಕೇತನ ಸುತನು ತುಂಗಭದ್ರಾ ತಟದಿ । ಕಂಗೊಳಿಪ ಪುರವ ಕಂಡೆಂದ ನೀ ತೆರದೀ ॥ ೪ ॥

**ರಾಗ– ಸೌರಾಷ್ಟ್ರ** **ತಾಳ– ಅಷ್ಟ**

ಅರೆರೇ ಏನಚ್ಚರಿ ಈ ಪುರ ಯಾರದು । ಮಂತ್ರೀ ಪೇಳೂ ॥ ಇಲ್ಲಿ । ನರರ

ಸಂಚರಣೆಯ ನಾ ಕಂಡುದಿಲ್ಲವು । ಮಂತ್ರಿಕೇಳು ॥ ೧ ॥ ಗಿರಿಯ ಮಧ್ಯದೊಳಿಂತು ಜೀವಿಪ ದೊರೆಯಾರು । ಮಂತ್ರೀ ಪೇಳು ॥ ನಮ್ಮ । ಧುರಕೆ ಮಾರ್ಮಲೆಯುವ ಸಾಹಸಿಯೇ ನಿವ । ಮಂತ್ರೀ ಪೇಳು ॥ ೨ ॥ ಕಿಷ್ಕಿಯೆನ್ನುವ ಕಪಿಗೈದನೀ ನೆಲೆಯನು । ವೀರಕೇಳು ॥ ಬಲು । ನಿಷ್ಠೆಯೊಳವನ ವಂಶಜರು ಬಾಳುವರಿಲ್ಲಿ ವೀರಕೇಳು ॥ ೩ ॥ ರೂಪದಿ ಮರ್ಕಟರಾದರು ನಿಪುಣರು । ವೀರಕೇಳು ॥ ತಾವ್ ಪ್ರತಾಪಿಗಳೆಮ್ಮನು ಕೆಣಕದೆ ಬಿಡರಯ್ಯ । ವೀರಕೇಳು ॥ ೪ ॥

**ರಾಗ–ಸೌರಾಷ್ಟ್ರ** **ತಾಳ–ತ್ರಿವುಡೆ**

ಕಾಣುತೀ ನೃಪಸುತನ ಸೇನೆಯ । ವಾನರರು ಕಲ್ಮರಗಳಿಂದಲೀ । ಹಾನಿಗೊಳಿಸುತ ಇರಲು ಮಂತ್ರಿಯು । ತ್ರಾಣದಿಂದಾ ॥ ೧ ॥ ಕುಲಿಶ ಶರದಿಂದಗ್ನಿ ಬಾಣದಿ । ಬಲವ ನಿಗ್ರಹಿಸುತಿರೆ ಕಾಣುತ । ಬಳಲಿ ಹರಿಭಟರೋಡಿದರು ತಾ । ವಳಲು ತಾಗಾ ॥ ೨ ॥ ಹರಶರಣನಾ ಋಕ್ಷರಾಜನು । ಮೆರೆವ ಓಲಗದೊಳಗೆ ತಾನಿರು । ತಿರಲು ಕಪಿಬಲದೇಳಿಗೆಯ ಪರಿ । ಸ್ಮರಿಸುತಂದು ॥ ೩ ॥ ಘಾಯವಡೆದಿಹ ಪ್ಲವಗನೋರ್ವನು । ಆಯಸದಿ ವಂದಿಸಲು ಕೀಶರ । ರಾಯನೀಕ್ಷಿಸಿ ಕೇಳ್ದ ನಡೆದಿಹ । ಕಾಯಕವನು ॥ ೪ ॥

**ತಾಳ–ಏಕ**

ಕಪಿಕುಲ ಪತಿಕೇಳು । ಬಂದಿದೆ । ಉಪಟಳವಿಂದಿನೊಳು ॥ ವಿಫುಲ ಬಲವ ನೆರಹುತ ಸೌರಾಷ್ಟ್ರದ । ನೃಪಸುತನಿಲ್ಲಿಗೆ ನಡೆತಂದಿರುವನು ॥ ಪ ॥ ಭಾರಿಯ ಧನುವನು ಪಿಡಿದಿಹರೆಲ್ಲ । ವೀರರು ಸುಳ್ಳಲ್ಲಾ । ತೋರುವ ವನವನು ಹೊಕ್ಕಿಹರಲ್ಲಾ । ತಡೆದರು ಬಿಡಲಿಲ್ಲಾ ॥ ಹಾರಿಸಿದೆವು ಗಿರಿಮರಗಳ ಗಣಿಸದೆ ಕ್ರೂರತನದಿ ಬಲವಳಿಸಿದರಲ್ಲಾ ॥ ೧ ॥

**ರಾಗ–ಮಾರವಿ** **ತಾಳ–ಏಕ**

ಏನಿದು ನಮ್ಮ ನಿವಾಸಕೆ ಬಂದನೆ । ಮಾನವಸುತ ಭಳಿರೇ ॥ ತ್ರಾಣದಿ ಸೇನೆಯ

ಹಾನಿಯಗೈದನೆ । ಕಾಣುವೆ ಬಲು ಹರರೇ ॥ ೧ ॥ ಪರರಿಗುಪದ್ರವಗೈಯ್ಯದೆ ನಾವೀ । ಗಿರಿಯೊಳು ಇರುತಿರಲೂ ॥ ನರರೇ ನಮ್ಮನು ಕೆಣಕುತಲಿರುವರೆ । ಅರಿಯಲಿದೇನ್ ಮರುಳು ॥ ೨ ॥ ಬಾರೆಲೊ ಸುಮುಖನೆ ನಮ್ಮಯ ಬಲವನೀ । ಸೇರಿಸು ತಡವೇಕೆ ॥ ಪೋರಗೆ ಶೌರ್‍ಯವ ತೋರಿಸಲೀಕ್ಷಣ । ಸಾರಿರಿ ರಣಕಣಕೇ ॥ ೩ ॥ ಕರದಲಿ ಗಿರಿಶಿಲೆ ತರುಗಳ ಧರಿಸುತ । ಭರದೊಳು ಬಂದಾಗ ॥ ಧುರಕನುವಾಗಲು ಸಚಿವನು ಸುಮುಖನಿ । ಗೊರೆದನು ತಾ ಬೇಗಾ ॥ ೪ ॥

**ರಾಗ–ಕೇದಾರಗೌಳ** **ತಾಳ– ಝಂಪೆ**

ಯಾರು ನೀನೆಲೋ ವಾನರಾ । ಪಣ್ಮರವ । ಹಾರಿದಂತಲ್ಲ ಬವರಾ ॥ ಸಾರು ನೀ ಪಲ್ಗಿರಿಯದೇ । ನಿನ್ನಾಯ । ತೀರಿಸುವೆನಿಂದು ಧುರದೇ ॥ ೧ ॥ ಜಾತಿಯೊಳು ಕಪಿಗಳಹೆವು । ಮತ್ತೆಮ್ಮ । ನೀತಿಯೊಳು ತಪ್ಪಿದಿಹೆವು ॥ ಈ ತೆರದಿ ಬಂದು ನೀವೂ । ಕೆಣಕಿದರೆ । ಭೂತಳದೊಳಿಲ್ಲ ಠಾವು ॥ ೨ ॥ ಧರೆಯ ದಿಗ್ವಿಜಯ ಕೆನುತಾ । ಬಂದಿಹೆವು । ಭರಿತ ಸೇನೆಯ ಕೂಡುತಾ ॥ ಹರಿಕುಲಜರಾದ ನೀವು ಬರಿದೆಮ್ಮ । ತರುಬಿ ಪಡೆಯುವಿರಿ ಸಾವು ॥ ೩ ॥ ನಮ್ಮ ನೆಲೆಯನು ಸೇರುತಾ । ಕೆಡಿಸಿದಿರಿ । ನಿಮ್ಮಗರ್ವವ ತೋರುತಾ ॥ ಒಮ್ಮೆ ತಡೆದಿಹ ಪಡೆಯನು । ಗೆಲಿದಿರುವ । ಹಮ್ಮ ನಿಲಿಸುವೆನೆಂದನು ॥ ೪ ॥

**(ಯುದ್ಧವಾಗಿ ಸುಮುಖನ ಸೋಲು )**

**ರಾಗ–ಕೇದಾರಗೌಳ** **ತಾಳ–ಅಷ್ಟ**

ಧರಣಿಪಾತ್ಮಜನನ್ನು ಕಾಣುತ್ತ ತಡೆದೆಂದ । ಭರದೊಳಾ ಋಕ್ಷರಾಜ ॥ ಅರುಹು ನೀನ್ಯಾರು ನಿನ್ನಯ ಪುರವಾವುದು । ಹರಿತಂದುದೇನು ಕಾರ್‍ಯ ॥ ೧ ॥ ಕೇಳೋ ಸೌರಾಷ್ಟ್ರೇಶನಹ ತುಂಗಕೇತನ । ಬಾಲರತ್ನಾಂಗದನು ॥ ಕಾಳಗದೊಳು ಭೂಮಿಪಾಲರ ಗೆಲಿಯುವ । ಲೀಲೆಯೋಳ್ಳೈ ತಂದನು ॥ ೨ ॥ ಚಿಕ್ಕವ ನೀನಹೆ ತಕ್ಕುದೆಲ್ಲವು ರಣ । ಸೊಕ್ಕಿನ ಕಾರ್‍ಯವಿದು ॥ ಅಕ್ಕರೆಯಿಂದ ಹಿಂದಿರುಗು

ಸಂಗ್ರಾಮದಿ । ದುಃಖ ಒದಗಬಹುದು ॥ ೩ ॥ ನರನಲ್ಲದಿಹ ನೀನು ಗಿರಿಯ ಮಧ್ಯದೊಳಿಂತು । ಪುರವನು ವಿರಚಿಸುತಾ ॥ ಅರಸನಾಗಿರುವದಚ್ಚರಿಯು ಈ ಪರಿಯಲಿ । ವೆರೆಬಂದೆ ಧುರಕೆನು ತಾ ॥ ೪ ॥ ನಮ್ಮ ಪೂರ್ವಜರಿಲ್ಲಿ ನೆಲೆಗೈದು ಕಪಿಗಳ । ತಮ್ಮ ನೀತಿಯೋಳಾಳ್ವರು ॥ ನಿಮ್ಮವರಲ್ಲದೊಡೇನು ಜೀವಿಸುವುದು । ಬ್ರಹ್ಮನ ಲಿಖಿತವದು ॥ ೫ ॥ ಕರಡಿ ಕಪಿಗಳೆಲ್ಲ ದೊರೆತನ ಗೈವುದು । ಪರಿಹಾಸ್ಯವೆನಿಸುವದು । ನರರನು ಕರುಣೆಯ ವಿರಚಿಸಿದರೆ ಸರಿ । ಬರ್ಪುವದೆ ಧರ್ಮಕಿದು ॥ ೬ ॥ ಬಾಳಿನಾಚರಣೆಯು ನಿಯಮ ಬದ್ಧತೆಗಿದೆ । ಅಳುವಿಕೆಯು ನಿಜವು ॥ ಪೇಳಿ ಬುದ್ಧಿಯ ನಮ್ಮ ಕುಲವ ತಿದ್ದುತಲಿಹೆ । ಕೀಳಲ್ಲವೀ ಮನವು ॥ ೭ ॥ ಬಾಪುರೇ ಕುಲದಲಿ ಚಾಪಲ್ಯರೆನಿಪರ । ಭೂಪನೆ ರಣಕಣಕೇ ॥ ಕೋಪದಿ ಬಂದೆಯಾಟೋಪವು ಸಲ್ಲದು । ಪೋಪುದು ತವ ಗೃಹಕೆ ॥ ೮ ॥

**ರಾಗ–ಶಂಕರಾಭರಣ** **ತಾಳ–ಮಟ್ಟೆ**

ಕಪಿಗಳೆಮ್ಮ ಕುಲದ ಭಾವ । ಚಪಲವೆಂದು ಜರೆದೆಯಲ್ಲ । ನೃಪರ ಗೆಲಲು ಪೊರಟ ಮನದ । ಗುಪಿತವೇನೆಲಾ ॥ ೧ ॥ ಅರಸು ನೀತಿಯಂತೆ ಪೊರಟೆ । ಧರೆಯ ವಿಜಯಕೆನುತ ನೀನು । ಧುರಕೆ ನಿಲಲು ಕೆಡುವೆ ಶರಣು । ಬರಲು ಕಾಯುವೇ ॥ ೨ ॥ ಪರರ ಧನವ ಬಲದಿ ಸೆಳೆವ । ಪರಿಯ ನೀತಿಯೆನುತ ನಡೆವ । ಮರುಳು ತನಕೆ ತಕ್ಕ ಶಿಕ್ಷೆ । ಧುರದಿ ನೀಡುವೇ ॥ ೩ ॥ ವೀರತನಕೆ ಒಲಿದು ಫಲವ ಭೋರನೀವಳೀ ಧರಿತ್ರಿ । ಶೌರ್ಯವಿರಲು ಧುರದಿ ಜಾಣ್ಮೆ । ತೋರು ಎನ್ನೊಳೂ ॥ ೪ ॥

## ವಾರ್ಧಿಕ್ಯ

ಬಳಿಕವರು ತ್ರಾಣದಿಂ ಹಳಚಿದರು ಧುರದೊಳಗೆ । ಮಳಿದು ಕಾದಾಡುತಿರೆ ತಿಳಿದು ರತ್ನಾಂಗದಂ । ಸಲೆ ರುದ್ರಶಕ್ತಿ ಬಿಡೆ ಋಕ್ಷರಾಜಂ ಮೂರ್ಛೆತಳೆದೊರಗಿದಂ ಧರೆಯೊಳು ॥ ನೆಲೆಬಾಹ್ಯ ವಿಸ್ಮೃತಿಯೊಳೊಲಿದಾ ಮಹೇಶ್ವರಂ ಕೊಳುಗುಳವು

ತರವಲ್ಲ ಇಳೆಯ ಪತಿಸುತನೆನಗೆ । ಸಲುವ ಶರಣನು ಸಾಮ ಒಳಿತೊಂದು ಸೂಚಿಸಲ್ ಎಚ್ಚರಿತು ಬಳಿಕೆಂದನು ॥ ೧ ॥

**ರಾಗ–ಜಂಜೋಟಿ** **ತಾಳ–ಅಷ್ಟ**

ವೀರ ರತ್ನಾಂಗದ ಕೇಳೂ । ಧುರ । ಶೌರ್ಯವೇತಕೆ ಕ್ಷಮೆ ತಾಳೂ ॥ ಮಾರಾರಿ ಶರಣ ನೀನೆಂಬ ವಿಚಾರವ । ಘೋರ ನರಿತೆನು ಮೂರ್ಖೆಯಲಿ ತವ । ವೈರ ಮರೆತೆನು ಕರವ ಮುಗಿಯುವೆನು ॥ ೧ ॥ ಕುಲದೈವ ಪಶುಪತಿ ನಮಗೇ । ಪರಿ । ತಿಳಿಯಿತು ಅವನಿಂದ ಕಡೆಗೇ ॥ ಬಲವಂತ ನಿನ್ನಯ ಗೆಳೆತನ ಒದಗಿತು । ನಿಲಿಸುವೆನು ಸಂಗ್ರಾಮುದೆತ್ನವ । ಸಲಿಸುವೆನು ಕಪ್ಪವ ಸಾಮದಿ ॥ ೨ ॥ ರಣವ ನಿಲ್ಲಿಸಿ ನೃಪಸುತನು । ಬಲು । ಗುಣದಿ ಮನ್ನಿಸಿ ಕಪೀಂದ್ರನನು ॥ ಮನದಿ ಸಂತಸವಾಯ್ತು ಪೋಗುವೆ ಮುಂದಕೆ । ಜನಪರಳವಿಯ ಗೆಲಿದು ಶೀಘ್ರದಿ । ಜನಕ ನಡೆಯನು ಸೇರಬೇಕ್ಕೈ ॥ ೩ ॥

**ಕಂದಪದ್ಯ**

ಸರಸದಿ ನೃಪಸುತ ಮುಂದಕೆ । ಹರಿತರಲುತ್ತರ ದಿಸೆಗಂಬಲ ಸಹಿತಾಗಳ್ ॥ ಪರಿಪರಿ ದೇಶವ ನೀಕ್ಷಿಸಿ । ಭರದೊಳ್ ಮುಂದಕೆ ಬಲಸಹ ತಾನಡೆತರು ತಿರ್ದಂ ॥ ೧ ॥

**ರಾಗ–ಕಾಂಬೋದಿ** **ತಾಳ–ಝಂಪೆ**

ಇತ್ತಲಾ ಕಾಂಭೋಜ ಪಟ್ಟಣವನಾಳುತ್ತ । ಪೃಥ್ವಿಪಾಲಕ ವಜ್ರಕೇತಾ ॥ ನಿತ್ಯನಿಯಮದಿ ಸಭೆಯೊಳೆಸೆದಿರಲು ಸಚಿವಸಹ । ಭೃತ್ಯನೋರ್ವನು ಮಣಿದು ಪೇಳ್ದಾ ॥ ೧ ॥ ಕೇರಳಾಧಿಪನು ಮಣಿವರ್ಮ ನಿನ್ನಡೆಗೆನ್ನ । ಭೋರನೇ ಕಳುಹಿದನು ದೊರೆಯೇ ॥ ಚಾರುಲೇಖನವೊಂದ ನಿತ್ತಿಹನು ಉತ್ತರವ । ಸಾರು ನೀ ದಯದೊಳೆಂದೊರೆಯೇ ॥ ೨ ॥ ಎನಲು ಲಿಖಿತವನೋದಿ ಜನಪನಿಂತೆಂದ ಮನ । ದನುವ ಸೂಚಿಪೆ ನಾಳೆ ನಿನಗೇ ॥ ದಿನಪ ನಸ್ತದ ಸಮಯ ಸನ್ನಿಹಿತ ವಾಯ್ತೆನುತ । ಘನತೆಯಿಂ ಬಂದನರಮನೆಗೆ ॥ ೩ ॥

ರಾಗ–ಮಧ್ಯಮಾವತಿ ತಾಳ–ತ್ರಿವುಡೆ

ಜನಪನಂದನೆ ಕನಕಲೋಚನೆ । ವನಿತೆಯರೊಳತಿ ಚಲುವೆ ತಾನರ । ಮನೆಯೊಳೆಸೆದಿರೆ ನಡತೆಯೊಳು ಗುಣ । ಮಣಿಯು ಎನಿಸೀ ॥ ೧ ॥ ಸುತೆಯೆಡೆಗೆ ನಡೆತಂದು ಭೂಮಿಪ । ಚತುರೆ ನಿನ್ನಿರವರಿಯೆ ಬಂದಿಹೆ । ಮತಿಯುತೆಯೆ ಸಂಭವಿಸಿರುವ ಸಂಗತಿಯ ನೊರೆವೇ ॥ ೨ ॥ ಚಲುವೆ ನಿನ್ನನು ಬಯಸಿ ಪತ್ರವ । ಕಳುಹಿದನು ಮಣಿವರ್ಮ ತವಮನ । ದೊಲವರಿತು ಬದಲುತ್ತರವನಾ । ಸಲಿಪೆನೆನಲು ॥ ೩ ॥

ತಾಳ–ಏಕ

ಕೇಳು ಜನಕ ಮಮವಚನ ಕರುಣೆಯಲೀ । ಕೇರಳ ದೇಶಾಧಿಪ । ಖೂಳನೆನುವ ನುಡಿ ಹಬ್ಬಿದೆ ಜನತೆಯಲೀ ॥ ಬಾಳುವಿಕೆಗೆ ಸೊಗಸಬಹುದೇ ನೋಡಲು । ಶೀಲವಿವರ್ಜಿತ ಮನುಜರ ಸಂಗವು ॥ ೧ ॥ ಬೆಳೆಸಿದೆ ಎನ್ನನು ಶುಭ ಸಂಸ್ಕಾರದಲೀ ॥ ಈ ವಿಧಿಗೆಂತೊಪ್ಪಲಿ । ಕಳವಳಿಪುದು ಮನ ಸಿಲುಕಿ ವಿಚಾರದಲೀ ॥ ತಿಳಿದವ ನಿನಗೇನರುಹಲಿ ಪ್ರತಿಮತ । ತಳೆದಿಹಳೆನುತಲಿ ಧಿಕ್ಕರಿಸದಿರೈ ॥ ೨ ॥

ರಾಗ–ಶಂಕರಾಭರಣ ತಾಳ–ರೂಪಕ

ತರಳೆಕೇಳೆ ನಿನ್ನ ಮನವ । ಅರಿತೆ ನೀಗಳೂ ॥ ದುರುಳ ಕೇರಳೇಶನವನ । ಚರಿತೆಯರಿಯಲೂ ॥ ೧ ॥ ಖಾತಿಗೊಳದ ತೆರದಿ ಲಿಖಿತ । ದೂತ ಗೀಯುವೇ ॥ ನೀತಿಮರೆ ತರವನ ಬಗೆಗೆ । ಭೀತಿಯಿಲ್ಲವೇ ॥ ೨ ॥

ಭಾಮಿನಿ

ಸುತೆಯ ಬೀಳ್ಕೊಂಡಾಗ ಧರಣಿಪ । ಕ್ಷಿತಿಪತಿಯ ಲೇಖನಕೆ ಪ್ರತಿಯನು ಹಿತದಿ ಸೂಚಿಸಿ ಬರೆದು ಮರುದಿನ ರಾಜ ಸಭೆಯೊಳಗೇ ॥ ಚತುರ ದೂತನಕರೆದು ಮನ್ನಿಸಿ । ಧೃತ ಲಿಖಿತವಿತ್ತಾಗ ಕಳುಹಲು । ಅತಿ ಜವದಿ ನಡೆತಂದ ಕೇರಳ

ನಗರಿಗಾಕ್ಷಣದಿ ॥ ೧ ॥

**ರಾಗ– ನಾದನಾಮಕ್ರಿಯೆ** **ತಾಳ–ಅಷ್ಟ**

ನಿತ್ಯ ನೇಮದಿ ಮಣಿವರ್ಮನೂ । ಸಿಂಹ । ವಿಷ್ಟರದಲ್ಲಿ ತಾನಿರ್ದನೂ ॥ ದಿಟ್ಟನಾ ಕಾಂಬೋಜಪಾಲಕಾ । ತನ್ನ । ಇಷ್ಟವೇನೆಂದನೋ ಎನ್ನುತಾ ॥ ೧ ॥ ಚರಬಂದು ಮಣಿದು ಲೇಖನವನೂ । ನೀಡೆ । ಅರಸ ತಾ ವಾಚಿಸುತದರನೂ ॥ ಧರಿಸುತ ಮನದೊಳು ಖತಿಯನು । ತನ್ನ । ವರೊಳೆಂದ ತನ್ನಭಿಮತವನು ॥ ೨ ॥ ಅರರೆ ಗರ್ವದಿ ವಜ್ರಕೇತನು । ತನ್ನ । ತರಳೆಯ ನೀಡೆನೆಂದಿರುವನು ॥ ಧುರದೊಳಾತನ ಸೋಲಿಸುತ್ತಲೀ । ಮತ್ತಾ । ತರುಣಿಯನೆಳೆತಹೆ ಶೋಧಿಸೀ ॥ ೩ ॥ ಕರೆಯಿರೋ ನಮ್ಮಯ ಸೇನೆಯಾ ॥ ತನ್ನೀ ತುರಗವರೂಥವ ಆನೆಯಾ ॥ ತೆರಳಲಿ ಕಾಂಭೋಜ ನಗರಕೆ । ವೈರಿ । ಯರಿಯದ ಮೊದಲು ಸಂಗ್ರಾಮಕೇ ॥ ೪ ॥

**ರಾಗ– ಸವೈ** **ತಾಳ–ಏಕ**

ಭರದೊಳು ಕುಲಿಶ ಪತಾಕನ ಚರಣಕೆ । ಚರನೋರ್ವನು ತಾ ವಂದಿಸುತಾ ॥ ಪರಿಪರಿ ವಾರ್ತೆಯು ವಿವರವನರುಹುವೆ । ದೊರೆಯೆ ವಿಚಾರದಿ ಕೇಳೆನುತಾ ॥ ೧ ॥

**ರಾಗ– ಮುಖಾರಿ** **ತಾಳ–ಏಕ**

ಜನಪಾ ನೀ ಲಾಲಿಸೆನ್ನ ಮಾತಾ । ಸಂಕಷ್ಟ ಕಾಲ । ಜನಿಸಿತಿನ್ನೇನ ಪೇಳ್ವೆ ಖ್ಯಾತಾ ॥ ಎಣಿಸಲು ಭಯವ್ವೆ ಮಣಿವರ್ಮನುತಾ । ಅನುವರ ಕೈತಹೆನೆನುವದ ನರಿತೆನು ॥ ಪ ॥ ಮತ್ತೊಂದುವಾರ್ತೆ ತಿಳಿದೆವಯ್ಯಾ । ಸೌರಾಷ್ಟ್ರ ಪತಿಯ । ಪುತ್ರಾ ದಿಗ್ವಿಜಯಕೆನುತಾ ಜೀಯಾ । ಸತ್ವದಿ ಸಮರದಿ ಪೃಥ್ವಪನಿವಹವ । ಕುತ್ತಿಕೆಡಹಿ ಮುಂದೊತ್ತಿ ಬಲವುಸಹ । ಮತ್ತೀಪುರವನು ಮುತ್ತಲು ಯೋಚಿಸಿ । ಹತ್ತಿರ ಬಂದಿಹ ಮತ್ತೇನ್ ಗೈವುದು ॥ ೧ ॥

**ರಾಗ–ಕೇದಾರಗೌಳ** **ತಾಳ–ಅಷ್ಟ**

ಅರಿತೆಯ ಮಂತ್ರಿ ಮುಂದೇನ ಗೈವುದು ನಾವು । ಭರಿತ ಸಂಕಷ್ಟ ಬಂತು ॥ ಅರಸರೀರ್ವರ ದಾಳಿ ತಡೆವ ಶಕ್ತಿಯು ನಮ । ಗಿರುವುದೆ ಭಾಗ್ಯ ಸಂತು ॥ ೧ ॥ ಭೂಮಿಪಾಲನೆ ಕೇಳೀಗೊಂದು ಉಪಾಯದಿ । ಕ್ಷೇಮದೊಳಿರ ಬಹುದು ॥ ಸಾಮದೊಳಾ ರತ್ನಾಂಗದನ ಸನ್ನಿಧಿಗೈದೆ । ತಾ ಮನ್ನಿಸುವನಹುದು ॥ ೨ ॥ ಬಳಕೀರ್ವರೊಂದಾಗಿ ಕೇರಳ ಪಾಲನ । ಬಲವನ್ನು ಮುರಿಯ ಬೇಕು ॥ ಕಳವಳಿಸಲು ಕಾಲವೆಲ್ಲಿದೆ ತವಮನ । ದೊಲವ ಸೂಚಿಸಲು ಬೇಕು ॥ ೩ ॥ ಮತಿಯುತ ನೀನೆ ಸಂಧಾನಕೆ ಆ ನೃಪ । ಸುತನೆಡೆಗೀಗ ಪೋಗು ॥ ಅತಿಶಯದುಡುಗೊರೆ ವಸ್ತು ಸಹಿತ ಘನ । ರಥವೇರಿ ವೇಗದೊಳು ॥ ೪ ॥

**ರಾಗ–ಸೌರಾಷ್ಟ್ರ** **ತಾಳ–ತ್ರಿವುಡೆ**

ಇತ್ತ ರತ್ನಾಂಗದನು ಬಲಸಹ । ಅರ್ತಿಯಿಂ ಬರುತಿರ್ದ ಮುಂದಕೆ । ವಿಸ್ತರದ ಕಾಂಭೋಜನಗರವ । ಮುತ್ತುತಿಂದು ॥ ೧ ॥ ಕುಲಿಶಕೇತನ ಸಚಿವನಾತನ । ಬಳಿಗೆ ಸಾರುತ ನಮಿಸಿ ಉಡುಗೊರೆ । ಸಲಿಸಿ ನಿಂದಿರೆ ರತ್ನಕಾಯನು । ಒಲಿದು ನುಡಿದಾ ॥ ೨ ॥ ಯಾರು ನೀನೆಲೊ ನಮ್ಮ ನೀನಡು । ದಾರಿಯೊಳು ಮನ್ನಿಸುವೆ । ನಿನ್ನ ವಿ । ಚಾರ ನುಡಿ ನಮ್ಮಿಂದಲಾಗುವ ಕಾರ್ಯವೇನು ॥ ೩ ॥

**ರಾಗ–ಕಲ್ಯಾಣ** **ತಾಳ–ಅಷ್ಟ**

ಗುಣವಂತ ನೃಪಜಾತನೇ । ನಮ್ಮೊಳು ಮನ । ದನುರಾಗ ವಿಡುಖ್ಯಾತನೆ ॥ ಘನವಂತ ಕಾಂಭೋಜ ಪಾಲನ ಮಂತ್ರಿನಾ । ಎಣಿಸಿ ಬಂದಿಹ ಕಾರ್ಯದನುವನು ಸೂಚಿಪೆ ॥ ೧ ॥ ಮಣಿವರ್ಮನೆಂಬಾತನು । ಕೇರಳ ಪತಿ । ಜನಪ ಕುಮಾರಿಯನು ॥ ತನಗೀಯ ಬೇಕೆನೆ । ಮನವಿಲ್ಲ ವೆಂದರೆ । ರಣಕೆ ತಾ ಬರುತಿರ್ಪ । ಘನಬಲ ಸಹಿತಲಿ ॥ ೨ ॥ ಧರೆಯ ದಿಗ್ವಿಜಯಕೆಂದು। ನೀ ಬರುತಿರ್ಪ । ಪರಿಯದು ತಿಳಿಯಿತಿಂದು ॥ ಪರಮ ಸುಗುಣ ನೀನು ನೆರವಾಗಿ

ವೈರಿಯ । ಧುರದಿನಿಗ್ರಹಿಸುತ ಪರಿಪಾಲಿಸೆಮ್ಮನು ॥ ೩ ॥

**ರಾಗ–ಭೈರವಿ** **ತಾಳ–ಏಕ**

ಭಯ ಬಿಡು ಮಂತ್ರಿಯೆ ಇನ್ನೂ । ದು । ರ್ನಯನಾ ಮಣಿವರ್ಮನನೂ ॥ ಜಯಿಸುವೆ ಸಂಗರದಲ್ಲಿ । ನಿಮ್ಮಯ ಮೈತ್ರಿಯೊಳಿಂದಿನಲಿ ॥ ೧ ॥ ಪೊರಡಲಿ ಸೈನಿಕವೀಗಾ । ತವ । ಪುರದೆಡೆಯೊಳಗತಿ ಬೇಗಾ ॥ ಅರಿಗಳು ಮುತ್ತುವ ಮೊದಲೇ । ನಾ । ವಿರುವೆವು ಜತನದಿ ತೆರಳಿ ॥ ೩ ॥

**ರಾಗ– ಭೈರವಿ** **ತಾಳ–ಝಂಪೆ**

ಬಂದು ಕಾಂಭೋಜ ಪುರಕಂದು ಸೇನೆಯ ಸಹಿತ । ನಿಂದಿರಲು ದೃಢಮನದಳಂದು ರಕ್ಷಣೆಗೇ ॥ ೧ ॥ ಇತ್ತಲಾ ಮಣಿವರ್ಮ ಮುತ್ತುವೆನು ಪುರವನಿ । ನ್ನೆತ್ತಲೈದಪರೆನುತ ಸಿಟ್ಟಿನಿಂಬರಲು ॥ ೨ ॥

**ರಾಗ– ಭೈರವಿ** **ಅಷ್ಟತಾಳ**

ನಿಲ್ಲು ನೀನ್ಯಾರಿಲ್ಲಿಗೇ । ಬಂದಿಹುದೇಕೆ । ಖುಲ್ಲರ ತೆರದೊಳಗೇ ॥ ಬಲ್ಲಿದರಾದ ನಮ್ಮಲ್ಲಿ ಸೆಣಸುರಣ । ಮಲ್ಲಿತನವ ನೋಡುವೆ ॥ ೧ ॥ ಅರೆರೆ ಕಾಂಭೋಜೇಶನು । ನಿನ್ನನು ಇಲ್ಲಿ । ಕರೆಸಿದನೇನು ತಾನು ॥ ಒರೆವೆ ಕೇಳ್ ಕೇರಳ ಪಾಲಕ ನಾನಿಹೆ । ಧುರಧೀರ ಮಣಿವರ್ಮನು ॥ ೨ ॥ ಧರೆಯ ಸಂಚರಿಸುತ್ತಲಿ । ಭೂಪರ ಗೆದ್ದುಬರುತಿರೆ ಮಾರ್ಗದಲೀ ॥ ಪರಿಚಯವಾಯ್ತಿಲ್ಲಿ ರತ್ನಾಂಗದನು ನಾನು ॥ ಧುರವ್ಯಾವವ್ಯಾಜ್ಯದಲೀ ॥ ೩ ॥ ಅರಸನ ತರಳೆ ಯನೂ । ನಾ ಬಯಸುತ । ಬರೆದಿರ್ದೆಪತ್ರವನೂ ॥ ಮರುಳು ನೃಪಾಲ ಧಿಕ್ಕರಿಸಿದ ಕಾರಣ । ಧುರಕೆಂದು ನಡೆತಂದೆನು ॥ ೪ ॥ ಮತಿಯುಂಟೆ ನಿನಗೆ ಪೇಳು । ಬಲವಂತದಿ । ಸತಿಯಳನಾರ್ಜಿಸಲು ॥ ಖತಿವಿಡಿದ್ಯೆತಂದೆ ಶ್ರುತಿಮತವರಿ ಯದ । ಮತಿಗೇಡಿ ನೀನೀಗಳೂ ॥ ೫ ॥ ಭಳಿರೆ ವೇದಾಂತವನು । ನೀ ಪೇಳ್ವುದಾ । ಲಲನೆಗೋಸುಗವೆ ಇನ್ನೂ ॥ ತಿಳಿದೆನೆನ್ನಯ ವೈರ ತರವಲ್ಲ

ಕದನದಿ । ತಲೆಯನು ತೆರುವೆ ನೀನು ॥ ೬ ॥ ಬಂದಾಪತ್ತನು ಗ್ರಹಿಸಿ । ಎನ್ನೊಳು ಸಖ್ಯ । ಹೊಂದಿದ ನೃಪ ಬಯಸಿ ॥ ಬಂದಿಹೆ ಸಹಯಕೆ ಧುರಬೇಡ ತಿರುಗು ನೀ । ಹಿಂದಕೆ ಪಥವರಸೀ ॥ ೭ ॥ ಮೊದಲು ನಿನ್ನನು ಗೆಲಿದು । ಆ ನಂತರ । ಮುದಿ ನೃಪನನು ತುಳಿದು ॥ ಪದುಮಾಕ್ಷಿಯಳ ನೊಯ್ದೆ । ಸಾಹಸವಿರ್ದರೆ ಕದನಕೆ ನಿಲ್ಲುವದು ॥ ೮ ॥

## ಭಾಮಿನಿ

ಧರದಿ ಬಳಲುತ ಕೇರಳಾಧಿಪ । ತಿರುಗಲಪಜಯದಿಂದ ಕಾಣುತ । ಪರಿಜನರ ಮನ್ನಿಸುತ ಭೂವರನಣುಗ ತಾನಿರಲೂ ॥ ಭರದಿ ಬಂದಾ ವಜ್ರಕೇತನು ಹರುಷದಿಂದಾಲಿಂಗಿಸುತ್ತಲಿ । ಧರಣಿಯೊಳಗೆಣೆಯಿಲ್ಲ ನಿನಗೆಂದೆನುತ ಪೇಳಿದನೂ ॥ ೧ ॥

## ರಾಗ – ದೇಶೀ ತಾಳ –ಅಷ್ಟ

ವೀರನೇ । ಸುವಿ । ಚಾರನೇ ॥ ಪಾರಮಾರ್ಥದಿ ನಮ್ಮ ಸಹಯಕೆ ಬಂದು । ತೋರಿಸತ್ವವನು ಕಾಪಾಡಿದೆಯೊಲಿದು ॥ ಪ ॥ ನಿನ್ನುಪಕಾರವ ಮರೆಯೆನು ಮನದೀ । ಇನ್ನೊಂದು ಬಿನ್ನಪ ಕೇಳು ನೀ ದಯದಿ ॥ ಎನ್ನ ನಂದನೆ ಕನಕಾಕ್ಷಿಯ ವರಿಸು । ಸನ್ಮತದಿಂದ ಬಂಧುತ್ವವನುಳಿಸು ॥ ೧ ॥ ಜನಪಾಲ ಕೇಳೆನ್ನಮತವ ಪೇಳುವೆನು ॥ ಜನನಿ ಜನಕರ ವಿಚಾರಿಸದಿನ್ನು । ವನಿತೆಯ ವರಿಪುದು ಸರಿಯಲ್ಲವೆಂದು । ಮನದಿ ಯೋಚಿಸುತಿಹೆ ಮನ್ನಿಸು ಒಲಿದು ॥ ೨ ॥ ಕೇಳು ಸ್ವಯಂವರ ವಿಧಿಯಮಾನಿಪುದು । ಕೀಳಲ್ಲವೀ ನೇಮ ಕ್ಷತ್ರಿಯಗಿಹುದು । ಭೂಲಲಾಮನು ತುಂಗಕೇತ ತಾನಿದಕೇ । ಕೇಳಲಾರನು ಕುಂದನೀ ಪರಿಣಯಕೇ ॥ ೩ ॥ ವೀರಸೇನಾಖ್ಯನೆಂದನು ನೃಪಸುತಗೇ । ವಾರಿಜಭವನ ಸಂಕಲ್ಪದಿ ಹೀಗೆ ॥ ಸೇರಿತು ಬಾಂಧವ್ಯವಿದಕೊಪ್ಪು ಮುದದಿ। ಸಾರಸಾಕ್ಷಿಯನು ಕೈಪಿಡಿ ಸನ್ಮತದಿ ॥ ೪ ॥

## ವಾರ್ಧಿಕ್ಯ

ಕರೆತಂದು ನೃಪಸುತನ ಧರೆಯ ಮರರೆಂದಂತೆ । ತರಳೆಯಳ ಧಾರೆಯನ್ನೆರೆದು ಸುಮೂಹೂರ್ತದಲಿ । ಪರಿಪರಿಯ ವಿಭವದಿಂ ಕ್ಷತ್ರಿಯೋಚಿತವಾಗಿ ಪರಿಣಯವಮುಗಿಸೆ ಬಳಿಕಾ ॥ ಮೆರೆವ ಯಶೋಲಕ್ಷ್ಮಿಯಳ ಬಳಿಯ ಗೃಹಲಕ್ಷ್ಮಿಯೋಲ್ । ತರುಣಿ ಕನಕಾಕ್ಷಿಯನುವರಿಸಿ ನೃಪಸುತ ಬಳಿಕ । ಪುರಕೈದ ಲೆಳಸಿ ಮನದಿರವ ತನ್ನರಸಿಯೊಳುಸರಸವಾಚನದಲಿ ನುಡಿದಾ ॥ ೧ ॥

### ರೂಪಕ ತಾಳ

ಕನಕಲೋಚನೇ । ಕೇಳು । ಮನದಯೋಚನೇ ॥ ಜನಪರನು ಗೆಲುವ ಮನದಿ ಮನೆಯ ಬಿಟ್ಟು ಬಂದೆ ನಿಲ್ಲಿ ॥ ಪ ॥ ಮುಂದೆ ಧರೆಯನೂ । ಚರಿಸಿ । ಹೊಂದಿ ಪುರವನೂ ॥ ಚಂದದಿಂದ ಕರೆಸಿಕೊಂಬೇ ಸುಂದರಾಂಗೀ ನೀನು ಮನದಿ । ನೊಂದುಕೊಳದೆ ಕಳುಹು ನಿನ್ನ । ತಂದೆಗರುಹಿ ಪೋಪೆನಿನ್ನು ॥ ೧ ॥

### ರಾಗ – ಬೇಗಡೆ ಅಷ್ಟ ತಾಳ

ಓ ಮನೋಹರ ನಮಿಸಿ ಬೇಡುವೆನೂ । ಮಮ ಬಯಕೆಯೊಂದನು । ಪ್ರೇಮದಿಂ ಪರಿಪಾಲಿಸೈ ನೀನೂ ॥ ನಾ ಮುದದಿ ತವ ಜೊತೆಗೆ ಬರುವೆನು । ಭೂಮಿಪಾಲಕರ ಪುರವ ಕಾಂಬೆನು । ಭೀಮಬಲ ತವರಕ್ಷೆಯಲಿ ಮಮ । ಕ್ಷೇಮ ಕಾಣ್ಪೆ ನಿಜವಿದು ॥ ೧ ॥

### ರಾಗ– ಕಲ್ಯಾಣ ತಾಳ–ಝಂಪೆ

ಸತಿಯ ನುಡಿಗೊಪ್ಪಿ ಸಂತೈಸಿ ಬಳಿಕವನೂ । ಅತಿಜವದಿ ಮಾವನೆಡೆ ಗೈತಂದ ತಾನೂ ॥ ೧ ॥ ಪಯಣಕಾಶೀರ್ವಾದ ನೀಡಿ ಕಳುಹುವುದು । ಜಯಿಸಿ ಭೂಪರ ಪೋಪೆ ಪುರಕೆ ನಾನಲಿದು ॥ ೨ ॥ ಕನಕಾಕ್ಷಿ ಬರುವೆನೆಂದೆನುತ ಪೊರಟಿ ಹಳು । ದಿನಕಳೆಯಲವಧಿಯೆನಗಿಲ್ಲ ಕ್ಷಮಿಸುವುದು ॥ ೩ ॥

ರಾಗ– ಜಂಜೂಟಿ ರೂಪಕ ತಾಳ

ಹರುಷವಾಯ್ತು ಪೋಗಿ ಬನ್ನಿ ಹರನ ದಯದಲಿ । ಭರಿತ ಕೀರ್ತಿವಂತರೆನಿಸಿ ಧರೆಯ ಜನರಲಿ ॥ ೧ ॥ ಅರುಹು ನಡೆದ ಬಗೆಯನೆಲ್ಲ । ತುಂಗಕೇತಗೆ । ತರಳೆ ತಪ್ಪಗೈಯೆ ಕ್ಷಮಿಸಿ । ಪೊರೆಯೆ ದಯದಲಿ ॥ ೨ ॥

ರಾಗ ಸೌರಾಷ್ಟ್ರ ತ್ರಿವುಡೆ ತಾಳ

ಎನಲು ನಮಿಸಿಯೆ ವನಿತೆ ಸಹಿತಲಿ । ಜನಪಸುತ ದಳದೊಡನೆ ಹೊರಟನು । ಘನತೆಯಿಂ ದಿಗ್ವಿಜಯ ಗೈಯುವ । ಮನದೊಳಂದೂ ॥ ೧ ॥ ವೀರ ಕೇಳ್ಕೆ ಸಾಕು ಈ ಸಂಚಾರ ತೆರಳಿದುದವಧಿ ಪುರವನು । ಸೇರಬೇಕಿದ ಯೋಚಿಸೆಂದನು । ವೀರವರ್ಮಾ ॥ ೨ ॥ ಆ ನುಡಿಯ ಸಮ್ಮತಿಸಿ ವಿಂಧ್ಯದ । ಕಾನನದ ಮಾರ್ಗದಲಿ ಬರುತಿರೆ । ಆ ನಿಷಾದಜ ದುರ್ಮುಕಾಖ್ಯನು । ತ್ರಾಣಿ ಎನಿಸೀ ॥ ೩ ॥

ರಾಗ– ಸೌರಾಷ್ಟ್ರ ತಾಳ– ಮಟ್ಟೆ

ಬಂದನಾಗ ಬೇಟೆಯಾಡುತಾ । ಶಬರವೀರ । ಬಂದನಾಗ ಬೇಟೆಯಾಡುತಾ ॥ ಹಂದಿಹರಿಣ ಚಮರೀಮೃಗವ । ಕೊಂದು ಕಳೆವೆನೆಂದು ಪುಡುಕಿ । ಸಂದುಗೊಂದಿಯೆಲ್ಲನೋಡು ತಂದುಶರವ ಗುರಿಯೊಳಿರಿಸಿ ॥ ೧ ॥ ಎರಳೆಯೊಂದ ಕಂಡು ದೂರದಿ । ತಾ ಮರೆಯೊಳ್ಗೈದೆ । ಶರವಪೂಡಿ ಬಿಡಲು ಶೀಘ್ರದಿ ॥ ಕಿರಿದುಗಾಯವಡೆದು ಹರಿಣ । ಭರದೊಳೋಡುವುದನು ಕಂಡು । ಅರೆರೆ ಹೋದುದೆನುತ ಸೋವ । ಅರಸಿಕೊಳುತ ಬಂದ ಜವದಿ ॥ ೨ ॥

ಭಾಮಿನಿ

ಈ ತರಣಿ ನಭು ಗಗನದಿ ವಿರಾಜಿಪ । ಪರಿಯರಿತು ನೃಪಸುತಸೇನಾ । ಪರಿವರಕೆ ವಿಶ್ರಮಿಸಲರುಹುತ ತರುಣಿ ಸಹಿತಿರಲು ॥ ಭರದಿ ಬಂದಾಹರಿಣಚರಣದೋಳುರುಳೆ ಬಾಣವ ತೆಗೆದು ಭೇಷಜ । ವಿರಚಿಸುತ ಮೈದಡವುತಿರಲಾ ಶಬರ ಕಂಡೆಂದ ॥

**ರಾಗ ಮಾರವಿ** **ತಾಳ–ಏಕ**

ಕೊಡು ಕೊಡು ಎನ್ನೆಯ ಬೇಟೆಯನೇತಕೆ । ಹಿಡಿದಿಹೆ ನೀನ್ಯಾರು । ಹುಡುಗಾಟಿಕೆಯದು ನಡೆ ನಡೆಯದು ಎನ್ನೊಳು । ಕೆಡದಿರು ಕೆಲಸಾರು ॥ ೧ ॥ ಕೊಲುವವನಿಗೆ ಸ್ವಾಮಿತ್ವವು ಸಲ್ಲದು । ಸಲಹಿದೆ ನಾನಿದನು ॥ ಬಲೆಯೊಳು ಬದಲು ಮೃಗವ ಪಿಡಿ ನಡೆ ನಡೆ । ಛಲಪಿಡಿಯದೆ ನೀನು ॥ ೨ ॥ ಎಲೆ ಎಲೆ ನಿನ್ನಯ ಭೋದೆಯು ಸಾಕೈ । ತಲೆ ಬೇಕೆಂದಿರಲು । ಘಳಿಲನೆ ಹರಿಣವನೊಪ್ಪಿಸು ಬಾಣಕೆ । ಬಲಿಯಾಗುವ ಮೊದಲು ॥ ೩ ॥ ಬುದ್ಧಿವಿಹೀನನೆ ನಿನ್ನಂತಹರನು । ತಿದ್ದಲರಿದು ನುಡಿಯಾ । ಗುದ್ದುವಿಕೆಯ ಕ್ರಮವೇ ನಿಮಗುಚಿತವು । ಶುದ್ಧ ಮರುಳ ನಡೆಯೋ ॥ ೪ ॥ ಮಿಗಕೋಸುಗ ತಲೆಕೊಡುವೆಯ ಬಾ ನಿ । ನ್ನ ಗಡುತನವ ನೋಳ್ಪೆ ॥ ಧಗಿಸುವ ಬೆಂಕಿಯ ಕರದೊಳು ನಂದಿಪ । ಬಗೆ ತೋರಿದೆ ಭಲಿರೇ ॥ ೫ ॥ ಈ ಪರಿಯಿಂದಲಿ ಶಬರನು ಶರಬಿಡೆ । ಭೂಪಸುತನು ತರಿದು ॥ ಕೋಪದಿ ಘನಶರ ಬಿಡೆ ಖಳನುರುಳಿದ । ತಾ ಪೊಡವಿಯೊಳಳಿದು ॥ ೬ ॥

**ರಾಗ–ನಾದನಾಮಕ್ರಿಯೆ** **ಅಷ್ಟ ತಾಳ**

ದುರುಳ ದುರ್ಮುಖನ ಸಂಹರಿಸುತ್ತಾ । ಮತ್ತಾ । ಧರಣಿಪ ಸುತ ಮುಂದೆ ತೆರಳುತ್ತಾ ॥ ಸರಿಯಲು ನಿಶೆ ತೋರಲು । ಬಲ । ವೆರಸಿ ತಂಗಿದ ವಿಂಧ್ಯ ಗಿರಿಯೊಳು ॥ ೧ ॥ ದುರುಳನಾಗಿಹ ಶಿಖಿನೇತ್ರನು । ನಿಶಾಚರನಲ್ಲಿ ತಾನೆ ಬಾಳಿರ್ದನು ॥ ತಿರುಗುತ ವನವ ಕತ್ತಲೆಯೊಳು । ಬರು । ತಿರೆ ತಿಳಿದನು ತನ್ನ ಮನದೊಳು ॥ ೨ ॥

**ರಾಗ– ಆರಭಿ** **ತಾಳ–ತ್ರಿವುಡೆ**

ಏನಿದೂ ಪರಿಯೂ । ಚೋದಿಗ । ವೇನಿದೂ ಪರಿಯೂ ॥ ಪ ॥ ಕಾನನಕೆ ಬಳಗವನು ಕೂಡುತ । ಮಾನವನು ತಾನಾರೋ ಬಂದಿಹ ॥ ಅನು.ಪಲ್ಲ ॥

ಹಲವು ಕಾಲವದಾಯ್ತು ಮಾನವ । ಗೆಲುವು ಮಾಂಸವ ಕಡಿದು ರಕ್ತವ । ಗಳಗಳನೆ ಕುಡಿದೀಗ ತೇಗುವೆ । ಭಲರೆ ಭೋಜನ ಭಾಗ್ಯವೀ ದಿನ ॥ ೧ ॥ ತೆರಳಿ ಮುಂದಕೆ ಕಂಡುಸೇನೆಯ । ಅರರೆ ನಿದ್ರೆಯೊಳಿರುವರೆಲ್ಲರು । ಮರೆಯೊಳಿಲ್ಲಿರ್ದವರ ಪರಿಯನು । ಅರಿವೆನೆನುತೀಕ್ಷಿಸಿದ ತರುಣಿಯ ॥ ೨ ॥

**ರಾಗ** **ತಾಳ–ಅಷ್ಟ**

ಯಾರಿವಳೀ ಹೆಣ್ಣು ಭಲರೇ । ಸುಶ । ರೀರದ ತರುಣಿ ವಹವ್ವಾರೇ ॥ ನಾರಿ ಇವಳ ಕಂಡು ತೀರಿತು ಹಸಿವೆಲ್ಲ । ತೋರಿತು ಬೇರೊಂದು ವೇದನೆ ಸುಳ್ಳಲ್ಲ ॥ ೧ ॥ ನಿದ್ದೆಯೊಳಿಹರಿವರೆಲ್ಲಾ । ನಾನು । ಕದ್ದು ಕೊಂಡೊಯ್ಯೆ ಕೇಳ್ವರಿಲ್ಲಾ ॥ ಸದ್ದಾಗದಂದದಿ ಸತಿಯ ಕೊಂಡೊಯ್ವೆನು । ಹೊದ್ದಿ ಘೋರಡವಿಯ ಬಳಿಕ ನಾಕಾಂಬೆನು ॥ ೨ ॥ ಎನುತೆಡಬಲಗಳ ನೋಡುತ್ತಾ । ಪೋಗಿ । ಜನಪ ಕುಮಾರನ ಕಾಣುತ್ತಾ । ಮನದೊಳಂಜುತ್ತ ಮಾನಿನಿಯ ಎಚ್ಚರದ ವೊಲು । ದನುಜನು ಪೆಗಲೊಲಗಾಂತು ತಾ ನಡೆದನು ॥ ೩ ॥

**ರಾಗ ಘಂಟಾರವ** **ಅಷ್ಟ ತಾಳ**

ಅನಿತರೊಳೆಚ್ಚತ್ತು ಜನಪ ನಂದನ ನಾಗ । ವನಿತೆ ಎಲ್ಲಿಗೆ ಪೋದಳೀಗಳು ಎನುತನಾಲ್ದೆಸೆ ನೋಡುತಾ ॥ ೧ ॥ ವೀರವರ್ಮನೆ ಏಳು ಕೇಳು ನಮ್ಮೆಡೆ ಯಿಹ । ನಾರಿ ಕಾಣಳು ಮೋಸವಾಯ್ತಿ । ನ್ನಾರಿಗೊರೆವುದು ಸಂಕಟಾ ॥ ೨ ॥ ದುರುಳ ನಿಶಾಚರರಾರೋ ಒಯ್ದಿಪರು । ಭರಿತಮಾಯವ ನರಿಯೆ ಬೇಗದಿ । ಶರವ ಬಿಡು ರಕ್ಷೋಘ್ನವಾ ॥ ೩ ॥ ಬಲಗೂಡಿ ಶೋಧಿಸಬೇಕೆಂದು ಜವದಲಿ । ಛಲದೊಳ್ಳೈ ತರಲಾಗ ಪಥವನು । ಹಳುವನದೊಳರಸುತಲಿ ॥ ೪ ॥

**ರಾಗ– ಭೈರವಿ** **ಝುಂಪೆ ತಾಳ**

ಬೆನ್ನಟ್ಟಿ ಬರುವ ಪರಿಯರಿತು ದಾನವನಾಗ । ಕನ್ಯೆಯನು ಪೆಗಲಿನಿಂದಿಳುಹೆ ಚೇರಿದಳು ॥ ೧ ॥ ಎಲವೋ ಮಾಯಾವಿ ನೀನ್ಯಾರೆನ್ನ ನೀಪರಿಯ । ಕಳವಿನೊಳು

ತಂದಿರುವೆ ಕಳುಹು ಎನುತಿರಲೂ ॥ ೨ ॥ ಬಂದು ರತ್ನಾಂಗ ಖತಿಯಿಂದ ಶರಗಳ ಸುರಿಸಿ । ಮುಂದೆ ನಿಲೆ ದುರುಳ ತಾನೆಂದನಾತನೊಳು ॥ ೩ ॥

**ರಾಗ – ಶಂಕರಾಭರಣ** **ಮಟ್ಟೆ ತಾಳ**

ಎಲವೊ ಮರುಳ ಮನುಜ ನಿನ್ನ । ಬಳಗ ಸಹಿತ ಬಂದು ಎನ್ನ । ಬಲೆಗೆ ಸಿಲುಕಿ ಗ್ರಾಸವಾದೆ । ಭಳಿರೆ ಎಂದನು ॥ ೧ ॥ ಬದುಕಿನವಧಿ ನಿನಗೆ ತೀರಿ । ತದಕೆ ಸತಿಯ ನಿಂತು ತಂದೆ । ಕದಲಗೊಡದೆ ಶಿರವ ಶರದ । ತುದಿಯೊಳರಿವೆನು ॥ ೨ ॥ ಒಂದು ತುತ್ತಿಗೀಡೆ ನಿನ್ನ । ತಿಂದು ಬಳಿಕ ಹಸಿವನೀಗಿ । ಸುಂದರಿಯನು ಭೋಗಿಸುವೆನು ಚಂದವಾಯ್ತುಲಾ ॥ ೩ ॥ ತಿನ್ನುವಾಶೆ ನಿನಗೆ ತೀರ್ದು ॥ ಮೃತ್ಯು ಸತಿಯ ಸಂಗ । ವನ್ನು ಹೊಂದಿ ಭೋಗಿಸುವುದು । ನಿನ್ನ ಗಳಿಕೆಯಾ ॥ ೪ ॥ ಹುಡುಗ ದಡಿಗ ಬಾರೊ ಮುಂದೆ । ಪಡೆಯ ಕಡೆಯ ನೋಡು ಹಿಂದೆ । ಕಡಿವೆ ಮಡಿವೆ ಅಡಿಯ ನಿಡಲು । ಬಿಡೆನು ಹಿಂದಕೇ ॥ ೫ ॥ ಧುರವ ಗೈದು ಬಳಿಕ ಖಳನ । ಶರವನರಿದು ರತ್ನ ಕಾಯ । ಭರಿತ ಸೇನೆ ಸಹಿತ । ಅಂದಿ । ನಿರುಳ ಕಳೆದೆನು ॥ ೬ ॥

**ರಾಗ– ಮಧ್ಯಮಾವತಿ** **ತ್ರಿವುಡೆ ತಾಳ**

ಬಲು ಜವದಿ ಪಥ ವಿಡಿದು ಬರುತಿರೆ । ಮಲಯಗಿರಿ ಶೋಭಿಪುದ ಕಾಣುತ । ಚಲುವಿಕೆಗೆ ಮನಸೋತು ಕಂಡಳು ಲಲನೆ ತಾನೂ ॥ ೧ ॥ ಅರಳಿರುವ ಸುಮರಾಜಿ ಧರಿಸಿದ । ತರುಲತೆಯ ಸೊಗಸುಗಳನೀಕ್ಷಿಸೆ । ವರ ವಿನೂತನ ಪರಿಮಳಕೆ ಮನ । ಸೆರೆಯ ಸಿಲುಕೆ ॥ ೨ ॥

**ರೂಪಕ ತಾಳ**

ಅಹಹ ಯಾವ ಹೂವಿನಿಂದ । ಬಹುದೊ ಪರಿಮಳಾ ॥ ಪ ॥ ಮಹಿಯೊಳೇನೇನಿಹುದೊ ಎಂದು । ಗ್ರಹಿಸಲರಿದೆಲಾ ॥ ಅ. ಪಲ್ಲ ॥ ಮನವ ತಣಿಸೆ ಕುಣಿಸೆ ಬಂತು । ಘನ ಸುವಾಸನೆ ॥ ಕನಸೆ ನನಸೆ ಎನಿಸಿ ಭ್ರಮಿಸಿ । ತನುವ

ಮರೆತೆನೆ ॥ ೧ ॥ ಅತಿ ವಿಚಿತ್ರ ಸುಮವನರಸಿ । ಹಿತದಿ ಮುಡಿಯುವೇ ॥ ಅತುಲ ಪುಣ್ಯ ಫಲವಿದ್ಯೆಸೆ । ಪತಿಯೊಳಗರುಹುವೇ ॥ ೨ ॥

**ರಾಗ –ಶ್ಯಾಮ ಕಲ್ಯಾಣ** **ಆದಿತಾಳ**

ಲಾಲಿಸು ಮನಮೋಹನಾ । ಎನ್ನಿಷ್ಟವನ್ನೂ । ಪಾಲಿಸು ಗುಣಭೂಷಣಾ ॥ ಪ ॥ ಶೀಲವಂತನೆ ನಿನ್ನ ಸೇರಿದ ಕಾರಣ । ಲೀಲೆಯೊಳೀವನದೆಡೆಗೈತಂದೆನು । ಭೂಲಲನೆಯ ಸೌಂದರ್ಯವ ಕಂಡೆನು ॥ ಅ. ಪಲ್ಲ ॥ ಪರಿಮಳವಿದು ನೂತನ । ಆಘ್ರಾಣಿಸುತ್ತ ಹಿರಿಮೆಗೆ ಮನಸೋತೆನಾ ॥ ಚರಿಸಿ ಈ ವನವನ್ನು ಪರಿಶೋಧಿಸುತ್ತಲಿನ್ನು । ಸರಸದಿ ಕುಸುಮವನರಸಿ ಮುಡಿಯುವೆನು । ಕರುಣದಿ ಬಾರೆನ್ನರಸನೆ ದಯದಲಿ ॥ ೧ ॥

**ರಾಗ– ಮಧು ಮಾಧವಿ** **ಏಕ ತಾಳ**

ಕನಕಾಕ್ಷಿ ಕೇಳೆ ಈ ಬಯಕೆಯೆ ನಿನಗೇ । ಅನುಮಾನ ಬೇಡ ನಾ ಬರುವೆನು ಜೊತೆಗೆ ॥ ವನವ ಸಂಚರಿಸಿ ಶೀಘ್ರದಿ ಬಹುದಿಲ್ಲಿ । ವನಿತೆ ಬಾ ಮೃದುಗತಿಯಿಂದ ಜೋಕೆಯಲಿ ॥ ೧ ॥ ಎಂದು ವಿಲಾಸದಿ ವನವನು ಪೊಗುತಾ ॥ ಮುಂದೆಸೆ ಶೋಭಿಪ ಸುಮವ ನೀಕ್ಷಿಸುತಾ । ಚಂದನದಿರುವಿಕೆ ಗೊಲಿದು ಕೊಂಡಾಡೀ । ಚಂದದಿ ಬರೆ ನೃಪ ಸುತ ಜೊತೆಗೂಡೀ ॥ ೨ ॥

**ರಾಗ–ಮಾರವಿ** **ಏಕ ತಾಳ**

ಗಂಧರ್ವರ ದೊರೆಯಾದ ಸುಲೋಚನ । ನೊಂದು ದಿವಸ ಮನದೀ ॥ ಸುಂದರ ವಹ ಮಲಯಾದ್ರಿಯ ನೋಡುವೆ । ನೆಂದಲೆ ಕೌತುಕದೀ ॥ ೧ ॥ ಸುಂದರಿ ಮಣಿಯರ ವೃಂದವ ಕೂಡಿ ವ । ಸುಂಧರೆಯನು ಸೇರೀ ॥ ಬಂದನು ಮಲಯಾಚಲಕೆ ವಿನೋದದಿ । ಮಂದಗತಿಯ ತೋರಿ ॥ ೨ ॥

ಏಕತಾಳ

ವನವನು ನೋಡುತ ಬಂದರು ಸಂತಸದೀ ॥ ಸುಮತರುಗಳ ಸೊಬಗಿಗೆ । ಮನ ನಲಿಯುತ ಕೊಂಡಾಡುತ ಸಂಭ್ರಮದೀ ॥ ಪ ॥ ಎನಿತು ಶೋಭಿಸುದು ಈ ನೆಲೆ । ಅಹ । ವನಜಜನನುಪಮದೀ ಕಲೆ ॥ ದಣಿವ ಮರೆಸಿ ಗೆಳೆತನವ ಬಯಸಿ । ಕರೆಯುತ್ತಿದೆ । ಮರೆಯುತ್ತಿದೆ ॥ ಅನುದಿನ ಘನತೆಯ ನುಳಿಸಿ ರಮಿಸುತಲಿ । ಆ ನಮನವನು ಸನುಮತದಿ ತಣಿಸುತಿದೆ ॥ ೧ ॥

### ಭಾಮಿನಿ

ಚೆಲುವೆಯರ ಸಂದಣಿಯೊಳಗೆ ಮನ । ನಲಿದು ಬರುತಿರೆ ಮುಂದೆ ವನದಲಿ ॥ ಲಲನೆ ಸಹ ರತ್ನಾಂಗ ನಿರುವದ ಕಂಡು ಗಂಧರ್ವ ॥ ಮಲಯ ಗಿರಿ ಸುರಖೇಚರರು ಬಂ । ದಲೆವ ನೆಲೆಯೆಂಬುದನು ಮನದಲಿ । ತಿಳಿಯ ದಾದನೆ ಮರುಳು ಮಾನವನೆಂದು ಬಳಿ ಸಾರ್ದಾ ॥ ೧ ॥

### ರಾಗ– ಆಹೇರಿ                    ತಾಳ– ಮಟ್ಟೆ

ಎಲವೋ ಮನುಜ ಯಾರು ನೀನೆಲಾ । ಈ ರೀತಿಯಿಂದ ಮಲಯಗಿರಿಗೆ ಬಂದುದೇಕೆಲಾ ॥ ಇಳೆಯ ಸಪ್ತ ಗಿರಿಗಳಲ್ಲಿ । ಚೆಲುವ ನೋಡೆ ಸುರರು ಬಹುದ । ತಿಳಿಯದಿಲ್ಲಿ ಮೂಡರಂತೆ । ಲಲನೆ ಸಹಿತ ತಿರುಗುತಿರುವ ಬಲದ ಮದವೊ ದಾರಿ ತಪ್ಪಿತೋ । ಈಬಗೆಗೆ ನಿಜವ । ತಿಳುಹಿ ಕ್ಷಮೆಯ ಕೇಳ್ದ ರೊಳಿತು ॥ ೧ ॥ ಮನುಜ ಲೋಕವಿದರೊಳಿರುವ । ಘನ ಸುವಸ್ತುಗಳನು ನೋಡೆ । ಅನುವು ಸುರರಿಗಿಹುದು ನಿಜವು ॥ ಇನಿತು ದರ್ಪ ತೋರೆ ನಾವು । ಮಣಿದರಲ್ಲ ನಾವು ನಿನ್ನಯ । ಮೂಲ ವರುಹು । ವನವು ನಿನ್ನದಲ್ಲ ನಿಶ್ಚಯ ॥ ೨ ॥

### ರಾಗ – ಭೈರವಿ                    ಏಕ ತಾಳ

ಗಂಧರ್ವರ ದೊರೆ ನಾನು । ನಡೆ । ತಂದಿಹೆ ಈ ಗಿರಿಗಿನ್ನು ॥ ಮಂದ ಮತಿಯೆ

ಕ್ಷಮೆ ಕೇಳ್ದು । ನೀ ಹಿಂದಕೆ ತೆರಳುವದೊಲಿದು ॥ ೧ ॥ ಸೌರಾಷ್ಟ್ರೇಶನ ಸುತನೂ ಧುರಧೀರ ರತ್ನಾಂಗದ ನಾನು ॥ ಧಾರುಣಿಪರ ಜೈಸುತ್ತಾ । ಬರು । ತೇರಿದೆ ನೀ ಗಿರಿಯುತ್ತಾ ॥ ೨ ॥ ಮದದೊಳು ಕೆಡದಿರು ನರನೇ । ನಿನ್ನಧಿಕ ಪರಾಕ್ರಮ ಗಳನೇ ॥ ಕದನದಿ ನಿಲಿಸುವೆನೆಹುದು । ಮಮ । ಪದಕೆರಗಲು ಸುಕವಹುದು ॥ ೩ ॥ ಒತ್ತಾಯದಿ ಮನ್ನಣೆಯ । ಪಡೆ । ಯುತ್ತಿಹೆ ನಿನ್ನಯ ಬಗೆಯಾ ॥ ಚಿತ್ರದಿ ತಿಳಿದೆನು ಧುರದಿ । ಮಮ । ಸತ್ವವ ತೊರುವೆ ಭರದಿ ॥ ೪ ॥

## ಕಂದ ಪದ್ಯ

ಧುರದೊಳು ಖೇಚರಪಾಲರು ಪರಿಭವವೊದಗಲ್ ಕಂಡತಿ ವಿನಯ ದೊಳಾಗಳ್ ॥ ನರಪತಿ ಸುತನಂ ಮನ್ನಿಸಿ । ಅರುಹಿದ ನವನಮತ ಕೊಂಡಾಡುತ ನಯದೊಳ್ ॥ ೧ ॥

## ರಾಗ ಸುರುಟಿ ಏಕತಾಳ

ಧುರವಿಕ್ರಮಿ ನೀನು । ಮನದೊಳು ಧರಿಸದೆ ಕ್ರೋಧವನು ॥ ಇರಿಸೈ ಮೈತ್ರಿಯ ಭಾವದ ದರ್ಪವ । ಮೆರೆಸುತ ಬರಿದೇ ಕೆಣಕಿದೆ ನಿನ್ನನು ॥ ೧ ॥ ಸೊಕ್ಕಿನ ನುಡಿ ಕೇಳಿ । ಸೆಣಸಿದೆ । ನುಕ್ಕಿದ ರೋಷದಲಿ ॥ ಅಕ್ಕರೆಯಾಂತೆನು ನಿನ್ನೀ ನಡತೆಗೆ । ಸಖ್ಯವು ದೊರಕಿತು ಪರ್ವದ ಪುಣ್ಯದಿ ॥ ೨ ॥

## ವಾರ್ಧಿಕ್ಯ

ಬರದಿ ಖೇಚರನ ಬೀಳ್ಕೊಂಡು ರತ್ನಾಂಗದಂ । ತರುಣಿ ಕನಕಾಕ್ಷಿಯಳ ಜೊತೆಗೆ ಬಲಸೇರುತಂ । ಪುರವ ಸೇರುವ ಪಥದಿ ತವಕದಲಿ ಮುನ್ನಡೆದು ಬರುತಿರಲು ಸೌರಾಷ್ಟ್ರಕೇ । ಧರಣಿಪಾಲ ತುಂಗಕೇತ ಸತಿಸಹಿತ ಮನ । ಮರುಗುತಿರ್ದೆಂ ಸುತನ ಜಾತಕವ ನೆನೆನೆನೆದು । ಹರನೆ ಪಾಲಿಸು ದಯದೊಳೆನುತಿರಲು ರತ್ನಾಂಗ ಜನನಿ ಜನಕರಿಗೆ ಮಣಿದಾ ॥ ೧ ॥

ಏಕತಾಳ

ಸುಕುಮಾರ ಕೇಳು ನೀ ನಖಿಳ ರಾಯರ ಗೆಲ್ದು । ಸುಖದಿ ಬಂದೆಯ ಜಯ । ಲಕುಮಿಯವರಿಸೀ ॥ ೧ ॥ ಬೆಳಗಿತು ನಿನ್ನಿಂದ । ಕುಲದ ಕೀರ್ತಿಯು ಕಂದಾ ॥ ಚಲುವೆಯೀ ಸತಿಯಾರು । ಘಳಿಲನೆ ಪೇಳು ॥ ೨ ॥ ಪರಿಯ ನೆಲ್ಲವ ಮಂತ್ರಿ । ಅರುಹಿದ ಜನಪಗೇ ಧರೆಯ ದಿಗ್ವಿಜಯವಿ । ಸ್ತರವನೆಲ್ಲ ವನ್ನೂ ॥ ೩ ॥

## ದ್ವಿಪದಿ

ಉಡುಗೊರೆಯನಿತ್ತಾಗ ಪಡೆಯ ಸುಭಟರನು ॥ ಪೊಡವಿಪತಿ ಸತ್ಕರಿಸಿ ನಡೆತಂದ ತಾನು ॥ ೧ ॥ ಮನದಿ ಮರುಗಿದ ತನಯನಾಯುಷ್ಯದವಧೀ ॥ ದಿನ ಮೂರು ಗೈವುದೇನೆನುತ ಕಳವಳದೀ ॥ ೨ ॥ ಸತಿಸುತರಕರೆದು ಸಂಗತಿಯು ಸೂಚಿಸುವೇ । ಸಿತಗೊರಳನನು ಭಜಿಸಿ ಸುತನ ಬದುಕಿಸುವೇ ॥ ೩ ॥ ವಿನುತ ಮನದೊಳು ನಿರ್ಧರಿಸುತ ಭೂಮಿಪನು ॥ ವನಿತೆ ತನಯರ ಕರೆದು ಅನುವ ಪೇಳಿದನು ॥ ೪ ॥

## ರಾಗ ತೋಡಿ ರೂಪಕ ತಾಳ

ಸುದತಿ ಕೇಳ್ ಕುವರಗೆ ಹದಿನಾರು ವತ್ಸರ । ಬದುಕುವ ಅವಧಿಯೆಂದೆನುತಾ ॥ ಸದಮಲ ಮುನಿಪೇಳ್ದ ಹದನಕೆನ್ನೆಯ ಮನ । ಕುದಿವುದು ಕೊನೆಯು ಎಂತೆನುತಾ ॥ ೧ ॥ ತರಳಗೆ ಪರಿಯ ಸೂಚಿಸಲಿಲ್ಲ ಮೊದಲೀಗ । ಪರಿಣಯವಾಯಿತಲ್ಲಾ ॥ ವರ ಕನಕಾಕ್ಷಿಯ ಮಾಂಗಲ್ಯಯೋಗ ವೆಂ । ತಿರುವುದೋ ಶಂಕರ ಬಲ್ಲಾ ॥ ೨ ॥ ಧರೆಯ ಸಂಚರಿಸಿ ದಿಗ್ವಿಜಯವಗೈದು ಖೇ । ಚರನನು ಗೆಲಿದು ಬಾಲಕನು । ಪರಮ ಸತ್ಕೀರ್ತಿಯ ಧರಿಸಿದನಿದನೆಂತ । ಮರೆವೆ ನೆಂದನುತಳಲಿದನು ॥ ೩ ॥

**ರಾಗ- ನಾದನಾಮಕ್ರಿಯೆ** **ಅಷ್ಟತಾಳ**

ಶಶೀರೇಖೆ ಮನದಿ ಚಿಂತಿಸುತಲೀ । ತನ್ನ । ಸೊಸೆಯ ಮೈದಡವಿ ಕಂಬನಿಯಲೀ ॥ ವಿಸಜಸಂಭವ ನಿನ್ನ ಬಾಳಿಗೇ । ಘೋರ ವಿಷವಿತ್ತನೇ ನಮ್ಮ ಪಾಲಿಗೆ ॥ ೧ ॥ ಏಕೆ ನಿನ್ನಯ ಕೈಯ ಹಿಡಿದನೋ । ಘನ । ಶೋಕವನುಣಿಸಲು ಕುವರನು ॥ ಭೀಕರ ವೈಧವ್ಯ ದೀಕ್ಷೆಗೆ । ಕಾಲ । ವೇಕೆ ದೂಡಿತೊ ಈ ಪರೀಕ್ಷೆಗೆ ॥ ೨ ॥ ಎನಗಾಗಿ ಚಿಂತಿಸದಿರಿ ನೀವು । ಎನ್ನ । ಹಣೆ ಬರಹದೊಳಾಯ್ತು ಈ ನೋವು ॥ ಇನಯನ ಸೆಳೆದರೆ ಕಾಲನು। ಎನ್ನ ತನುವ ನಗ್ನಿಗೆ ಸಮರ್ಪಿಸುವೆನು ॥ ೩ ॥ ವಿಧಿಯನು ಮೀರಿದ ಮಹಿಮರು । ತತ್ವ । ಹೃದಯದಿ ಶಿವನ ಧ್ಯಾನಿಸಿದರು ॥ ಮದನಾರಿ ಹರನು ಮೃತ್ಯುಂಜಯ । ಶಿವ । ಪದವ ಧ್ಯಾನಿಸಿದರೆ ನಿರ್ಭಯಾ ॥ ೪ ॥

**ಭಾಮಿನಿ**

ಬಳಿಕ ರತ್ನಾಂಗದನು ಮನದೊಳು । ತಿಳಿದು ಪದ್ಮಾಸನದಿ ಮಂಡಿಸಿ । ಫಲಿತ ಶಿವ ಪಂಚಾಕ್ಷರೀ ಜಪ ವಿರಚಿಸುತ್ತಿರಲೂ ॥ ಇಳೆಯ ಪತಿ ಸತಿ ಸಹಿತ ಶಿವನಿಗೆ । ಸಲಿಸಿ ಪೂಜೆಯ ಬೇಡುತೀರ್ದನು । ಬಲಿತ ಭಕ್ತಿಯೊಳಾ ಹರನ ಕನಕಾಕ್ಷಿಧ್ಯಾನಿಸಲೂ ॥ ೧ ॥

**ರಾಗ -ಸೌರಾಷ್ಟ್ರ** **ತಾಳ-ತ್ರಿವುಡೆ**

ಇತ್ತ ಶೈಮಿನಿ ಪುರದಿ ಅಂತಕ । ಚಿತ್ರಗುಪ್ತರ ಕರೆದು ನುಡಿದನು । ಬತ್ತಿತಾರಿಗೆ ಬದುಕಿನವಧಿಯು । ಬಿತ್ತರಿಪುದು ॥ ೧ ॥ ಧರಣಿಪಾಲಕ ತುಂಗಕೇತನ । ತರಳ ರತ್ನಾಂಗದನ ಜೀವನ । ಸರಿದುದಿಂದಿಗೆ ಕಳುಹಿ ಭಟರನು ತರಿಸಬೇಕು ॥ ೨ ॥ ಕರೆದು ಮೃತ್ಯುವ ಪೇಳ್ದ ನೀನಾ । ನರನ ಪಿಡಿತಹುದೆಮ್ಮ ನಗರಿಗೆ । ಅರಿವೆನಾತನ ಪಾಪ ಪುಣ್ಯದ । ಪರಿಯನೆಲ್ಲಾ ॥ ೩ ॥ ಎಂದನುಡಿಗಾ ಮೃತ್ಯು ದೇವತೆ । ಬಂದಳತಿ ಭೀಕರ ಸ್ವರೂಪದಿ । ಅಂದು ರತ್ನಾಂಗದನ ಒಯ್ಯುವೆ । ನೆಂದು ಬರದಿ ॥ ೪ ॥

ರಾಗ- ಶಂಕರಾಭರಣ ತಾಳ-ಅಷ್ಟ

ಕಂಡಳೂ । ಭಯ । ಗೊಂಡಳೂ ॥ ಪ ॥ ರುಂಡಮಾಲನ ಧ್ಯಾನಿಸುತಲೀ । ಇರೆ । ಕೊಂಡೊಯ್ದೆನೆಂದು ಬೇಗದಲೀ । ಬರೆ । ಕೆಂಡದಂದದಿ ಜಪದುರಿಯುಮದೆ ಬಿಡದಿರೆ । ದಂಡಧರನಿಗಿದ ಪೇಳುವೆನೆನುತಲಿ ॥ ೧ ॥ ತರಣೀಸಂಭವ ನುಡಿ ಕೇಳು । ಇಲ್ಲಿ । ತರಲರಿದವನ ಕೃಪಾಳೂ । ಇಹ । ಹರನ ಧ್ಯಾನಿಸುತ ಚಿತ್ತದೊಳು । ಪಂಚಾಕ್ಷರಿಯ ಮಹಿಮೆಯಿಂದ ಉರಿವುದೆಮ್ಮೆಯ ಕಾಯ । ತರುವ ಉಪಾಯವ ನೀನೆ ಯೋಚಿಸು ಜೀಯ॥ ೨ ॥

ತಾಳ-ರೂಪಕ

ಏನಿದೀ ಪರಿ । ಅರರೆ । ಕಾಣಲಚ್ಚರಿ ॥ ಪ ॥ ಕ್ಷೋಣಿಪಾಲಸುತನ ಪ್ರಾಣ । ಹಾನಿಗೈವ ಬಗೆಯದೆಂತು ॥ ಅ.ಪ. ॥ ಆಯತೀರಿದವರನೆಲ್ಲ । ಸಾಯಿಸುವುದು ನಮ್ಮ ಹೊಣೆಯು । ಕಾಯುತಿಹನೆ ಶಿವನು ಕಾರ್ಯ । ದಾಯಕಿನ್ನು ಮಾಳ್ಪುದೇನು ॥ ೧ ॥ ಹರನ ನಾಮ ಬಲದೊಳಿಂತು । ಮೆರೆವ ನವನ ಪ್ರಾಣ ಸೆಳೆಯೆ । ಹರಿಯ ಸಖನು ಖತಿಯ ತೋರ್ಪತರದೆ ಬಿಡಲು ನಿಯಮ ನಷ್ಟ ॥ ೨ ॥ ನಾನಿದಕ್ಕೆ ತಕ್ಕ ಪಾಯು । ಕಾಣಿಸುವೆನು ಪೋಗಿ ಬೇಗ । ಏಣಧರನ ಕೇಳ್ವೆನೆಂದು। ತಾನೆ ರಜತಗಿರಿಗೆ ಬಂದ ॥ ೩ ॥

ರಾಗ- ಕೇದಾರಗೌಳ ತಾಳ -ಅಷ್ಟ

ಧವಳ ಪರ್ವತದೊಳು ಶಿವನಿರುತಿರೆ ಭೂತ । ನಿಹವದ ಮಧ್ಯದೊಳು ॥ ಭುವಿಯೊಳು ಧ್ಯಾನಿಪ ಶರಣರ ಪಾಲಿಪ । ಹವಣದ ಚಿತ್ತದೊಳು ॥ ೧ ॥ ವಂದಿಸಿ ಪೇಳ್ದ ಕೃತಾಂತ ನೀ ಪರಿಯಿದು । ಚಂದವೆ ಮಹದೇವನೆ ॥ ಮುಂದೆನ್ನ ನೇಮವನೆಂತು ಪಾಲಿಸಬೇಕು । ಇಂದು ನೀ ಪೇಳದನೆ ॥ ೨ ॥ ಏನಾಯ್ತು ಯಮಧರ್ಮ ರಾಯ ನಿನ್ನಯ ಕಾರ್ಯ । ಕೇನಡ್ಡಿ ಬಂತೀಗಳು ॥ ಮಾನಸದೊಳಗಿಂಥ ದುಗುಡವೇತಕೆ ನಮ್ಮೊ । ಳೇನುಂಟು ದೋಷಗಳು ॥ ೩ ॥ ವಿಧಿಯ ಸಂಕಲ್ಪದಿ ರತ್ನಾಂಗದನಿಗಾಯ್ತು । ಹದಿನಾರು ವರ್ಷಗಳು । ಒದಗನೆಮ್ಮವರಿಗೆ ನಿನ್ನಯ

ಜಪದುರಿ । ಬೆದರಿಸಿತಂತೆ ಕೇಳು ॥ ೪ ॥

**ತಾಳ–ಏಕ**

ಭಕ್ತಿ ಮಾರ್ಗದಿಂದ ದೇಹ । ಮುಕ್ತಿ ಬಯಸಿದವರು ವಿಧಿಯ । ಯುಕ್ತಿ ಮೀರ ಬಲ್ಲರೆಂಬ । ಉಕ್ತಿ ಮರೆತೆಯಾ ॥ ೧ ॥ ಹರನೆ ನೀನೆ ಹೊಣೆಯು ಎಂಬುದರಿತು ಬಂದೆ ಎನ್ನ ಕ್ರಮವು । ಮರಣ ಒದಗಿ ಬಂದ ನರನ । ಪುರಕೆ ತರುವದು ॥ ೨ ॥ ಶರಣರನ್ನು ಪೊರೆಯದಿರಲು । ಕೊರತೆ ನಮ್ಮ ಪದವಿಗುಂಟು । ಅರಿತು ಮನದಿ ರತ್ನಾಂಗದನ । ಪೊರೆಯೆ ಬಯಸಿದೆ ॥ ೩ ॥ ಕನಕನಯನೆಯೋಲೆ ಭಾಗ್ಯ । ಘನತೆಯಿಂದಲುಳಿದ ನೃಪನ । ತನುಜನವನ ಭಕ್ತಿಯುಳಿಸಿ । ತೆನುವದೇ ಸರಿ ॥ ೪ ॥ ಇಂದುಧರನೆ ನಿನ್ನ ಶರಣ । ವೃಂದದವರ ವೈರವೆನಗಿ । ತಿಂದು ಪೇಳಿ ಕೈಯ್ಯ ಮುಗಿದು । ಎಂದನಂತಕಾ ॥ ೫ ॥

**ರಾಗ ಮಧ್ಯಮಾವತಿ** **ತ್ರಿವುಡೆ ತಾಳ**

ಧರಣಿಪಾಲಕ ತುಂಗಕೇತ । ಸರಿಸಕ್ಕೈದಲು ಕುಂಭ ಸಂಭವ । ಭರದಿ ಪೂಜಿಸಿ ಸತ್ಕರಿಸಲೀ । ತೊರೆದ ನವಗೇ ॥ ೧ ॥ ನಿನ್ನ ಸುತ ಮೃತ್ಯುವನು ಜೈಸಿದ । ಇನ್ನು ಭಯ ಬಿಡು ಶಿವನ ದಯದೊಳು । ಉನ್ನತಿಯು ನಿನಗಾಯಿತೆಲೆ ಸಂ । ಪನ್ನ ಕೇಳು ॥ ೨ ॥ ಯಶವಬಯಸಿದೆ ನೀನು ಅದರಿಂ । ಕುಶಲ ನಿನಗಾಯ್ತಯ್ಯ ಮತ್ತೀ ರಸೆಯೊಳಲೆಸುಖದಿಂದ ರಾಜಿಸು । ವಸುಧೆ ಪಾಲಾ ॥ ೩ ॥ ಎಂದು ಹರಸುತ್ತ ತೆರಳಲು । ಚಂದದಿಂದಾ ತುಂಗಕೇತನು । ಬಂಧುಗಳ ಸಹಿತಿರ್ದೆ ಶಿವಕೃಪೆಯಿಂದ ನಲಿದು ॥ ೪ ॥

**ಭಾಮಿನಿ**

ಚಾರು ರತ್ನಾಂಗದ ಚರಿತ್ರೆಯ । ಸಾರವಿದನರಿತೆಕ್ಷಗಾನದಿ । ಸಾರಿದೆನು ಕನ್ನಡದಿ ಪ್ರೌಢಿಮೆಯಿಲ್ಲ ಕೈಂಕರ್ಯಾ ॥ ಭೂರಿ ಪ್ರಾಜ್ಞರು ತಿದ್ದಿ ಹಂಸ । ಕ್ಷೀರ ನ್ಯಾಯದಿ ಮೆರೆಸುವದು ಶ್ರೀ । ಶಾರದಾಂಬೆಯ ಪದವ ದಯದೊಳು ಬರೆದೆ ನೀ ಕೃತಿಯಾ ॥ ೨ ॥

**ತಾಳ–ಝಂಪೆ**

ಸೋಮಶೇಖರ ರುಂಡ ಮಾಲ ಶಂಕರದೇವ । ಕಾಮಿತಾರ್ಥವ ನೀವ ಕಾಮ ಹರನೇ ॥ ಹೈಮವತಿಧವನೆಸು ತ್ರಾಮ ವಂದಿತ ದವನೆ । ನೀ ಮುದದಿ ನೀಡು ಸನ್ಮಂಗಳವನೇ ॥ ಜಯ ಮಂಗಳಂ ನಿತ್ಯ ಶುಭ ಮಂಗಳಂ ॥ ೧ ॥

॥ ಮಂಗಳಂ ॥



ಸಂಭ್ರಮಗಳು, ಉತ್ಸವಗಳು, ಪ್ರದರ್ಶನಗಳು ಇರುವಂತೆಯೇ ತರಬೇತಿಗಳು, ಕಮ್ಮಟಗಳು, ವಿಚಾರಸಂಕಿರಣಗಳು, ಮುದ್ರಣ-ಪ್ರಕಾಶನಗಳೂ, ದಾಖಲಾತಿ ಕಾರ್ಯಗಳೂ ನಡೆದಿರುತ್ತವೆ. ಇವುಗಳಡಿಯಲ್ಲಿ ಹಸ್ತಪ್ರತಿರೂಪದ ಯಕ್ಷಗಾನ ಬಯಲಾಟಗಳ ಪ್ರಸಂಗ ಪಠ್ಯಗಳ ಮುದ್ರಣ ಪ್ರಕಾಶನಗಳೂ ಪಾಲು ಪಡೆದಿವೆ.

ಈ ಬಾರಿ ನಮ್ಮ ಅಕಾಡೆಮಿಯು ಯಕ್ಷಗಾನ ಹಾಗೂ ಬಯಲಾಟ ಕ್ಷೇತ್ರಗಳಿಂದ ಸುಮಾರು 30-35 ಪ್ರಸಂಗಗಳನ್ನು ತಜ್ಞರ ಸಮಿತಿಯ ಮೂಲಕ ಆಯ್ಕೆಮಾಡಿ ಮುದ್ರಿಸಿ ಪ್ರಕಟಿಸುತ್ತಿದ್ದೇವೆ.

ಇಲ್ಲಿ ಯಕ್ಷಗಾನ ಕ್ಷೇತ್ರದ ಶ್ರೇಷ್ಠ ಗುರುಗಳೆಂದು ಪರಿಗಣಿತರಾಗಿರುವ ಹಾಗೂ ಅತಿ ಹೆಚ್ಚು ಪ್ರಸಂಗಗಳನ್ನು ರಚಿಸಿರುವ, ಪಾರ್ತಿಸುಬ್ಬ ಪ್ರಶಸ್ತಿಗೂ ಪಾತ್ರರಾಗಿರುವ ಶ್ರೀ ಹೊಸ್ತೋಟ ಮಂಜುನಾಥ ಭಾಗವತರ 5 ಆಖ್ಯಾನಗಳನ್ನೊಳಗೊಂಡ ಮೂರು ಪ್ರಸಂಗಗಳ ಒಂದು ಸಂಕಲನವಿದೆ.

-ಅಧ್ಯಕ್ಷರ ನುಡಿಯಿಂದ